ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 26 ಸಂಚಿಕೆ 5 ಫೆಬ್ರವರಿ 01, 2004 ಬೆಲೆ ರೂ. 3.00



ಇನ್ನೊಂದು ಜಗತ್ತು
ಅದು ಸಮಾಜವಾದಿ ಜಗತ್ತು

WSF ಮಹಾಮೇಳ
ಹೋರಾಟಗಳ ಸಾಗರಸಂಗಮ



ಭಾಷಾವಾರು ಪ್ರಾಂತ್ಯಗಳ ಉಳಿವು ಹೇಗೆ?



ಅನಂತಕುಮಾರ ತೆಲಗಿ ಸಹೋದರ
14,500 ಕೋಟಿ ರೂಗಳ ಅವ್ಯವಹಾರ!

- ಉಡುಪಿ : ಹಿಂದೂ ಸಮಾಜೋತ್ಸವದ ಉನ್ಮಾದ!
- ಅಧಿಕಾರ ವಿಕೇಂದ್ರಿಕರಣ ಮತ್ತು ಕಾಂಗ್ರೆಸ್
- ಕರಾವಳಿ ಉತ್ಸವವೋ... ಕಾಂಗ್ರೆಸ್ ಉತ್ಸವವೋ ?



ಅಮೇರಿಕದ ಪ್ರಸಿದ್ಧ ಪತ್ರಕರ್ತೆ ಮಾರ್ಗರೇಟ್ ಬರ್ಕ್‌ವೈಟ್ ರವರ 'ಬರ್ಕ್‌ವೈಟ್ ಕಂಡ ಭಾರತ'ದ ಕೃತಿಯಿಂದ ಆಯ್ದ ಮಹತ್ವದ ಬರಹವನ್ನು ಈಗಾಗಲೇ ಓದುತ್ತಾ ಬಂದಿದ್ದೀರಿ. ಗಾಂಧಿ, ಬಿರ್ಲಾರ ಸಂಬಂಧ, ಆ ಬಗ್ಗೆ ಕಾರ್ಮಿಕರ ದೃಷ್ಟಿಕೋನ ಕುರಿತು ಆಸಕ್ತಿಕರ ಅಂಶಗಳನ್ನು ಕಳೆದ ವಾರ ನೀಡಲಾಗಿದ್ದು ಅದರ ಮುಂದುವರಿಭಾಗವಿಲ್ಲಿದೆ.


ಅನುವಾದಕ್ಕೆ ಒತ್ತಾಸೆ ಪಿ.ಲಂಕೇಶ್
ಕನ್ನಡಕ್ಕೆ ಅನುವಾದ ಖ್ಯಾತ ಜಾನಪದ ತಜ್ಞೆ, ಲೇಖಕಿ ಡಾ. ಕೆ.ಆರ್.ಸಂಧ್ಯಾರೆಡ್ಡಿಯವರು

ನಾನಿನ್ನೂ ನೋಡಿರಲಿಲ್ಲ. ಅವರು ಕರೆದುಕೊಂಡು ಹೋದ ಜಾಗ ವಿಚಿತ್ರವಾಗಿತ್ತು. ಆ ಗೂಡುಗಳು ಇದಕ್ಕಿಂತ ಸರಳವಾಗಿರಲು ಸಾಧ್ಯವೇ ಇಲ್ಲ ಎನ್ನುವಷ್ಟು ಸರಳವಾಗಿದ್ದವು. ಒಂದು ವಿಶಾಲವಾದ ಕೋಣೆಯೊಳಗೆ ಸಮಾನಾಂತರವಾಗಿ ಕಟ್ಟಿದ ಉದ್ದನೆಯ ಸಾಲುಸಾಲು ಗೂಡುಗಳು, ಒಂದೇ ಗೋಡೆಯ ಎರಡೂ ಬದಿಗಳಲ್ಲಿ ಒಂದೇ ರೀತಿಯ ಸಣ್ಣ ಸಣ್ಣ ಬಿಲದಂತಹ ಗೂಡುಗಳು ಇಂತಹ ಒಂದು ಕೋಣೆಯೊಳಗೆ ರಾಮದಾಸ್ ನನ್ನನ್ನು ಕರೆದುಕೊಂಡು ಹೋದ. ಅದರ ಅಳತೆ ಸುಮಾರು 9 X12 ಅಡಿ ಇರಬಹುದು. ಆ ಕೋಣೆಗೆ ಒಂದೇ ಒಂದು ಸಣ್ಣ ಕಿಟಕಿ. ಸ್ವಲ್ಪ ಹೊತ್ತೇರಿದ ನಂತರ ಅದರ ಮೂಲಕ ಸ್ವಲ್ಪ ಬೆಳಕು ಇಣುಕುತ್ತಿರಬಹುದು. ನೆಲದ ಮೇಲೆ ಒತ್ತೊತ್ತಾಗಿ ಮೇಲಿಟ್ಟರು. ಮಲಗಿದ್ದವರೆಲ್ಲ ಪೂರ್ತಿಯಾಗಿ ಎದ್ದು ತಮ್ಮ ಅನಿಸಿಕೆಗಳನ್ನು ಹೇಳತೊಡಗಿದರು. "ನೋಡಿ, ನಾವು ಒಟ್ಟಿಗೆ ಕೂರುವಷ್ಟು ಜಾಗವಿಲ್ಲ. ಮಲಗಲು ಹೇಗೆ ಜಾಗ ಆಗುತ್ತೆ ಮಿಲ್‌ನಲ್ಲಿ ಮೂರು ಶಿಫ್ಟ್ ಇರುವುದರಿಂದ ಇಷ್ಟಾದರೂ ಆಗುತ್ತದೆ. ಕೆಲವರು ಶಿಫ್ಟ್‌ನಲ್ಲಿದ್ದಾಗ ಉಳಿದವರು ಮಲಗುತ್ತಾರೆ. ನಮಗೆ ರಜೆ ಸಿಗುವುದೂ ಕಷ್ಟ. ನಾವೆಲ್ಲ ಒಟ್ಟಿಗೆ ಸೇರುವುದಕ್ಕೂ ಅವಕಾಶವಿಲ್ಲ". ನೀವು ರಜಾದಿನ ಏನು ಮಾಡುತ್ತೀರಿ ಎಂದು ಸುಮಾರು 14 ವರ್ಷವಿರಬಹುದಾದ ಒಬ್ಬ ಹುಡುಗನನ್ನು ಕೇಳಿದೆ. ಜಮುನಾದಾಸ್ ಎಂಬ ಹೆಸರಿನ ಆ ಹುಡುಗ ನನ್ನ ಪ್ರಶ್ನೆಗೆ ಉತ್ತರಿಸಲು ತೀರ ನಾಚಿಕೊಂಡು ಬರಿಗಾಲಿನಿಂದ ನೆಲ ಕೆರೆಯುತ್ತ ನಿಂತ. ನಾನು ಬಿಡಲಿಲ್ಲ. ನನಗೆ ತಿಳಿದು

ಗಾಂಧಿ - ಬಿರ್ಲಾ ಮತ್ತು ಕಾರ್ಮಿಕರು

ಅವರ ಮಾತು ಇಲ್ಲಿಂದ ಸಂಬಳಭತ್ಯೆಗಳ ಕಡೆಗೆ ಹರಿಯಿತು. ತುಟ್ಟಿಭತ್ಯೆ, ಜೀವನವೆಚ್ಚ, ಇತ್ಯಾದಿಯಾಗಿ ಅವರು ಪಡೆಯುವುದಕ್ಕೂ ಭಯಾನಕವಾಗಿ ಏರುತ್ತಿದ್ದ ಬೆಲೆಗಳಿಗೂ ತಾಳೆ ಇರಲಿಲ್ಲ. ಯುದ್ಧದ ವರ್ಷಗಳಲ್ಲಿ ಜವಳಿ ಕೈಗಾರಿಕೆ ಉತ್ತುಂಗ ಸ್ಥಿತಿಯಲ್ಲಿದ್ದಾಗ ಅವರಿಗೆ ಶೇಕಡಾ 50 ರಷ್ಟು ತುಟ್ಟಿಭತ್ಯೆಯ ಹೆಚ್ಚಳ ಸಿಕ್ಕಿತ್ತು. ಆದರೆ ಅದೇ ಅವಧಿಯಲ್ಲಿ ಬೆಲೆಗಳು ಶೇಕಡಾ 300 ಏರಿದ್ದವು. ಮತ್ತು ಈ ಮೂರುಪಟ್ಟಿನ ಏರಿಕೆಯೂ ಸಹ ಸರ್ಕಾರದ ಸೂಚಿಯಲ್ಲಿ ಪ್ರಕಟಿಸಲಾಗಿದ್ದ 'ನಿಯಂತ್ರಣ' ಬೆಲೆಗಳಿಗೆ ಮಾತ್ರ ಅನ್ವಯಿಸುತ್ತಿತ್ತು. ಇದರಲ್ಲಿ ಕಾಳಸಂತೆಯ ಬೆಲೆಗಳು ಸೇರದಿದ್ದುದು ಸಹಜ. ಈಗ ಬೆಲೆಗಳ ನಿಯಂತ್ರಣ ತೆಗೆದುಹಾಕುವ ಎಲ್ಲ ಸಾಧ್ಯತೆಯೂ ಇತ್ತು. ಹಿಟ್ಟು ಮತ್ತು ಸಕ್ಕರೆ ಮೊದಲಾದವುಗಳ ನಿಯಂತ್ರಣ ತೆಗದುಹಾಕುವ ಬಗ್ಗೆ ಪತ್ರಿಕೆಗಳು ತೀವ್ರವಾಗಿ ಪ್ರತಿಭಟಿಸಿದ್ದವು. ಮುಖ್ಯವಾಗಿ ಬಿರ್ಲಾ ಮಾಲಿಕತ್ವದ ವೃತ್ತ ಪತ್ರಿಕೆಗಳು ಹಾಗೂ ಗಾಂಧೀಜಿಯವರೇ ಪ್ರಕಟಿಸುತ್ತಿದ್ದ ಹರಿಜನ ಪತ್ರಿಕೆ ಕೂಡ ಉಸಿರುಕಟ್ಟಿಸುವಂತಿದ್ದವು. ಸಾಮಾನ್ಯ ಜನರಿಗೆ ಅಗತ್ಯವಾದ ವಸ್ತುಗಳು, ಸ್ವತಃ ಗಿರಣಿ ಕಾರ್ಮಿಕರೇ ನೂಲು ತೆಗೆದು ನೇಯ್ದ ಹತ್ತಿ ಬಟ್ಟೆಗಳೂ ಸಹ ಕಾಳಸಂತೆಯಲ್ಲಿ ಮಾಯವಾಗಿ ಹೊಸ ಬೆಲೆಯೊಂದಿಗೆ ಕಾಣಿಸಿಕೊಳ್ಳುತ್ತಿದ್ದವು. ಆ ಬೆಲೆಗೆ ಕೊಂಡುಕೊಳ್ಳುವ ಸಾಮರ್ಥ್ಯ ಶ್ರೀಮಂತರಿಗೆ ಮಾತ್ರ ಸಾಧ್ಯವಿತ್ತು. "ನಾವು ಅಷ್ಟೆಲ್ಲ ನೇಯ್ದ ಸಾವಿರಾರು ಗಜ ಬಟ್ಟೆ ಎಲ್ಲಿಗೆ ಹೋಗುತ್ತೆ? ನಮ್ಮ ಇಡೀ ಜೀವಮಾನದಲ್ಲಿ ಒಂದು ಶರ್ಟೇ ಗತಿ" ಎಂದು ಒಬ್ಬ ಹೇಳಿದ.

ನಾವು ಎಷ್ಟು ಹೊತ್ತು ಮಾತಾಡಿದ್ದೇವೆಂದರೆ ಸೂರ್ಯ ಮುಳುಗಿದ್ದೇ ಗೊತ್ತಾಗಿರಲಿಲ್ಲ. ನನಗೆ ಇದ್ದಕ್ಕಿದ್ದಂತೆ ಛಳಿಯಾಗ ತೊಡಗಿದಾಗ ಅದು ನನ್ನ ಅರಿವಿಗೆ ಬಂತು. ಭಾರತದಲ್ಲಿ ಬಿರುಬಿಸಿಲಿನ ಹಗಲು ಕಳೆದು ಸೂರ್ಯ ಮುಳುಗುತ್ತಿದ್ದಂತೆ ಅದೆಲ್ಲಿಂದ ಇಷ್ಟು ಛಳಿ ನುಗ್ಗುತ್ತದೋ! ಈ ಹವಮಾನದ ವ್ಯತ್ಯಾಸಕ್ಕೆ ನನಗೆ ಇದುವರೆಗೆ ಹೊಂದಿಕೊಳ್ಳಲಾಗಿರಲಿಲ್ಲ. ಛಳಿಯನ್ನು ತಾಳಲಾರದೆ ನಾನು ಹೊರಡೋಣ ಎಂದು ಹೊರಟಾಗ ನೀವು ಇನ್ನೊಂದು ಜಾಗವನ್ನು ನೋಡಬೇಕು ಎಂದು ಅವರು ಕೇಳಿಕೊಂಡರು. ಬಸ್ತಿಗಳಲ್ಲಿ ಅವಕಾಶಕ್ಕಿಂತ ಹೆಚ್ಚು ಜನ ಇದ್ದರೂ ಅವರವರು ಅವರ ಕುಟುಂಬಗಳೊಂದಿಗೆ ವಾಸಿಸುವಷ್ಟು ಸ್ಥಳಾವಕಾಶವಾದರು ಇರುತ್ತಿತ್ತು. ಆದರೆ ಇದಕ್ಕಿಂತ ಹೆಚ್ಚು ಟಿಪಿಕಲ್ ಆದ ಮನೆಗಳನ್ನು



ಸುರಳಿ ಸುತ್ತಿಕೊಂಡಂತೆ ಬಿದ್ದಿದ್ದ ಆಕೃತಿಗಳೆಲ್ಲ ಮಲಗಿದ್ದ ಮನುಷ್ಯರವು ಎಂದು ತಕ್ಷಣ ಗುರುತಿಸುವುದು ನನಗೆ ಸಾಧ್ಯವಾಗಲಿಲ್ಲ. ಒಂದೊಂದು ಕೋಣೆಯಲ್ಲಿ ಇಪ್ಪತ್ತೈದು ಜನ ಇರುತ್ತಾರೆ ಎಂದು ರಾಮದಾಸ್ ಹೇಳಿದ. ಆತನ ದನಿ ಕೇಳಿ ಮಲಗಿದ್ದ ಕೆಲವು ಆಕೃತಿಗಳು ಮಿಸುಕಾಡಿದವು. ಕೆಲವು ಎದ್ದು ಕುಳಿತವು. ಇವರೆಲ್ಲರೂ ನೇಕಾರರೇ. ಅವರಿಗೆ ತಿಂಗಳಿಗೆ ಸರಾಸರಿ 35 ರೂಪಾಯಿಯ ಸಂಬಳ. ಜೊತೆಗೆ ತುಟ್ಟಿಭತ್ಯೆ ಸೇರಿದರೆ 44 ರೂಪಾಯಿ. ಅವರು ಮಲಗುತ್ತಿದ್ದ ಈ ನೆಲದ ತುಣುಕಿಗೆ ಬಾಡಿಗೆ ಕೊಡಬೇಕಿತ್ತು. ವಾರಕ್ಕೆ ತಲಾ ಎರಡು ರೂಪಾಯಿ 12 ಆಣೆ. ಮೊದಲ ನೋಟಕ್ಕೆ ಈ ಬಾಡಿಗೆ ನ್ಯಾಯಸಮ್ಮತವಾಗಿದೆ ಅನ್ನಿಸಿತು. ಇದರಿಂದ ಮಾಲಿಕನಿಗೆ ಎಷ್ಟು ಸಿಗುತ್ತದೆ ಎಂದು ಲೆಕ್ಕಹಾಕಿದೆ. ಇಲ್ಲಿ ನೀರು, ಲೈಟು ಒಲೆ ಮೊದಲಾದ ಯಾವ ಅನುಕೂಲವೂ ಇರಲಿಲ್ಲ. ಪ್ರತ್ಯೇಕ ಕಕ್ಕಸೂ ಇರಲಿಲ್ಲ. ಇಷ್ಟು ಸ್ಥಳಾವಕಾಶಕ್ಕೆ ಕಂಪನಿಯು ತಿಂಗಳಿಗೆ 25 ಪೌಂಡುಗಳಿಗೆ ಸಮನಾದ ಬಾಡಿಗೆಯನ್ನು ವಸೂಲು ಮಾಡುತ್ತಿತ್ತು. ಯಾರೋ ಒಬ್ಬರು ಒಂದೇ ಒಂದು ಕ್ಯಾಂಡಲ್ ಹಚ್ಚಿ

ಬಂದ ಪ್ರಕಾರ ರಜಾದಿನಗಳಲ್ಲೂ ಈ ಹುಡುಗರು ಆಟ ಆಡುತ್ತಿರಲಿಲ್ಲ. ಭಾನುವಾರ ಮತ್ತು ಇತರ ಯಾವುದಾದರೂ ರಜಾದಿನಗಳಲ್ಲಿ ಅವರು ಬಟ್ಟೆ ಒಗೆದುಕೊಳ್ಳುತ್ತಿದ್ದರು. ಜಮುನಾದಾಸ್, ತಾನು ಒಂದೆರಡು ವರ್ಷ ಶಾಲೆಗೆ ಹೋಗಿದ್ದೆ ಎಂದು ಹೇಳುವಾಗ ಅವನ ಕಾಂತಿಹೀನ ಕಣ್ಣುಗಳಲ್ಲಿ ಲವಲವಿಕೆಯ ಬೆಳಕು ಚಿಮ್ಮಿತು. ಅವನು ಆಟ ಆಡುವುದನ್ನು ನಿಲ್ಲಿಸಿ ಎಷ್ಟು ದಿನಗಳಾಗಿದ್ದವೋ. ಇವನಿಗಿಂತ ಚಿಕ್ಕ ಹುಡುಗರೂ ಕೂಡ ಈ ಮಿಲ್ಲಿನಲ್ಲಿ ಎಂಟು ಗಂಟೆಗಳ ಕಾಲ ದುಡಿಯುತ್ತಾರೆ ಎಂದು ಕೆಲವರು ಹೇಳಿದರು. ಆಹಾರ ಪದಾರ್ಥಗಳೆಲ್ಲ ತುಟ್ಟಿ.

(ಮುಂದುವರಿಯುವುದು)

ಪುಸ್ತಕಕ್ಕಾಗಿ ಇಲ್ಲಿ ವಿಚಾರಿಸಿ, ಖರಿದೀಸಿ 'ಬರ್ಕ್‌ವೈಟ್ ಕಂಡ ಭಾರತ' ದ ಆಯ್ದ ಕೆಲ ಅಧ್ಯಯನಗಳನ್ನು ಓದಿದ ಪತ್ರಿಕೆಯ ಓದುಗರಿಂದ ಅಭೂತಪೂರ್ವ ಸ್ಪಂದನೆ ದೊರೆತಿದೆ. ಈ ಪುಸ್ತಕವನ್ನು ಇಡಿಯಾಗಿ ಓದುವ ಬಯಕೆ ಹಲವಾರು ಓದುಗರದ್ದು. ಹಾಗಾಗಿ ಈ ಪುಸ್ತಕ ಎಲ್ಲಿ ಸಿಗುತ್ತದೆಂದು ಮಾಹಿತಿ ವಿಚಾರಿಸಿದ್ದಾರೆ. ಇದರ ಪ್ರಕಾಶಕರು
ಕನ್ನಡ ಅಭಿವೃದ್ಧಿ ಪ್ರಾಧಿಕಾರ
ಕನ್ನಡ ಭವನ, ರವೀಂದ್ರ ಕಲಾಕ್ಷೇತ್ರ, ಬೆಂಗಳೂರು
ಬೆಲೆ ರೂ. 50/-

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

- **ಜನವರಿ 30, 2004**
  ಕಾರ್ಮಿಕ ಸಂಘಗಳ ಜಂಟಿ ಸಮಿತಿ (ಜೆಸಿಟಿಯು)
  ಮುಷ್ಕರದ ಹಕ್ಕಿಗಾಗಿ ಸಮಾವೇಶ
  ಎನ್.ಜಿ.ಓ ಹಾಲ್ ಬೆಂಗಳೂರು
  ಮಧ್ಯಾಹ್ನ 3 ಗಂಟೆಗೆ
- **ಫೆಬ್ರುವರಿ 1 ರಿಂದ 15, 2004**
  ಬಡಜನರಿಗೆ ಕಡಿಮೆ ದರದಲ್ಲಿ ರೇಷನ್‌ಗಾಗಿ ಕೋಮುವಾದ, ಜಾಗತೀಕರಣದ ವಿರುದ್ಧ ಸಿಪಿಐ(ಎಂ) ಪ್ರಚಾರಾಂದೋಲನ
- **ಫೆಬ್ರವರಿ 2, 2004**
  ಕರ್ನಾಟಕ ರಾಜ್ಯ ಸಾಕ್ಷರತಾ ಪ್ರೇರಕರ ಸಂಘ ಮತ್ತು ಡಿವೈಎಫ್ಐ ರಾಜ್ಯಮಟ್ಟದ ಸಮಾವೇಶ - ಬೆಳಿಗ್ಗೆ 10-30 ಕ್ಕೆ
  ಟೌನ್‌ಹಾಲ್ - ಬೆಂಗಳೂರು
- **ಫೆಬ್ರವರಿ 4,5, 2004**
  ಸಿಐಟಿಯು ಬೆಳಗಾಂ ಜಿಲ್ಲಾ ಸಮ್ಮೇಳನ
  ಕನ್ನಡ ಮತ್ತು ಸಂಸತಿ ಭವನ, ರಾಣಿ ಚೆನ್ನಮ್ಮ ವೃತ್ತ, ಬೆಳಗಾಂ
  ಉದ್ಘಾಟನೆ : ಕಾಂ. ಎಂ.ಕೆ.ಪಂಧೆ
  ಸಿಐಟಿಯು ಅಖಿಲ ಭಾರತ ಅಧ್ಯಕ್ಷರು
- **ಫೆಬ್ರುವರಿ 24, 2004**
  ಮುಷ್ಕರದ ಹಕ್ಕಿಗಾಗಿ ದೇಶದಾದ್ಯಂತ ಮುಷ್ಕರ

ಐಕ್ಯರಂಗ
4 ದಶಕಗಳ ಹಿಂದೆ

ಕಾಂಗ್ರೆಸ್ 'ಫ್ಯಾಸಿಸ್ಟ್' ದುರಾಡಳಿತೆಯ ಇನ್ನೊಂದು ಮೈಲುಗಲ್ಲು ಹದಿನಾರನೇ ಪ್ರಜಾಪ್ರಭುತ್ವ ದಿನ!

26 ಜನವರಿ 1965 ರಂದು ಭಾರತ ಇಂಡಿಯಾ - ದೇಶ 16ನೇ ಪ್ರಜಾಪ್ರಬುತ್ವ ದಿನವನ್ನು ಆಚರಿಸಿತು.

ವಾಡಿಕೆಯ ಕಾಂಗ್ರೆಸ್ ಭಾಷಣಗಳು ದೇಶಾದ್ಯಂತ ಕೇಳಿಬಂದುವು. ಹದಿನೇಳು ವರ್ಷಗಳ 'ಸ್ವಾತಂತ್ರ್ಯ'ದ ಮಾದರಿಯ ಫ್ಯಾಸಿಸ್ಟ್ 'ಪ್ರಜಾಪ್ರಭುತ್ವ'ದ ಕಾಲಾವಧಿಯಲ್ಲಿ ಕಾಂಗ್ರೆಸ್ ಆಳುವ ವರ್ಗ ಸಾಧಿಸಿದ 'ಮಹಾ ಸಾಧನೆ'ಗಳನ್ನು ಹಳ್ಳಿಯಿಂದ ಡಿಲ್ಲಿಯವರೆಗಿನ ಕಾಂಗ್ರೆಸ್ 'ನೇತಾ'ಗಳು ಹಾಡಿ ಹೊಗಳಿದುದನ್ನು ಇಂದು ಅರೆ ಹೊಟ್ಟೆಗೂ ಸಿಗದೆ ಉಪವಾಸ ಬೀಳುತ್ತಿರುವ ಭಾರತದ 44 ಕೋಟಿ ಜನತೆ ಆಲಿಸಿ ಕೇಳಿತು!

★

ಮದ್ರಾಸು ರಾಜ್ಯದಲ್ಲಿ ವಿದ್ಯಾರ್ಥಿಗಳ ಮೇಲೆ ಪೋಲೀಸರು ಗೋಳಿಬಾರು- ಹಿಂದೀ ವಿರೋಧಿಗಳಿಬ್ಬರ ಪ್ರಾಣಾರ್ಪಣೆ

ಪ್ರಜಾಪ್ರಬುತ್ವ ದಿನದಂದು ಹಿಂದಿಯನ್ನು ಆಡಳಿತ ಭಾಷೆಯಾಗಿ ಬಳಕೆಗೆ ತಂದುದನ್ನು ಅನುಸರಿಸಿ ಮದ್ರಾಸು ರಾಜ್ಯಾದ್ಯಂತ ತೀವ್ರ ಹಿಂದೀ ವಿರೋಧಿ ಚಳುವಳಿಯು ಪ್ರಜಾಪ್ರಭುತ್ವ ದಿನದ ಹಿಂದಿನ ದಿನದಿಂದ ತೀವ್ರ ಗತಿಯಿಂದ ಆರಂಭವಾಗಿದೆ. ವಿದ್ಯಾರ್ಥಿಗಳ ಮೇಲೆ ಪೋಲೀಸು ಗೋಳಿಬಾರು, ಹಿಂದೀ ವಿರೋಧಿಗಳ ಆತ್ಮ ಬಲಿದಾನ,. ವಿದ್ಯಾರ್ಥಿಗಳ ಬೃಹತ್ ಪ್ರದರ್ಶನ ಮೆರವಣಿಗೆಗಳು ವಿದ್ಯಾರ್ಥಿಗಳು, ಹಾಗೂ ಡಿ.ಎಂ.ಕೆ.ನಾಯಕರ ಸಾಮೂಹಿಕ ಬಂಧನ ಇತ್ಯಾದಿಗಳಿಂದ ಹಿಂದೀ ವಿರೋಧಿ ಚಳುವಳಿಯೀಗ ರೌದ್ರ ರೂಪವನ್ನು ತಾಳಿದೆ.

★


ಗೃಹಮಂತ್ರಿ ನಂದಾರ ಪ್ರಜಾರಾಜ್ಯ

ನಮ್ಮ ದೇಶದ 15ನೇ ಪ್ರಜಾರಾಜ್ಯ ದಿನವನ್ನು ಅರೆಹೊಟ್ಟೆಯಲ್ಲಿರುವ ಜನತೆ ಎಲ್ಲೆಡೆಗಳಲ್ಲೂ ವಿಜೃಂಭಣೆಯಿಂದ ಆಚರಿಸಿತು. ಮದ್ರಾಸು ಮೊದಲಾದ ಕಡೆ ಹಿಂದಿಯನ್ನು ಸರಕಾರೀ ಭಾಷೆಯಾಗಿ ಜ್ಯಾರಿಗೊಳಿಸುವುದನ್ನು ಪ್ರತಿಭಟಿಸಿ ಡಿ.ಎಂ.ಕೆ.ಯ ಕರೆಯ ಮೇರೆಗೆ ಈ ದಿನವನ್ನು ಶೋಕ ದಿನವನ್ನಾಗಿ ಆಚರಿಸಲಾದರೂ, ಉಚಿದೆಡೆಗಳಲ್ಲಿ ಜನ ಪ್ರಜಾ ರಾಜ್ಯಕ್ಕುಚಿತವಾದ ಗೌರವದಿಂದಲೇ ಇದನ್ನಾಚರಿಸಿದ್ದಾರೆ.

★

ಅನಂತಕುಮಾರ-ತೆಲಗಿಯ ಸಹೋದರ!

ಬಿಜೆಪಿ ಕೂಟವೇ ಹಗರಣಗಳ ಆಗರ. ದೇಶಭಕ್ತಿ ನಟಿಸುವ ಈ ದ್ರೋಹಿಗಳು ಜನ ಅಧಿಕಾರ ನೀಡಿರುವುದು ದೇಶವನ್ನು ನುಣ್ಣಗೆ ಬೋಳಿಸಿ ನುಂಗಿ ನೀರು ಕುಡಿಯಲು ಎಂದೇ ಭಾವಿಸಿದಂತಿದೆ. ಅದರ ಒಂದು ಉದಾಹರಣೆ ಅನಂತಕುಮಾರನ ಸರ್ವಸಂಪನ್ನ ಗುಣದ ಅನಾವರಣ ಈ ಭ್ರಷ್ಟಾಚಾರದ ಹಗರಣ.



ಹೋದಲ್ಲೆಲ್ಲಾ ಭ್ರಷ್ಟಾಚಾರದ ವಿರುದ್ಧವೇ ಮಾತು. ಬರಿ ಮಾತಲ್ಲ - ರಾದ್ಧಾಂತ, ರಂಪಾಟ. ಭ್ರಷ್ಟಾಚಾರದ ಶಬ್ದ ಕೇಳಿದರೆ ಕಿಡಿ ಕಿಡಿ... ಇವರ ವಾದ-ವೈಖರಿ, ಮಾತನಾಡುವ ಪರಿ ನೋಡಿದವರಿಗೆ ಇವರೊಬ್ಬ ಸಂತ, ಸತ್ಯಸಂಧ, ಪ್ರಾಮಾಣಿಕತೆಯ ಮೂರ್ತಿವೆತ್ತ.. ಎನಿಸದಿದ್ದೀತೆ? ಹಾಗನ್ನಿಸಿದ್ದರೆ ನಿಮ್ಮ ರಾಷ್ಟ್ರ ನಿಷ್ಠೆಯೇ ಪ್ರಶ್ನಾರ್ಹ! ಇಂತಹ ಅಪ್ರತಿಮ 'ದೇಶಪ್ರೇಮಿ'ಯನ್ನು ದುರ್ಬೀನು ಹಾಕಿ ಹುಡುಕುವುದು ಬೇಕಿಲ್ಲ! ಯಾಕೆಂದರೆ ಈ ಮಹಾರಾಯ ಕಾಣಿಸಿಕೊಳ್ಳದ ಪೇಪರ್, ಟಿ.ವಿ.ಗಳಿಲ್ಲ. ಇನ್ನು ಬೆಂಗಳೂರು ದೂರದರ್ಶನವಂತೂ ಇವರ ಮುಖ ಮತ್ತಿತರೆ ತೋರಿಸದೇ ಕಾರ್ಯಕ್ರಮಗಳನ್ನೇ ಆರಂಭಿಸುವುದಿಲ್ಲ.

ಅಗ್ರಹಾರದ ಕಿಮ್ಮತ್ತು ಕೇಂದ್ರ ಸರ್ಕಾರದ ಅಧಿಕಾರದ ತಾಕತ್ತು, ರಾಷ್ಟ್ರ ನಾಯಕ 'ಬಾಸ್'ಗೆ ನಿಯತ್ತು, ಸಾರ್ವಜನಿಕವಾಗಿ ಸಾಚಾನಂತೆ ತೋರಿಸಿಕೊಂಡ ಹಕೀಕತ್ತು... ಮುಖ ಮುಚ್ಚಿಕೊಳ್ಳಲು ಖಾವಿ ಕಸರತ್ತು... ಇಷ್ಟಿದ್ದರೆ ಮುಂದಿನ ಮುಖ್ಯಮಂತ್ರಿ ತಾನೇ ಎಂದು ಭ್ರಮಿಸಿರುವ ಬಿಜೆಪಿ ಅಧ್ಯಕ್ಷ, ಮಾಜಿ ಸಚಿವ 'ಅನಂತ' ಕುಮಾರನ ಹಗರಣದ ಕಾಂಡವೀಗ ಸುಪ್ರೀಂ ಕೋರ್ಟ್‌ನಲ್ಲಿ ಅನಾವರಣಗೊಳ್ಳುತ್ತಿದೆ. ಇದು ಸಣ್ಣಪುಟ್ಟ ಹಣವಲ್ಲ, 'ಹುಡ್ಕೊ' ಸಂಸ್ಥೆಯ 14 ಸಾವಿರದ 500 ಕೋಟಿ ರೂಪಾಯಿಗಳನ್ನು ಎಲ್ಲಾ ನೀತಿ ನಿಯಮಗಳನ್ನು ಗಾಳಿಗೆ ತೂರಿ, ಅಕ್ರಮ ಅವ್ಯವಹಾರ ನಡೆಸಿ ಕೇಂದ್ರ ಸರ್ಕಾರದ ಬೊಕ್ಕಸಕ್ಕೆ ನಷ್ಟ ತಂದ ಭಾರಿ ಭ್ರಷ್ಟತೆಯ ಕತೆಯ ಕಂತುಗಳ ಪ್ರಕರಣವೇ ಇದಾಗಿದೆ. ಈತ ಕೇಂದ್ರದ ನಗರಾಭಿವೃದ್ಧಿ ಮತ್ತು ಬಡತನ ನಿರ್ಮೂಲನೆ ಮಂತ್ರಿಯಾಗಿರುವಾಗ ಯಾವ ನಗರ ಅಭಿವೃದ್ಧಿ ಹೊಂದಿತೊ ಇಲ್ಲವೋ - ಯಾರ ಬಡತನ ನಿವಾರಣೆಯಾಯಿತೋ ಆದರೆ ಅನಂತಕುಮಾರನ ಬಡತನ ನಿರ್ಮೂಲನೆಯಾಗಿ ಅಭಿವೃದ್ಧಿ ಕಂಡದ್ದಂತೂ ಸ್ಪಷ್ಟ ಗೋಚರ. ಈಗ ಅನಂತಕುಮಾರ - ನಕಲಿ ಸ್ಟಾಂಪ್ ಹಗರಣದ 'ತೆಲಗಿ ಸೋದರ'!.

'ಹುಡ್ಕೊ' ಸಂಸ್ಥೆ - ಗೃಹ ನಿರ್ಮಾಣದ - ಅದಕ್ಕಾಗಿ ಸಾಲ ಸೌಲಭ್ಯ ನೀಡುವ ಸರ್ಕಾರದ ಸಂಸ್ಥೆ. ಈ ಸಂಸ್ಥೆಯ ಒಟ್ಟು 14,500 ಕೋಟಿ ರೂಪಾಯಿಗಳನ್ನು ಅವ್ಯವಹಾರ - ಅಕ್ರಮಕ್ಕೆ ಬಳಸಿದ ಆರೋಪ ಅನಂತಕುಮಾರ ಮೇಲಿದೆ. ಅದರಲ್ಲಿ 1250 ಕೋಟಿ ರೂಪಾಯಿಗಳನ್ನು ಖಾಸಗಿ ಡಿಬೆಂಚರ್ ಚಂದಾ ಹಣವನ್ನಾಗಿ ಬಿಡುಗಡೆ ಮಾಡಲಾಗಿದೆ - ಯಾವುದೇ ಇಂತಹ ಸರ್ಕಾರಿ ಸಂಸ್ಥೆಯ ಹಣವನ್ನು ಹೀಗೆ ಖಾಸಗಿ ಸಂಸ್ಥೆಗಳಲ್ಲಿ ತೊಡಗಿಸಲು ಅವಕಾಶ ಇಲ್ಲ. ಅದು ನಿಯಮ ಬಾಹಿರ. ಆದರೆ ಹೇಗೆ ಮಾಡಿದರು ಕುಮಾರರು? ಖಾಸಗಿಯವರ ಲೂಟಿಯಲ್ಲಿ ಅನಂತ ಲಪಟಾಯಿಸಿದ್ದೆಷ್ಟು? ಹಾಗೇ 2002-03 ರ ಸಾಲಿನಲ್ಲಿ 550 ಕೋಟಿ ರೂಪಾಯಿಗಳನ್ನು ಒಂದೇ ದಿನದಲ್ಲಿ ಸಾಲ ನೀಡಲಾಗಿದೆ! ಅಂತೇ 5000 ಕೋಟಿ ರೂಪಾಯಿಗಳನ್ನು 35 ಕಂಪನಿಗಳಿಗೆ ಒಂದೇ ದಿನದಲ್ಲಿ ನಿಯಮ ಬಾಹಿರವಾಗಿ ಮಂಜೂರು ಮಾಡಿದ್ದಾರೆ. ಸಂಸ್ಥೆಯ ನಿಯಮಾವಳಿಯಂತೆ 11 ಮಂದಿ ನಿರ್ದೇಶಕರು ಅಂಗೀಕರಿಸಬೇಕಿದ್ದ ನಿರ್ಣಯವನ್ನು ಕೇವಲ ಮೂವರು ಅದೂ 'ಅರೆಕಾಲಿಕ' ನಿರ್ದೇಶಕರ ಸಮಕ್ಷಮದಲ್ಲಿ ಖಾಸಗಿ ಕಂಪನಿಗಳಿಗೆ ಮಂಜೂರಾತಿ ಮಾಡಿರುವುದು. ತನ್ನ ಕಛೇರಿ-ಓಡಾಟದ ಖರ್ಚುಗಳನ್ನೇ ಹುಡ್ಕೋದಿಂದ ಪಡೆಯಲಾಗಿದೆ. ಸರ್ಕಾರ, ಸಂಸ್ಥೆ, ಸಾರ್ವಜನಿಕ ಹಣವನ್ನು ಎಷ್ಟು ಅಳುಕಿಲ್ಲದೇ, ಎಗ್ಗಿಲ್ಲದೇ ಸ್ವಂತದ್ದೆಂಬಂತೆ ದುರುಪಯೋಗಪಡಿಸಿ ಕೊಂಡಿರುವುದು ನಿಜಕ್ಕೂ ಅನಂತಕುಮಾರನ ಭಂಡತನತೋರಿಸುತ್ತದೆ. ಇಂತಹ ಧೈರ್ಯ ವಿರಬೇಕಾದರೆ ಇದರ ಹಿಂದೆ ಫಲಾನುಭವಿ 'ಗಾಡ್ ಫಾದರ್' ಗಳು ಯಾರಾದರೂ ಇರಲೇಬೇಕು. ಅನಂತಕುಮಾರ ತಾನು ಅಡ್ವಾಣಿಯ ನಿಷ್ಠನೆಂದೂ, ಸರ್ಕಾರದಲ್ಲಿ ತಾನೊಬ್ಬ ಪವರ್‌ಫುಲ್ ಸಚಿವನೆಂದು ತೋರಿಸಿಕೊಂಡು ತಿರುಗುತ್ತಿದ್ದುದು ಬಿಡಿಸಲಾಗದ ಒಗಟೇನಲ್ಲ. ಹಾಗಾಗಿಯೇ ಪಕ್ಷದ ಅಧ್ಯಕ್ಷತೆ ಒಪ್ಪಬೇಕಾದರೆ ಸಚಿವ ಸ್ಥಾನವೂ ಇರಲೇಬೇಕೆಂದು ಕಾಡಿಬೇಡಿ ಅತ್ತಿದ್ದು ಇಂತಹ ದಗಲ್‌ಬಾಜಿ ಕೆಲಸಗಳಿಗೆ ಇರಬೇಕು.

ಸಂಘ ಪರಿವಾರದ ಮುದ್ದಿನ ಕುವರನ ಪ್ರತಾಪ, ಹಗರಣ ಇದೊಂದೇ ಅಲ್ಲ. ಕಳೆದ ಪಾರ್ಲಿಮೆಂಟ್ ಚುನಾವಣೆ ಘೋಷಿತವಾದಾಗಲೇ ವಿಮಾನಯಾನ ಸಚಿವರಾಗಿದ್ದಾಗ ತರಾತುರಿಯಲ್ಲಿ ಸುಮಾರು 300 ಕೋಟಿ ರೂನಷ್ಟು ವ್ಯವಹಾರ ನಡೆಸಿ ವಿಮಾನ ಖರೀದಿಸಿ ಕಮಿಷನ್ ಹೊಡೆದ ಹಗರಣ ಬಯಲಾಗಿತ್ತು. ದೇಶದ ಆಸ್ತಿಯಾದ ಅಶೋಕ ಹೋಟೆಲ್ ಮುಂತಾದವುಗಳನ್ನು ತೀರಾ ಅಗ್ಗದ ಬೆಲೆಗೆ ಖಾಸಗಿ ಧಣಿಗಳಿಗೆ ಮಾರಿದ್ದು ಹೋಟೆಲ್ ನಿಯಮ ಮೀರಿ ಸೌಲಭ್ಯ ಅನುಭವಿಸಿದ್ದು ಇನ್ನೂ ಹಸಿರಾಗೇ ಇದೆ. ಇವರೇ ವಿವಿಧ ಖಾಸಗಿ ಕಂಪನಿಗಳ ಪರ ವಕಾಲತ್ತು ವಹಿಸಿದ್ದು ಮತ್ತು ಮುಖ್ಯವಾಗಿ 'ಸರ್ವಗುಣ ಸಂಪನ್ನತೆ'ಗಳನ್ನು ಮಾಧ್ಯಮಗಳು ಬಹಿರಂಗಗೊಳಿಸಿದ್ದವು. ಇಷ್ಟು ಹೊರ ಬಂದರು ಮುತ್ಸದ್ದಿ ವಾಜಪೇಯಿಯಾಗಲೀ, 'ಉಕ್ಕಿನ' ಮಂತ್ರಿ ಅಡ್ವಾಣಿಯಾಗಲಿ, ಬಿಜೆಪಿ ನಾಯಕರಾಗಲಿ ಸತ್ಯಾಸತ್ಯತೆ ಜನರೆದುರು ತೆರೆದಿಡಲು ತನಿಖೆಗೆ ಆದೇಶಿಸಲಿಲ್ಲ. ಸಾವಿರಾರು ಕೋಟಿ ತಿಂದು ತೇಗಿದ ಭೂಪನನ್ನು ಪ್ರಶ್ನಿಸಲೂ ಇಲ್ಲ. ರಾಜ್ಯದಲ್ಲಿ ಗಂಟಲೊಡೆವಂತೆ ಕಿರಿಚಾಡುವ ಯಡಿಯೂರಪ್ಪ ನಂತಹವರು ಮಾಡಿದ್ದು ಮೈಸೂರು ಪೇಟದ ಸನ್ಮಾನ!

ಜನ ಅಧಿಕಾರ ಕೊಟ್ಟಿದ್ದು ಜನರಿಗಾಗಿ ಕೆಲಸ ಮಾಡಲಲ್ಲ, ನುಣ್ಣಗೇ ಇಡೀ ಭಾರತವನ್ನೇ ಬೋಳಿಸಿ, ನುಂಗಿ ನೀರು ಕುಡಿಯಲು ಎಂದೇ ಭಾವಿಸಿದ್ದಾರೆ ದೇಶದ್ರೋಹಿಗಳ ಈ ದಂಡು.

'ಹಾಗೆ ನೋಡಿದರೆ ಹಗರಣಗಳ ವೀರ ಕೇವಲ ಅನಂತಕುಮಾರನಷ್ಟೇ ಅಲ್ಲ, ಇಡೀ ಬಿಜೆಪಿ ಕೂಟವೇ ಹಿಂದಿನ ಎಲ್ಲಾ ಭ್ರಷ್ಟಾಚಾರಗಳ ದಾಖಲೆಯನ್ನೇ ಮೀರಿಸಿಬಿಟ್ಟಿದೆ. ಅತ್ಯಂತ ನೀಚ, ಭ್ರಷ್ಟ ಸರ್ಕಾರವೆಂಬುದನ್ನು ಹೆಜ್ಜೆ ಹೆಜ್ಜೆಗಳಲ್ಲಿಯೂ ಸಾಬೀತು ಪಡಿಸಿದೆ. ವಾಜಪೇಯಿ ಕೊರಳಿನ ಕೊಂಡಿಯಲ್ಲಿ ಅನಂತಕುಮಾರನೂ ಒಂದು 'ರತ್ನ'!

ಇಷ್ಟಾದರೂ ಕಿಂಚಿತ್ತೂ ಕ್ರಮವಹಿಸದ ವಾಜಪೇಯಿ ಸರ್ಕಾರವೂ ಇದರಲ್ಲಿ ದೋಷಿ, ಹಗರಣದಲ್ಲಿ ಭಾಗೀದಾರ. ಹಾಗೇ ನೋಡಿದರೆ ವಿಷಯ ಗಮನಕ್ಕೆ ಬಂದ ಕೂಡಲೇ ಹಗರಣವನ್ನು ತನಿಖೆಗೆ ಒಪ್ಪಿಸಿ ಶಿಕ್ಷಿಸಬೇಕಿತ್ತು. 'ನಿಸ್ವಾರ್ಥ' ಪ್ರಧಾನಿ ಹಾಗೆ ಮಾಡಲಿಲ್ಲ. ಕೊನೆಗೆ ಸಾರ್ವಜನಿಕರು ಈ ಪ್ರಕರಣವನ್ನು ನ್ಯಾಯಾಲಯಕ್ಕೆ ಒಯ್ಯಬೇಕಾಗಿ ಬಂತು. ನ್ಯಾಯಾಂಗ ಈಗ ಹಗರಣದ ಅನಂತನಿಗೆ ಸೇರಿ ಐದು ಜನರಿಗೆ ನೋಟೀಸ್ ಜಾರಿ ಮಾಡಿದೆ.

ಬಿಜೆಪಿ ಅಧ್ಯಕ್ಷರ ಕನಿಷ್ಠ ಅರ್ಹತೆ?


ಈ ತನಿಖೆ ಸಮಗ್ರವಾಗಿ - ಆಳವಾಗಿ ನಡೆಯಲೇಬೇಕು. ಎಲ್ಲಾ ದಾಖಲೆಗಳನ್ನು ಯಥಾ ರೀತಿಯಲ್ಲಿ ನ್ಯಾಯಾಲಯಕ್ಕೆ ಒಪ್ಪಿಸಬೇಕು. ಆ ಸಂಗತಿಗಳು ಸಾರ್ವಜನಿಕ ಗಮನಕ್ಕೆ ಬರಬೇಕು. ಈ ಬಗ್ಗೆ ರಾಜ್ಯ ಬಿಜೆಪಿ ಅಧ್ಯಕ್ಷ ಅನಂತ್ ಏನನ್ನುತ್ತಾರೆ? ತೆಹಲ್ಕಾ ಹಗರಣದಲ್ಲಿ ನೋಟಿನ ಕಂತೆಗಳನ್ನು ಪಡೆಯುತ್ತಾ ಡಾಲರ್ ಡಾಲರ್‌ನಲ್ಲಿ ಕೊಡಿ ಎಂದ ಬಿಜೆಪಿ ಅಧ್ಯಕ್ಷ ಬಂಗಾರು ಲಕ್ಷ್ಮಣ್‌ನಂತೆ ರಾಜಿನಾಮೆಯನ್ನಾದರೂ ನೀಡಿಯಾರೆ? ಅಥವಾ ಬಿಜೆಪಿ ಅಧ್ಯಕ್ಷರುಗಳೆಂದರೆ ಇಂತಹದ್ದು ಕನಿಷ್ಟ 'ಅರ್ಹತೆ' ಎಂದು ಸಮರ್ಥಿಸಿಕೊಂಡಾರೆಯೇ? ಯಾಕೆಂದರೆ ಅಖಿಲ ಭಾರತ ಅಧ್ಯಕ್ಷ ವೆಂಕಯ್ಯನಾಯ್ಡು ಸಹ ಆಂಧ್ರದಲ್ಲಿ ದಲಿತರ ಭೂಮಿಯನ್ನೇ ಕಬಳಿಸಿದ್ದ ಭೂಪ... ದೇಶ-ಧರ್ಮದ ರಕ್ಷಕರೆಂಬ ಹೆಸರಲ್ಲಿ ಉಳ್ಳವರ ಸೇವೆಗೆ ನಿಷ್ಠವಾದ - ಪರಮಭ್ರಷ್ಟ ಈ ದೇಶದ್ರೋಹಿಗಳಿಗೆ ಮುಖ ಎಂಬುದಿದೆಯೇ? ಇಂತಹ ಮುಖಗೇಡಿಗಳು ಸೋಗಲಾಡಿ ಸಾಂಗ್ಲಿಯಾನ, ಸಿನಿಕ ಮಟ್ಟಣ್ಣ ನಂತಹವರನ್ನು ಆಶ್ರಯಿಸುತ್ತಿರುವುದೇ ಬಿಜೆಪಿ ನಾಯಕರ ಇನ್ನೊಂದು ಮುಖ ತೆರೆದಿಡುತ್ತದೆ.

ಈವಾರ ಕರ್ನಾಟಕ
ಒಂದು ನೋಟ
ಎಸ್.ವೈ.ಗುರುಶಾಂತ್

ಪ್ರಜಾಪ್ರಭುತ್ವ ಒಪ್ಪಿಸಿಬಿಡಲು ಕಾಂಗ್ರೆಸ್ ನಿರ್ಧರಿಸಿಬಿಟ್ಟಿದೆ!

ಕಾಂಗ್ರೆಸ್‌ಗೆ ಪ್ರಜಾಪ್ರಭುತ್ವವನ್ನು ಬೆಳೆಸುವ ಆಶೆ! ಅಧಿಕಾರದ ವಿಕೇಂದ್ರಿಕರಣವನ್ನು ಬೇರು ಮಟ್ಟದಲ್ಲೇ ಬಲಗೊಳಿಸಲು ಕ್ಷೇತ್ರ ಕಾರ್ಯಯೋಜನೆ! ಏನಿಲ್ಲವೆಂದರೂ ಇದರಲ್ಲಿ ಸ್ಥಳೀಯ ಪಂಚಾಯತಗಳ ಸುಮಾರು 20 ಸಾವಿರಕ್ಕೂ ಅಧಿಕ ಪ್ರತಿನಿಧಿಗಳನ್ನು ಸೇರಿಸುವ ಪ್ರಯತ್ನ. ಅಲ್ಲಿ 10 ಕೋಟಿ ರೂಪಾಯಿಗಳನ್ನಾದರೂ ಖರ್ಚು ಮಾಡಲು ಸರ್ಕಾರ ಸಿದ್ಧವಾಗಿದೆ. ಇದರಲ್ಲಿ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾಗಾಂಧಿಯನ್ನೇ ಕರೆದು ತರಲಿದ್ದಾರೆ. ಭಾಷಣ ಮಾಡಿಸಲಿದ್ದಾರೆ. ಹೊಸ ಯೋಜನೆ 'ಅಭಿವೃದ್ಧಿ'ಯ ಪ್ಯಾಕೇಜ್‌ಗಳ ಗಂಟಿನ ಸರಮಾಲೆ ಪ್ರಕಟಿಸಿ ಬರಡು ನೆಲದಲ್ಲಿ, ನೆಲೆ ತಪ್ಪಿದವರ ಮುಖದಲ್ಲಿ ನಗೆ ಚಿಮ್ಮಿಸಲಿದ್ದಾರೆ!

ನಿಜ, ಹೀಗೆ ಪ್ರಜಾಪ್ರಭುತ್ವವನ್ನು ಜನರ ಕೈಗೆ 'ಒಪ್ಪಿಸಿ' ಬಿಡಲು ಕಾಂಗ್ರೆಸ್ ನಿರ್ಧರಿಸಿ ಬಿಟ್ಟಿದೆ. ಟೀಕೆಗಳು ಏನು ಬಂದರೂ ಹಿಂದೆ ಸರಿಯುವ ಮಾತೇ ಇಲ್ಲ, ಸರಿಯಲಾರರು ಕೂಡ. ಯಾಕೆಂದರೆ ಮಧ್ಯಂತರ ಚುನಾವಣೆ ಗಳು ಹತ್ತಿರ ಹತ್ತಿರ ಬರುತಿವೆ. ಮತದಾರನತ್ತ, ಅವರನ್ನು 'ಮ್ಯಾನೇಜ್' ಮಾಡುವ 'ಪ್ರತಿನಿಧಿ' ಗಳತ್ತ ನೆರವಿನ ಹಸ್ತ ಚಾಚದಿದ್ದರೆ ಹೇಗೆ? ನಾಲ್ಕು ವರುಷಗಳಲ್ಲಿ ಮಾಡಲಾಗದ್ದನ್ನು 40 ದಿನಗಳಲ್ಲೇ ಮಾಡಿಬಿಡಲು ಮುತ್ಸದ್ದಿ ಪ್ರಧಾನಿಗಳೇ ಮಂಡಿನೋವು ಮರೆತು ಪ್ಯಾಕೇಜ್‌ಗಳ ಮೇಲೆ ಪ್ಯಾಕೇಜ್‌ಗಳನ್ನು ಪ್ರಕಟಿಸಿ 'ಕೊಡುಗೈ ದೊರೆ'ಯೆಂದು ತೋರಿಸಿಕೊಳ್ಳಲು ಅಹೋರತ ನಿರತರಾಗಿರುವಾಗ, ಕೃಷ್ಣರ ಸರ್ಕಾರವೇಕೆ ಕೈಕಟ್ಟಿ ಕೂರಬೇಕು. ಜನರ ಮೂಗಿಗೆ ತುಪ್ಪ ಹಚ್ಚುವ ಸ್ಪರ್ಧೆಯಲ್ಲಿ ಕೃಷ್ಣ ಏಕೆ ಹಿಂದೆ ಬೀಳಬೇಕು!



ವಿಕೇಂದ್ರೀಕರಣದ ವಿಕೃತ

ಪಂಚಾಯತ್ ರಾಜ್ ವ್ಯವಸ್ಥೆಯ ಮೂಲಕ ಅಧಿಕಾರದ ವಿಕೇಂದ್ರೀಕರಣದತ್ತ ಸಾಗಲು ವಿಭಿನ್ನ ಚಿಂತನೆ, ಕ್ರಿಯಾಶೀಲ ಯೋಜನೆ ದಿಟ್ಟ ಕ್ರಮಗಳನ್ನು ಪ.ಬಂಗಾಳ, ತ್ರಿಪುರಾ, ಕೇರಳಗಳಲ್ಲಿ ಎಡರಂಗ ಸರ್ಕಾರಗಳು ದೃಢ ಹೆಜ್ಜೆ ಇರಿಸಿದಾಗ ಕಾಂಗ್ರೆಸ್ ಶ್ಲಾಘಿಸುವುದು ದೂರವಿರಲಿ, ಕನಿಷ್ಟ ವಿರೋಧಿಸಿದ್ದರೂ ಸಾಕಾಗುತ್ತಿತ್ತು. ಜನತೆಯ ನಡುವಿನಿಂದ ಪ್ರಜಾಪ್ರಭುತ್ವ ಮೊಳೆತು, ಚಿಗುರೊಡೆದು ಬೆಳೆಯಲು ಬಿಡಬಾರದೆಂದೇ ಕಾಂಗ್ರೆಸ್ ಬಯಸಿತು, ಹಾಗೇ ವರ್ತಿಸಿತು. ಅಧಿಕಾರ ಶಾಹಿತನ, ಸರ್ವಾಧಿಕಾರ, ಸಂಪನ್ಮೂಲಗಳ ಕೇಂದ್ರೀಕರಣವನ್ನೇ ಪ್ರತಿಪಾದಿಸಿ ಪಾಲಿಸಿತು. ರಾಜ್ಯಗಳಿಗೆ ನ್ಯಾಯಸಮ್ಮತವಾಗಿ ಸಲ್ಲಬೇಕಾದ ಹಣ-ಸಂಪನ್ಮೂಲಗಳ ಪಾಲನ್ನು ನೀಡದೇ ಕೇಂದ್ರದ ಎದುರು ರಾಜ್ಯಗಳು ಅಂಗಲಾಚು ವಂತೆ ಒತ್ತಾಯಿಸಿತು, ಸತಾಯಿಸಿತು. ಇಂತಹ ದಮನದ ಯತ್ನಗಳನ್ನು ಎದುರಿಸಿ, ಜನರ ಕೈಗೆ ಅಧಿಕಾರ ನೀಡುವಲ್ಲಿ ಪ.ಬಂಗಾಳದ ಎಡರಂಗ ಮುನ್ನುಗ್ಗಿದಾಗ, ಅಲ್ಲಿನ ಪಂಚಾಯತ್ ರಾಜ್ ವ್ಯವಸ್ಥೆ ಸೀಮಿತ ಅಧಿಕಾರ - ಸಂಪನ್ಮೂಲಗಳ ನಡುವೆಯೂ ದೃಢವಾಗಿ ಅರಳಿ ನಿಂತದ್ದರಿಂದ ಇತರೆ ಪ್ರಜಾಪ್ರಭುತ್ವೀಯ ಶಕ್ತಿಗಳ ಗಮನ ಸೆಳೆದು ಅನುಸರಿಸುವ ಪ್ರಯತ್ನಕ್ಕೆ ಕರ್ನಾಟಕದ ಜನತಾ ಸರ್ಕಾರದಂತಹವು ಇಳಿದಾಗ, ತಮ್ಮ ಕೈಗೆ ಅಧಿಕಾರ ನೀಡದ ಜನತೆಯ ಪ್ರಜಾ ಸತ್ತಾತ್ಮಕ ಆಶಯದ ಒತ್ತಾಸೆಯೆದುರು ಕಾಂಗ್ರೆಸ್ ಅನಿವಾರ್ಯವಾಗಿ ಪಂಚಾಯತ್ ರಾಜ್ ವ್ಯವಸ್ಥೆಗೆ ತಾನು ಬದ್ಧವೆಂದು ಪ್ರಕಟಿಸಿತು. ರಾಜೀವ್ ಗಾಂಧಿ ಇಂತಹದರ ರೂವಾರಿ ಯೆಂದು ತೋರಿಸಿಕೊಳ್ಳಲು ಹೆಣಗಿದ್ದಿದೆ. ಕರ್ನಾಟಕಲ್ಲಿಯೂ 1985 ರ ಬಳಿಕ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಪ್ರತಿಬಾರಿಯೂ ಜನತಾ ಸರ್ಕಾರ ತಂದ ಪಂಚಾಯತ್ ಮಸೂದೆಗೆ ಅನೇಕ ತಿದ್ದುಪಡಿ ತಂದು ವಿಕೇಂದ್ರೀಕರಣವನ್ನು ವಿಕೃತಗೊಳಿಸಿತು. ಜನಪ್ರತಿನಿಧಿಗಳನ್ನು 'ನಾಮಕಾವಸ್ಥೆ' ನಾಯಕರನ್ನಾಗಿಸಿ, ಅಧಿಕಾರ ಕಿತ್ತುಕೊಂಡಿತ್ತಲ್ಲದೇ ಸಂಪನ್ಮೂಲಗಳನ್ನು ನೀಡದೇ ಸೊರಗಿಸಿತು. ಶಾಸಕರ-ಅಧಿಕಾರಗಳನ್ನು ಚುನಾಯಿತ ಪಂಚಾಯತ್ ರಾಜ್ ವ್ಯವಸ್ಥೆಯ ಮೇಲೆ ಹೇರಿ ಪ್ರಜಾಪ್ರಭುತ್ವ ಬಗೆಗಿನ ತನ್ನ ಕಡು ದ್ವೇಷವನ್ನು ಹೀಗೆ ಪ್ರಕಟಿಸಿ ಸೇಡು ತೀರಿಸಿಕೊಳ್ಳುತ್ತಿದೆ. ಇಂತಹ ಕಾಂಗ್ರೆಸ್ ಈಗ ಪಂಚಾಯತ್ ರಾಜ್ಯ ವ್ಯವಸ್ಥೆ ಪ್ರಜಾಪ್ರಭುತ್ವವನ್ನು ಬಲ ಪಡಿಸುತ್ತೇನೆಂದರೆ ನಂಬಲು ಜನರೇನು ಮೂರ್ಖರಲ್ಲ. ಅದು ಐಎಂಎಫ್-ವಿಶ್ವಬ್ಯಾಂಕಿನ ಸಾಲದ ಶರತ್ತುಗಳ ಕೃಪೆಯಲ್ಲಿ ಸರ್ಕಾರ ಬದುಕುತ್ತಿರುವಾಗ! ಇದು ಕೃಷ್ಣರವರ ರಾಜಕೀಯ ಡೊಂಬರಾಟ.

ಎ.ಡಿ.ಬಿ. ಯೋಜನೆ : ಕಟ್ಟಡ ಕಾರ್ಮಿಕರಿಗೆ ವಂಚನೆ

ಕೇಂದ್ರ ಸರಕಾರ ಕೋಟ್ಯಾಂತರ ರೂಪಾಯಿಗಳನ್ನು ಜಪಾನ್ ಮೂಲದ ಏಶಿಯನ್ ಡೆವಲಪ್‌ಮೆಂಟ್ ಬ್ಯಾಂಕ್‌ನಿಂದ ಸಾಲ ಪಡೆದು ರಾಜ್ಯ ಸರಕಾರಗಳಿಗೆ ರವಾನಿಸಿ, ರಾಜ್ಯ ಸರಕಾರಗಳು ಪುರಸಭೆ, ನಗರಸಭೆ, ಕಾರ್ಪೋರೇಶನ್‌ಗಳಿಗೆ ವಿತರಿಸಿ ಅಭಿವೃದ್ಧಿ ಕಾರ್ಯಗಳೆಂಬ ಪ್ರಹಸನ ನಡೆಸುತ್ತಿದೆ. ಮನೆ ತೆರಿಗೆ, ಆಸ್ತಿ ತೆರಿಗೆ ಬೇಕಾಬಿಟ್ಟಿ ಹೆಚ್ಚಿಸುವ ಮೂಲಕ ಈ ಸಾಲವನ್ನು ತೀರಿಸುವ ಹೊಣೆಯನ್ನು ಸ್ಥಳೀಯ ಸಂಸ್ಥೆಗಳಿಗೆ ವಹಿಸಲಾಗುತ್ತಿದೆ. ಈ ಹಣದಲ್ಲಿ ಹೆಚ್ಚಿನ ಮೊತ್ತವು ದೇಶದ ಕೆಲವೇ ಅತೀ ಶ್ರೀಮಂತ ವ್ಯಕ್ತಿಗಳಿಗೆ ಗುತ್ತಿಗೆಯ ಮೂಲಕ, ಕಮಿಷನ್ ಮೂಲಕ ಸೇರುತ್ತಿರುವುದು ಸಾಮಾನ್ಯ ವಿಷಯ. ಸ್ಥಳೀಯ ಸಂಸ್ಥೆಗಳಿಂದ ಅಭಿವೃದ್ಧಿ ಕಾಮಗಾರಿಯ ಗುತ್ತಿಗೆ ವಹಿಸಿಕೊಂಡ ಎಷ್ಟೋ ಕಂಪನಿಗಳು ಕೆಲಸಗಾರರಿಗೆ ಸಂಬಳವನ್ನೇ ಕೊಡದೆ ತಮ್ಮ ಕೆಲಸ ಆದಕೂಡಲೇ ಒದ್ದೋಡಿಸುವ ಪರಿಪಾಠವೂ ಇದೆ. ಇಂತಹ ಒಂದು ಅಪೂರ್ವ ಘಟನೆ ಉಡುಪಿಯಲ್ಲಿ ನಡೆದಿದೆ ಗೊತ್ತೆ?

ನಿಜ ಬಣ್ಣ ಬಯಲು

ಏಶಿಯನ್ ಡೆವಲಪ್‌ಮೆಂಟ್ ಬ್ಯಾಂಕ್‌ನಿಂದ ಒಂದು ಕೋಟಿ ಎಪ್ಪತ್ತು ಸಾವಿರ ರೂಪಾಯಿ ಖರ್ಚು ಮಾಡಿ ಹಳೆಯ ಬಸ್‌ಸ್ಟ್ಯಾಂಡನ್ನು ಕೆಡವಿ ಹೊಸ ಬಸ್‌ಸ್ಟ್ಯಾಂಡ್ ಮತ್ತು ವಾಣಿಜ್ಯ ಸಂಕೀರ್ಣ ಕಟ್ಟುವ ಟೆಂಡರನ್ನು ಕರ್ನಾಟಕ ರಾಜ್ಯ ಸರಕಾರದ ಕರ್ನಾಟಕ ನಗರಾಭಿವೃದ್ಧಿ ಮತ್ತು ಕರಾವಳಿ ಪರಿಸರ ನಿರ್ವಹಣಾ ಯೋಜನೆಯಡಿಯಲ್ಲಿ ಬೆಂಗಳೂರಿನ ರಾಮ್‌ಕೀ ಇನ್‌ಫ್ರಾಸ್ಟ್ರಕ್ಚರ್ ಲಿ., ಎನ್ನುವ ನಿರ್ಮಾಣ ಕಂಪನಿ ವಹಿಸಿಕೊಂಡಿತ್ತು. ಇಂತಹ ಯೋಜನೆಗಳನ್ನು ರಾಷ್ಟ್ರಮಟ್ಟದ ಕೇವಲ ನಾಲ್ಕೈದು ಕಂಪನಿಗಳಿಗೆ ವಹಿಸಿಕೊಡುವುದು ಕೇಂದ್ರ ಸರಕಾರದ ಸೂಚನೆಯ ಮೇರೆಗೆ ನಡೆಯುತ್ತದೆ. ಉಡುಪಿಯ ಈ ಯೋಜನೆ ತ್ವರಿತವಾಗಿ ಉತ್ತಮ ಗುಣಮಟ್ಟದಲ್ಲಿ ನಡೆಯುತ್ತದೆ ಎಂಬ ನಂಬಿಕೆ ಉಡುಪಿ ಜನರಲ್ಲಿತ್ತು. ಆದರೆ ಕೆಲಸ ಆರಂಭವಾಗಿ ಎರಡು ತಿಂಗಳ ನಂತರ ಈ ಕಂಪನಿಯ ನಿಜ ಬಣ್ಣ ನಿಧಾನವಾಗಿ ಗೋಚರವಾಗತೊಡಗಿತು. ಈ ಕಟ್ಟಡದ ಸೆಂಟ್ರಿಂಗ್ ಮತ್ತು ಬಾರ್ ಬೆಂಡಿಂಗ್ ಕೆಲಸದಲ್ಲಿ 24 ಮಂದಿ ದುಡಿಯುತ್ತಿದ್ದರು. ಇವರಲ್ಲಿ ಹೆಚ್ಚಿನವರು ಪಶ್ಚಿಮ ಬಂಗಾಳದ ಮಿಡ್ನಾಪುರದವರು. ಕಟ್ಟಡದ ನೆಲಹಂತಸ್ತಿನ ಕೆಲಸ ಮುಗಿಸಿದಾಗ ಒಂದು ಲಕ್ಷದ ಎಪ್ಪತ್ತೆರಡು ಸಾವಿರ ರೂಪಾಯಿಯನ್ನು ಕಂಟ್ರಾಕ್ಟುದಾರರು ಕೆಲಸಗಾರರಿಗೆ ಕೊಡಬೇಕಾಗಿತ್ತು. .ಇದರಲ್ಲಿ ಐವತ್ತು ಸಾವಿರ ರೂಪಾಯಿಯನ್ನು ರೇಶನ್‌ಗಾಗಿ ಮತ್ತು ಅಡ್ವಾನ್ಸ್ ಆಗಿ ಕೆಲಸಗಾರರು ಪಡೆದಿದ್ದರು. ಉಳಿದ ರೂಪಾಯಿ ಒಂದು ಲಕ್ಷ ಇಪ್ಪತ್ತನಾಲ್ಕು ಸಾವಿರವನ್ನು ಕೆಲಸಗಾರರು ಕೇಳಿದರೆ ರಾಮಕೀ ಇನಫ್ರಾಸ್ಟ್ರಕ್ಚರ್ ಲಿ., ಕಂಪನಿಯ ಆಂಧ್ರದ ತೆಲುಗು ಬಾಷೆಯ ಮಾಲಕರು ನಾವು ಈಗಾಗಲೇ ಎಲ್ಲ ಹಣವನ್ನು ಕಾರ್ಮಿಕರಿಗೆ ಈಗಾಗಲೇ ಕೊಟ್ಟಿದ್ದೇವೆ, ನಮ್ಮಿಂದ ಯಾವುದೇ ಬಾಕಿ ಇಲ್ಲ, ಕಾರ್ಮಿಕರೆಲ್ಲರೂ ಈ ಸೈಟ್ ಬಿಟ್ಟು ಹೊರಗೆ ಹೋಗಿ, ಇಲ್ಲವಾದರೆ ಪೋಲೀಸ್ ತಂದು ಹೊರ ಹಾಕಿಸುತ್ತೇವೆ, ನಮಗೆ ಮುಖ್ಯಮಂತ್ರಿಗಳ, ಪೊಲೀಸ್ ಅಧಿಕಾರಿಗಳ ನಿಕಟ ಸಂಪರ್ಕ ಇದೆ, ನಿಮ್ಮ ಬೆದರಿಕೆಗಳಿಗೆ ಕ್ಯಾರ್ ಮಾಡುವವರಲ್ಲ ಎಂದು ರೋಪ್ ಹಾಕತೊಡಗಿದರು.

ಕಂಗಾಲಾದ ಕಾರ್ಮಿಕರು ಸ್ಥಳೀಯ ಎಂ.ಎಲ್.ಎ ಮತ್ತು ಪೊಲೀಸ್ ಅಧಿಕಾರಿಗಳಲ್ಲಿ ತಮ್ಮ ಗೋಳನ್ನು ನಿವೇದಿಸಿದರೂ ಪರಿಹಾರವಾಗಲಿಲ್ಲ. ಕಟ್ಟಕಡೆಗೆ ಉಡುಪಿ ತಾಲೂಕು ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಸಂಘದ ನೇತೃತ್ವದಲ್ಲಿ ಹೋರಾಟದ ತಯಾರಿ ನಡೆಸಿ ಸಂಬಂಧಿಸಿದ ಎಲ್ಲಾ ಅಧಿಕಾರಿಗಳಿಗೆ ಮನವಿ ಸಲ್ಲಿಸಿ, ಮಾತುಕತೆ ನಡೆಸಿ ಕೊನೆಗೆ ಡಿಸೆಂಬರ್ 23 2003 ರಂದು ಕಾರ್ಮಿಕರು ಹೋರಾಟದ ಕಣಕ್ಕೆ ದುಮುಕಿದರು. ಅಂದು ಕಟ್ಟಡ ನಿರ್ಮಾಣದ ಸೈಟ್‌ನಲ್ಲಿ ಪ್ರತಿಭಟನಾ ಧರಣಿ ಮುಷ್ಕರ ನಡೆಸಿದರು. ಕಾರ್ಮಿಕರ ಒಗ್ಗಟ್ಟಿನ ಈ ಹೋರಾಟದ ಬೆದರಿಕೆಗೆ ಮಣಿದ ಈ ಕಟ್ಟಡ ನಿರ್ಮಾಣ ಕಂಪನಿಯ ರೆಡ್ಡಿ ಕುಟುಂಬದ ಮಾಲಕರು ಹಣ ಪಾವತಿಸಲು ಒಪ್ಪಿ 24 ಗಂಟೆಗಳಲ್ಲಿ ರೂ. 1ಲಕ್ಷ 24ಸಾವಿರ ಪಾವತಿಸಿದರು. ಈ ಹೋರಾಟದಲ್ಲಿ ಕಾರ್ಮಿಕರೊಂದಿಗೆ ಭಾಗವಹಿಸಿದ ಈ ಕಟ್ಟಡಕ್ಕೆ ಸೆಂಟ್ರಿಂಗ್ ಸಾಮಗ್ರಿ ಒದಗಿಸಿದ ಮರದ ವ್ಯಾಪಾರಿಗೆ 1 ಲಕ್ಷ 25 ಸಾವಿರ ರೂಪಾಯಿಯನ್ನೂ ಅದೇ ಹೊತ್ತಿಗೆ ನೀಡಿ ಈ ವಿವಾದವನ್ನು ಮುಕ್ತಾಯಗೊಳಿಸಿದರು. ಈ ಹೋರಾಟದ ನೇತೃತ್ವವನ್ನು ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಸಂಘದ ಅಧ್ಯಕ್ಷ ಪಿ.ವಿಶ್ವನಾಥ ರೈ, ಕಾರ್ಯದರ್ಶಿ ಕೃಷ್ಣ ಎಸ್.ಅಮೀನ್, ರಾಮ ಮೇಸ್ತ್ರಿ, ರಮೇಶ ಮೆಂಡನ್, ಸಾಧು ಅಮೀನ್, ದೋಗು ಸುವರ್ಣ, ಎಚ್.ವಿಠ್ಠಲ ಪೂಜಾರಿ ಮೊದಲಾದವರು ವಹಿಸಿದ್ದರು.

ವಿದೇಶಿ ಹಣಕಾಸು ಸಂಸ್ಥೆಗಳಿಂದ ಅಪಾರ ಮೊತ್ತದ ಸಾಲ ತಂದು ನಮ್ಮ ದೇಶದಲ್ಲಿ ಅಭಿವೃದ್ಧಿ ಕಾಮಗಾರಿಗಳೆಂಬ ನಾಟಕವಾಡಿ ದೇಶದ ಕೆಲವೇ ಮಂದಿಯನ್ನು ಶ್ರೀಮಂತಗೊಳಿಸುವ ಕೇಂದ್ರದ ಬಿ.ಜೆ.ಪಿ. ನೇತೃತ್ವದ ಎನ್.ಡಿ.ಎ ಸರಕಾರದ ನೀತಿಯಿಂದಾಗಿ ಲಕ್ಷಾಂತರ ಬಡಕಾರ್ಮಿಕರು ತಾವು ದುಡಿದ ಹಣವನ್ನು ಪಡೆಯಲಿಕ್ಕಾಗದ ಸ್ಥಿತಿ ಇನ್ನೂ ಎಷ್ಟೋ ಪ್ರದೇಶಗಳಲ್ಲಿ ನಡೆಯುತ್ತಿರಬಹುದು.

ವಿದ್ಯಾರ್ಥಿಗಳ ಮಧ್ಯೆ ಕೋಮು ಸಂಘರ್ಷ ಹುಟ್ಟಿಸುವ ಶಕ್ತಿಗಳ ಬಗ್ಗೆ ಎಚ್ಚರ ಅಗತ್ಯ


ಭಾರತ ವಿದ್ಯಾರ್ಥಿ ಫೆಡಾರೇಶನ್ (ಎಸ್.ಎಫ್.ಐ)ನ 15ನೇ ದಕ್ಷಿಣ ಕನ್ನಡ ಜಿಲ್ಲಾ ಸಮ್ಮೇಳನವು ದಿನಾಂಕ 10-01-04 ರಂದು ಡಿ.ಸಿ ಕಛೇರಿ ಆವರಣದಲ್ಲಿರುವ ಕಂದಾಯಭವನದಲ್ಲಿ ಜರುಗಿತು.

ಜಿಲ್ಲಾ ಸಮ್ಮೇಳನವನ್ನು ಉದ್ಘಾಟನೆಗೈದ ಡಿ.ವೈ.ಎಫ್.ಐ ಜಿಲ್ಲಾ ಅಧ್ಯಕ್ಷರು ಸುನೀಲ್‌ಕುಮಾರ್ ಮಾತನಾಡುತ್ತಾ, ಇಂದು ವಿದ್ಯಾರ್ಥಿಗಳು ಐಕ್ಯ ಹೋರಾಟ ಮಾಡಲು ಸಾಧ್ಯವಾಗುತ್ತಿಲ್ಲ. ಶಿಕ್ಷಣವನ್ನೇ ಇಲ್ಲವಾಗಿಸುವ ಜನಸಾಮಾನ್ಯರನ್ನು ವಂಚಿಸುವ ನೀತಿಗಳು ಜಾರಿಯಾಗುತ್ತಿವೆ. ಆದರೆ ವಿದ್ಯಾರ್ಥಿಗಳಲ್ಲಿ ಕೋಮುಭಾವನೆ ಬೆಳೆಸಿ ಸಂಘರ್ಷ ಉಂಟುಮಾಡುವ ಕೆಲಸ ನಡೆಯುತ್ತಿದೆ. ಇದರ ವಿರುದ್ಧ ವಿದ್ಯಾರ್ಥಿಗಳು ಜಾಗೃತರಾಗಬೇಕೆಂದು ಕರೆನೀಡಿದರು.

ವೇದಿಕೆಯಲ್ಲಿಕಾರ್ಮಿಕ ಮುಖಂಡ ಯಾದವಶೆಟ್ಟಿ, ಮಾಜಿ ನಾಯಕರಾದ ವಸಂತ ಆಚಾರಿ, ಜಿಲ್ಲಾ ಕಾರ್ಯದರ್ಶಿ ಅಶ್ರಫ್‌ಕೈರಂಗಳರವರು ಉಪಸ್ಥಿತರಿದ್ದರು. ಅಧ್ಯಕ್ಷತೆಯನ್ನು ಮಹೇಶ್ ಪಡಾಲ್‌ರವರು ವಹಿಸಿದ್ದು. ಸಿದ್ದೀಕ್ ಅಂಬ್ಲವೇಗರು ಸ್ವಾಗತಿಸಿದರು.

ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿ ಆರ್.ರಾಮಕೃಷ್ಣ ಇಂದಿನ ಶಿಕ್ಷಣ ವ್ಯವಸ್ಥೆಯ ತೀರಾ ಹದಗೆಟ್ಟಿದೆ. ಮಾತ್ರವಲ್ಲದೆ ಇಂದು ಶಿಕ್ಷಣಕ್ಕೆ ತೀರಾ ಕಡಿಮೆ ಬಜೆಟನ್ನು ಮೀಸಲಿರಿಸಲಾಗಿದೆ. ಇದೊಂದು ಕಳವಳಕಾರಿ ನೀತಿ ಎಂದು ಆರೋಪಿಸಿದರು.

ವಿವಿಧ ಕಾಲೇಜುಗಳ 200 ಮಂದಿ ವಿದ್ಯಾರ್ಥಿಗಳು ಸೇರಿದ್ದರು. ಸಮ್ಮೇಳನದ ನಂತರ ಹೊಸ ಜಿಲ್ಲಾಸಮಿತಿಯನ್ನು ಆರಿಸಲಾಯಿತು.



ಎಸ್.ಎಫ್.ಐ. 15ನೇ ದಕ್ಷಿಣ ಕನ್ನಡ ಜಿಲ್ಲಾ ಸಮ್ಮೇಳನವು

ನೂತನ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷರಾಗಿ ಬೆಸೆಂಟ್ ಸಂಧ್ಯಾಕಾಲೇಜು ವಿದ್ಯಾರ್ಥಿಸಂಘದ ಉಪಾಧ್ಯಕ್ಷರಾದ ಪ್ರವೀಣ್.ಸಿ.ಹೊರ್ನಾಡು, ಜಿಲ್ಲಾ ಕಾರ್ಯದರ್ಶಿಯಾಗಿ ಸಿದ್ದೀಶ್ ಅಂಬ್ಲಮೊಗರುರವರನ್ನು ಆರಿಸಲಾಯಿತು. ಉಪಾಧ್ಯಕ್ಷರುಗಳಾಗಿ ಶಮೀಮ ಬೆಳ್ತಂಗಡಿ, ಸುನಿಲ್ ಪತ್ರಾವೋ, ರಾಜೇಶ್ ವಿಟ್ಲ, ಜೊತೆ ಕಾರ್ಯದರ್ಶಿಯಾಗಿ ರಮೇಶ್ ಕುಲಶೇಕರ ಲಾವಣ್ಯ ಬಜಾಲ್, ಇಬ್ರಾಹಿಂ ಕೈರಂಗಳ, ನಿತಿನ್ ರೈ ಹಾಗೂ 9 ಮಂದಿ ಸಮಿತಿ ಸದಸ್ಯರನ್ನು ಆಯ್ಕೆ ಮಾಡಲಾಯಿತು.


ಬೀಡಿ ಕಾರ್ಮಿಕರ ಕನಿಷ್ಠ ಕೂಲಿ ಹಾಗೂ ತುಟ್ಟಿ ಭತ್ಯೆಗೆ ಆಗ್ರಹ

ಮಂಗಳೂರಿನ ವಾಮಂಜೂರು ಪ್ರದೇಶ ಬೀಡಿ ಕೆಲಸಗಾರರ ಸಂಘದ 18 ನೇ ವಾರ್ಷಿಕ ಮಹಾಸಭೆಯು ಡಿಸೆಂಬರ್ 25.2003 ರಂದು ತಿರುವೈಲು ಸಭಾಂಗಣದಲ್ಲಿ ಸಂಘದ ಅಧ್ಯಕ್ಷರಾದ ಕೆ.ಮಂಡಪ್ಪ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಂಘದ ಕಾರ್ಯದರ್ಶಿ ಕೆ.ಗಂಗಯ್ಯ ಅಮೀನ್ ಸ್ವಾಗತಿಸಿ ಸಂಘದ ವಾರ್ಷಿಕ ವರದಿಯನ್ನು ಮಂಡಿಸಿದರು. ಕೋಶಾಧಿಕಾರಿ ಗೋಪಾಲ ಮೂಲ್ಯ ಲೆಕ್ಕಪತ್ರ ಮಂಡಿಸಿದರು. ವರದಿ ಹಾಗೂ ಲೆಕ್ಕ ಪತ್ರವನ್ನು ಸಭೆಯು ಚರ್ಚಿಸಿ ಸರ್ವಾನುಮತದಿಂದ ಅಂಗೀಕರಿಸಿತು.

ಕುಪ್ಪೆಪದವು ಪ್ರದೇಶ ಬೀಡಿ ಕೆಲಸಗಾರರ ಸಂಘದ ಕಾರ್ಯದರ್ಶಿ ಸದಾಶಿವದಾಸ್, ಕೋಶಾಧಿಕಾರಿ ಸೋಣಯ್ಯಗೌಡ ಶುಭಕೋರಿ ಮಾತನಾಡಿದರು. ಸಿ.ಐ.ಟಿ.ಯು.ದ.ಕ ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿ ಮಾತನಾಡುತ್ತ ಕೇಂದ್ರದ ಎನ್.ಡಿ.ಎ ಸರಕಾರದ ಖಾಸಗೀಕರಣ, ಉದಾರೀಕರಣ, ಜಾಗತೀಕರಣ ಕ್ರಮದಿಂದಾಗಿ ಬೀಡಿ ಉದ್ದಿಮೆಯು ದಿನದಿಂದ ದಿನಕ್ಕೆ ಕುಸಿಯುತ್ತಿದೆ ಎಂದರು ದಕ್ಷಿಣ ಕನ್ನಡ ಜಿಲ್ಲಾ ಬೀಡಿ ಫೆಡರೇಷನ್ ಅಧ್ಯಕ್ಷರಾದ ಎ.ಬಾಲಕೃಷ್ಣ ಶೆಟ್ಟಿ ಮಾತನಾಡುತ್ತ ಮಜೂರಿಗೆ ಏಪ್ರಿಲ್ 1 ರಿಂದ ಸಲ್ಲತಕ್ಕ ತುಟ್ಟಿ ಭತ್ಯೆಯನ್ನು ಹಾಗೂ ಕನಿಷ್ಠ ಕೂಲಿಯನ್ನು ಕೊಡದೆ ಕಾರ್ಮಿಕರನ್ನು ಮೋಸ ಮಾಡುತ್ತಿದ್ದಾರೆ. ಮಾಲಿಕರು ಹಠಮಾರಿತನವನ್ನು ಕೈಬಿಟ್ಟು ಕಾರ್ಮಿಕರಿಗೆ ಕೊಡತಕ್ಕ ಸವಲತ್ತುಗಳನ್ನು ಕೂಡ ಲೇ ಕೊಡಬೇಕೆಂದು ಆಗ್ರಹಿಸಿದರು. ಗುರುಪುರ ಸರ್ಕಲ್ ಸಿ.ಪಿ.ಐ(ಎಂ) ಪಕ್ಷದ ಕಾರ್ಯದರ್ಶಿ ಯು.ಬಿ.ಕೋಕಯ್ಯ ಮಾತನಾಡುತ್ತ ಬೀಡಿ ಕಾರ್ಮಿಕರಿಗೆ ವಾರದಲ್ಲಿ ಒಂದು ಎರಡು ಕೆಲಸಕೊಟ್ಟು ಒಂದು ಕಡೆ ಎಲೆ ಎವರೆಜಿನ ಹೆಸರಲ್ಲಿ ದಂಡ ವಸೂಲಿ ಮಾಡುತ್ತ ಶೋಷಿಸುತ್ತಿದ್ದಾರೆ. ಈ ವಿಚಾರದಲ್ಲಿ ಕಾರ್ಮಿಕರು ಮುಂದಿನ ದಿನಗಳಲ್ಲಿ ಕೆಲಸಕ್ಕಾಗಿ ಹಾಗೂ ತುಟ್ಟಿ ಭತ್ಯೆ ಪಡೆಯುವುದಕ್ಕಾಗಿ ತೀವ್ರ ತರಹದ ಹೋರಾಟಕ್ಕೆ ಸಿದ್ಧರಾಗಬೇಕೆಂದು ಕರೆಕೊಟ್ಟರು.

ಮಹಾಸಭೆಯಲ್ಲಿ ವಾರದ 6 ದಿನಕ್ಕೆ ಬೇಕಾಗುವಷ್ಟು ಕೆಲಸ ಕೊಡಬೇಕೆಂದು ಹಾಗೂ ತುಟ್ಟಿ ಭತ್ತೆಯನ್ನು ಕೊಡಬೇಕೆಂದು ಒತ್ತಾಯಿಸುವ ಹಾಗೂ ಈ ವಿಚಾರದಲ್ಲಿ ಮಾಲಿಕರು ಹಾಗೂ ಸರಕಾರ ಕೊಡಲು ಸಹಕರಿಸದಿದ್ದಲ್ಲಿ ಜನವರಿ 23,2004 ರಂದು ಸರಕಾರದ ಕಛೇರಿ ಹಾಗೂ ಮಾಲೀಕರ ಡಿಪೋಗಳ ಮುಂದೆ ತೀವ್ರ ಸರಹದ ಹೋರಾಟ ನಡೆಸುವ ನಿರ್ಣಯವನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

ನೂತನ ಪದಾದಿಕಾರಿಗಳು: ಅಧ್ಯಕ್ಷ ಕೆ.ಮುಂಡಪ್ಪ, ಉಪಾಧ್ಯಕ್ಷರುಗಳಾಗಿ: ರುಕ್ಮಿಣಿ, ಹೊನ್ನಯ ಅಮೀನ್, ಪ್ರಧಾನ ಕಾರ್ಯದರ್ಶಿ ಕೆ.ಗಂಗಯ ಅಮೀನ್, ಕಾರ್ಯದರ್ಶಿಗಳಾಗಿ: ಪುಷ್ಪ, ಇಬ್ರಾಹಿಂ, ಕೋಶಾಧಿಕಾರಿಯಾಗಿ: ಗೋಪಾಲ ಮೂಲ್ಯ, ಅಲ್ಲದೇ 11 ಸದಸ್ಯರ ಕಾರ್ಯಕಾರಿ ಸಮಿತಿಯನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.



ಭಾಷಾವಾರು ಪ್ರಾಂತ್ಯಗಳನ್ನು ಏಕೆ ಉಳಿಸಿಕೊಳ್ಳಬೇಕು ?

ಭಾಷಾವಾರು ಪ್ರಾಂತ್ಯಗಳು ರಚನೆಯ ವಿಚಾರ ಮೊಳೆತದ್ದು ಬ್ರಿಟೀಶರ ವಿರುದ್ಧದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸ್ವಾತಂತ್ರ್ಯ ಪಡೆದ ನಂತರವೂ ಅದರ ಸಾಕಾರಕ್ಕಾಗಿ ತ್ಯಾಗ, ಬಲಿದಾನಗಳ ಹೋರಾಟ ನಡೆಸಬೇಕಾಯ್ತು. ಇಂತಹ ಪ್ರಜಾಸತ್ತಾತ್ಮಕ ಪ್ರಕ್ರಿಯೆಯನ್ನು ಬಲಗೊಳಿಸದೇ ವಿಶಿಷ್ಟವಾದ ದೇಶಿಯತೆಯನ್ನು ರಕ್ಷಿಸದೇ ದುರ್ಬಲಗೊಳಿಸುತ್ತಾ ಬಂದವು ಆಳುವವರ್ಗಗಳು. ಕೇಂದ್ರದಲ್ಲಿರುವ ಬಿಜೆಪಿ ಸಂಘ ಪರಿವಾರದ ಕೂಟ ಭಾಷಾವಾರು ಪ್ರಾಂತ್ಯಗಳ ಮೇಲೆ ತೀವ್ರ ಧಾಳಿಯನ್ನು ಆರಂಭಿಸಿದೆ. ಈ ಗಂಭೀರ ಸನ್ನಿವೇಶವನ್ನು ವಿವರಿಸಿದ್ದಾರೆ ಲೇಖಕರು. ಗಣರಾಜ್ಯೋತ್ಸವದ ಸಂದರ್ಭದಲ್ಲಿ ಹಿರಿಯ ನಾಯಕ ಹರಕಿಶನ್ ಸಿಂಗ್ ಸುರ್ಜಿತ್‌ರವರಿಂದ

ಭಾಷಾವಾರು ಪ್ರಾಂತ್ಯಗಳ ಪರಿಕಲ್ಪನೆ ಹೋರಾಟಗಳ ಒಂದು ದೀರ್ಘ ಸರಣಿಯ ನಂತರ ರೂಪುಗೊಂಡದ್ದು. ಕೇಂದ್ರದ ಮುಖ್ಯ ಆಳುವ ಪಕ್ಷ ಬಿಜೆಪಿ ಈ ಕುರಿತು ಹೊಂದಿರುವ ನಿಲುವುಗಳಿಗಾಗಿ ಈ ಪರಿಕಲ್ಪನೆಗೆ ಹೊಸ ಸವಾಲುಗಳು ಬಂದಿವೆ. ಈಗಿರುವ ಕೆಲವು ರಾಜ್ಯಗಳನ್ನು ಒಡೆದು ಹೊಸ ರಾಜ್ಯಗಳನ್ನು ರಚಿಸುವ ಬೇಡಿಕೆಗಳು, ಘೋಷಣೆಗಳು ಕೆಲವು ಭಾಗಗಳಲ್ಲಿ ಬರುತ್ತಿವೆ. ಬಿಜೆಪಿ ನೇತೃತ್ವದ ಸರ್ಕಾರ ಮೂರು ಹೊಸ ರಾಜ್ಯಗಳನ್ನು ಸೃಷ್ಟಿಸಿದ್ದು ಈ ಬೇಡಿಕೆಗಳಿಗೆ ನೀರೆರೆದಿದೆ.

ಸ್ವಾತಂತ್ರ್ಯ ಹೋರಾಟದಲ್ಲಿ

ಭಾಷಾವಾರು ಪ್ರಾಂತ್ಯಗಳ ವಿಚಾರ ನಮ್ಮ ಸ್ವಾತಂತ್ರ್ಯ ಹೋರಾಟದಲ್ಲಿ ಹುಟ್ಟಿಕೊಂಡದ್ದು ಎಂಬುದನ್ನಿಲ್ಲಿ ಒತ್ತಿ ಹೇಳಬೇಕಾಗಿದೆ. ನಮ್ಮದೇಶದ ಬಹುಭಾಗವನ್ನು ಗೆದ್ದುಕೊಂಡ ಬ್ರಿಟಿಷರು ತಮ್ಮ ಆಡಳಿತವನ್ನು ತಮ್ಮದೇ ಅನುಕೂಲಕ್ಕೆ ತಕ್ಕಂತೆ ಮರುಸಂಘಟಿಸಿದರೇ ಹೊರತು, ಯಾವುದೇ ತರ್ಕಬದ್ಧ ಸೂತ್ರದ ಮೇಲಲ್ಲ. ಇದು ವಿವಿಧ ಭಾಷೆಗಳನ್ನಾಡುವ ಜನರಿಗೆ ಬಹಳ ತೊಂದರೆಗಳನ್ನುಂಟು ಮಾಡಿತು. ಅವೆಲ್ಲಾ ಬ್ರಿಟಿಷರು ಬರುವ ಮೊದಲೇ ಸಾಕಷ್ಟು ಅಭಿವೃದ್ಧಿ ಹೊಂದಿದ್ದ ಭಾಷೆಗಳು. ಭಾಷೆ ಜನಗಳನ್ನು ಅವರ ದೈನಂದಿನ ಚಟುವಟಿಕೆಗಳಲ್ಲಿ ಪರಸ್ಪರ ಬೆಸೆಯುವ ಎಳೆಯಾದ್ದರಿಂದ ಈ ಕೃತಕ ವಿಭಜನೆ ಒಂದು ಭಾಷೆಯಾಡುವ ಜನ ಪರಸ್ಪರ ಒಟ್ಟು ಸೇರದಂತೆ ಮಾಡಿತು. ಇದರಿಂದ ಬ್ರಿಟಿಷರಿಗೇ ಅನುಕೂಲವಾಯಿತು.

ಜನಗಳನ್ನು ಸಾಮ್ರಾಜ್ಯಶಾಹಿ ವಿರುದ್ಧ ಹೋರಾಟಕ್ಕೆ ಸೆಳೆಯುವಲ್ಲಿ ಭಾಷಾ ಸೂತ್ರದ ಮಹತ್ವವನ್ನು ಸ್ವಾತಂತ್ರ್ಯ ಹೋರಾಟದ ಮುಖಂಡರು ಮನಗಂಡರು. ಆದ್ದರಿಂದಲೇ 1922 ರಷ್ಟು ಹಿಂದೆಯೇ ಭಾರತ ರಾಷ್ಟ್ರೀಯ ಕಾಂಗ್ರೆಸ್ ತನ್ನ ಶಾಖೆಗಳನ್ನು ಬ್ರಿಟಿಷರ ಪ್ರೆಸಿಡೆನ್ಸಿಗಳು, ಸಂಸ್ಥಾನಗಳ ಪ್ರಕಾರ ಸಂಘಟಿಸದೆ ಭಾಷಾವಾರು ಆಧಾರದಲ್ಲಿ ಸಂಘಟಿಸಿತು. ನಂತರ ಮೋತಿಲಾಲ್ ನೆಹರೂ ಅಧ್ಯಕ್ಷರಾಗಿದ್ದು, ಜವಹರಲಾಲ್ ನೆಹರೂ ಕಾರ್ಯದರ್ಶಿಗಳಾಗಿದ್ದ ನೆಹರೂ ಸಮಿತಿ 1928 ರಲ್ಲಿ ಸಲ್ಲಿಸಿದ ತನ್ನ ವರದಿಯನ್ನು ಸ್ವಾತಂತ್ರ್ಯದ ನಂತರ ದೇಶವನ್ನು ಭಾಷಾ ಆಧಾರದಲ್ಲಿ ಪುನರ್ಸಂಘಟಿಸಬೇಕು ಎಂದು ಹೇಳಿತು. ಈ ವರದಿಯ ಇತರ ಕೆಲವು ಅಂಶಗಳ ಬಗ್ಗೆ ಆಗಿನ ಪ್ರಮುಖ ರಾಜಕೀಯ ಪಕ್ಷಗಳಿಗೆ ಭಿನ್ನಾಭಿಪ್ರಾಯವಿದ್ದರೂ ಭಾಷಾವಾರು ಪ್ರಾಂತ್ಯಗಳ ವಿಚಾರವನ್ನು ಮಾತ್ರ ಎಲ್ಲರೂ ಅನುಮೋದಿಸಿದರು.

ನಿರಾಕರಣೆ

ಆದರೆ ಸ್ವಾತಂತ್ರ್ಯದ ನಂತರ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಕೈಯಲ್ಲಿನ ಬಂಡವಾಳ ಶಾಹಿ-ಭೂಮಾಲಕ ಆಡಳಿತ ಮಾತಿಗೆ ತಪ್ಪಿ ಭಾಷಾವಾರು ಪ್ರಾಂತ್ಯಗಳನ್ನು ರಚಿಸಲು ನಿರಾಕರಿಸಿತು. ಇದಕ್ಕೆ ಕಾರಣವೂ ಸ್ಪಷ್ಟವಾಗಿತ್ತು. ಒಮ್ಮೆ ಅಧಿಕಾರ ಗಳಿಸಿದ ಮೇಲೆ ಕಾಂಗ್ರೆಸ್‌ಗೆ ಭಾರತದ ವಿವಿಧ ದೇಶೀಯತೆಗಳ ಬಗ್ಗೆ ಪ್ರೀತಿಯೇನೂ ಉಳಿದಿರಲಿಲ್ಲ. ಅವರ ಐಕ್ಯತೆಯ ಬಗ್ಗೆಯಾಗಲೀ ಒಂದು ಒಕ್ಕೂಟದಲ್ಲಿ ವಿಭಿನ್ನ ದೇಶೀಯ ಗುಂಪುಗಳ ಐಕ್ಯತೆಯ ಬಗ್ಗೆಯಾಗಲೀ ಅದು ಲಕ್ಷ್ಯ ವಹಿಸಲಿಲ್ಲ. ನಮ್ಮ ಸಂವಿಧಾನದಲ್ಲಿ ಒಕ್ಕೂಟ ತತ್ವವನ್ನು ಸೇರಿಸಿದರೂ ಬ್ರಿಟಿಷರ ಪ್ರಾಂತ್ಯಗಳ ವ್ಯವಸ್ಥೆಯನ್ನೇ ಅಲ್ಪ-ಸ್ವಲ್ಪ ಬದಲಾವಣೆಯೊಂದಿಗೆ ಮುಂದುವರೆಸಲಾಯಿತು. ಒಂದು ವ್ಯತ್ಯಾಸವೆಂದರೆ 'ಅಖಿಲ ಭಾರತ ಸಂಸ್ಥಾನಗಳ ಜನತೆಯ ಸಮ್ಮೇಳನ' ಆರಂಭಿಸಿದ ಹೋರಾಟ ದಿಂದಾಗಿ ಹಲವು ಸಂಸ್ಥಾನಗಳನ್ನು ಪಕ್ಕದ ಪ್ರಾಂತ್ಯಗಳೊಂದಿಗೆ ಸೇರಿಸಿ ಪ್ರಾಂತ್ಯಗಳನ್ನು 'ಎ', 'ಬಿ', 'ಸಿ' ಪ್ರಾಂತ್ಯ ಗಳೆಂದು ವಿಂಗಡಿಸಲಾಯಿತು. ಆಗಲೂ ಕೂಡಾ ಪೆಪ್ಸು(ಪಾಟಿಯಾಲಾ ಮತ್ತು ಪೂರ್ವ ಪಂಜಾಬ್ ಸಂಸ್ಥಾನಗಳ ಸಂಘ), ಹೈದರಾಬಾದ್, ತಿರುವಾಂಕೂರು, ಕೊಚ್ಚಿ ಮತ್ತಿತರ ಸಂಸ್ಥಾನಗಳನ್ನು ಪ್ರತ್ಯೇಕವಾಗಿ ಮುಂದುವರೆಸಲಾಯಿತು.

ಒಮ್ಮೆ ಅಧಿಕಾರ ಗಳಿಸಿದ ಮೇಲೆ ಕಾಂಗ್ರೆಸ್‌ಗೆ ಭಾರತದ ವಿವಿಧ ದೇಶೀಯತೆಗಳ ಬಗ್ಗೆ ಪ್ರೀತಿಯೇನೂ ಉಳಿದಿರಲಿಲ್ಲ. ಅವರ ಐಕ್ಯತೆಯ ಬಗ್ಗೆಯಾಗಲೀ ಒಂದು ಒಕ್ಕೂಟದಲ್ಲಿ ವಿಭಿನ್ನ ದೇಶೀಯ ಗುಂಪುಗಳ ಐಕ್ಯತೆಯ ಬಗ್ಗೆಯಾಗಲೀ ಅದು ಲಕ್ಷ್ಯ ವಹಿಸಲಿಲ್ಲ.

ಹೈದರಾಬಾದ್ ಮತ್ತು ಕಾಶ್ಮೀರ

ರಾಜ-ಮಹಾರಾಜರುಗಳ ಸಂಸ್ಥಾನಗಳನ್ನು ಭಾರತದಲ್ಲಿ ವಿಲೀನಗೊಳಿಸುವಲ್ಲಿ ಬಹಳ ಸಮಸ್ಯೆಗಳೇನೂ ಬರಲಿಲ್ಲ. ಈ ಸುಮಾರು 560 ಸಂಸ್ಥಾನಗಳ (ಇವುಗಳಲ್ಲಿ ಕೆಲವು 45 ಕಿಲೋಮೀಟರ್‌ಗಳಷ್ಟು ಇರಲಿಲ್ಲ) ನಿರಂಕುಶ ಪ್ರಭುಗಳು ಗಾಳಿ ಎತ್ತ ಬೀಸುತ್ತಿದೆ ಎಂಬುದನ್ನು ಅರಿತರು ಅಥವಾ ತಮ್ಮ ಸಂಸ್ಥಾನಗಳ ಜನಗಳ ಹೋರಾಟದ ಒತ್ತಡವೂ ಅವರ ಮೇಲಿತ್ತು. ಆದ್ದರಿಂದ ಪ್ರತಿರೋಧವೇನೂ ಇಲ್ಲದೆ ಅವರು ಭಾರತ ಸಂಘದೊಡನೆ ವಿಲೀನವಾದರು. ಅವರದ್ದು ಒಂದೇ ಶರತ್ತು-ಅವರ ರಾಜಧನ, ಸ್ಥಾನಮಾನಗಳನ್ನು ಉಳಿಸಬೇಕು ಎಂದಷ್ಟೇ (ಇದನ್ನೂ ಮುಂದೆ 1969 ರಲ್ಲಿ ಆಗಿದ್ದ ರಾಜಕೀಯ ಸನ್ನಿವೇಶದ ಒತ್ತಡದಲ್ಲಿ ರದ್ದುಗೊಳಿಸಲಾಯಿತು).

ಈ ಹಂತದಲ್ಲಿ ಕೇವಲ ಮೂರು ಸಂಸ್ಥಾನಗಳಷ್ಟೇ ಭಾರತದೊಡನೆ ವಿಲೀನಗೊಳ್ಳಲು ನಿರಾಕರಿಸಿದ್ದು - ಹೈದರಾಬಾದ್, ಜುನಾಗಡ್ ಮತ್ತು ಕಾಶ್ಮೀರ. ಅವರು ಬ್ರಿಟಿಷರು ಭಾರತವನ್ನು ಬಿಡುವಾಗ ಮೌಂಟ್‌ಬ್ಯಾಟನ್ ಅವಾರ್ಡಿನ ಒಂದು ಕುತಂತ್ರದ ಅಂಶವನ್ನು ಬಳಸಿಕೊಳ್ಳಲು ಪ್ರಯತ್ನಿಸಿದರು. ತಾವು ಬಿಟ್ಟುಹೋದ ಮೇಲೂ ಈ ಉಪಖಂಡದಲ್ಲಿ ತಮ್ಮ ಪ್ರಭಾವ ಚಲಾಯಿಸಲು ಬ್ರಿಟಿಷರು ಈ ಅವಾರ್ಡಿನಲ್ಲಿ ರಾಜ-ಮಹಾರಾಜರುಗಳ ಸಂಸ್ಥಾನಗಳಿಗೆ ಭಾರತ ಅಥವಾ ಪಾಕಿಸ್ತಾನವನ್ನು ಸೇರುವ ಅಥವಾ ಸ್ವತಂತ್ರವಾಗಿರುವ ಅವಕಾಶ ಕಲ್ಪಿಸಿದ್ದರು. ಜುನಾಗಡದ ಆಳರಸ ಸ್ವಲ್ಪ ಒತ್ತಡಕ್ಕೆ ಮಣಿದ.



ಆದರೆ ಉಳಿದೆರೆಡನ್ನು ವಿಲೀನಗೊಳಿಸುವುದು ಅಷ್ಟು ಸುಲಭವಾಗಿರಲಿಲ್ಲ. ಹೈದರಾಬಾದಿನಲ್ಲಿ ಕಮ್ಯುನಿಸ್ಟರು ಆದಾಗಲೇ ನಿಜಾಮನ ವಿರುದ್ಧ ಸಶಸ್ತ್ರ ಹೋರಾಟ ನಡೆಸಿದ್ದರು. ಹೈದಾರಾಬಾದನ್ನು ಭಾರತ ಸಂಘದೊಡನೆ ವಿಲೀನಗೊಳಿಸಬೇಕು ಎಂಬುದು ಅವರ ಬೇಡಿಕೆಗಳಲ್ಲಿ ಒಂದಾಗಿತ್ತು. ಆದರೆ ತಾನು ಸ್ವತಂತ್ರವಾಗಿರುವುದಾಗಿ ನಿಜಾಮ ಹಠ ಹಿಡಿದಿದ್ದ. ಅಂತಿಮವಾಗಿ ನಿಜಾಮ ವಿಲೀನಕ್ಕೆ ಒಪ್ಪುವಂತೆ ಮಾಡುವ ಹೆಸರಲ್ಲಿ ನೆಹರೂ ಸರ್ಕಾರ ಸೇನಾಪಡೆಗಳನ್ನು ಕಳಿಸಿತು. ಕಮ್ಯುನಿಸ್ಟ್ ಪಕ್ಷದ ಮತ್ತು ಆಂಧ್ರ ಮಹಾಸಭಾದ ಹೆಚ್ಚುತ್ತಿದ್ದ ಪ್ರಭಾವವನ್ನು ಮುರಿಯುವುದೂ ಅವರ ಉದ್ದೇಶಗಳಲ್ಲಿ ಒಂದಾಗಿತ್ತು. ಅಂತೂ ಕೊನೆಗೆ ನಿಜಾಮ ಮಣಿದ.

ಕಾಶ್ಮೀರದ ಜನತೆ ಭಾರತದೊಂದಿಗೆ ಸೇರಬಯಸಿದರೂ ಅಲ್ಲಿಯ ಆಳರಸ ಮಹಾರಾಜ ಹರಿಸಿಂಗ್ ತನ್ನ ಪ್ರತ್ಯೇಕ ಅಳ್ವಿಕೆಯನ್ನು ಉಳಿಸಿಕೊಳ್ಳಬಯಸಿದ್ದ. ಆದರೆ ಆಗ ಘಟನೆಗಳು ಅನಿರೀಕ್ಷಿತ ತಿರುವು ಪಡೆದವು. ಹೊಸದಾಗಿ ಉಂಟಾಗಿದ್ದ ಪಾಕಿಸ್ತಾನದ ಆಳರಸರು ಕಾಶ್ಮೀರ ಮುಸ್ಲಿಂ ಬಹುಸಂಖ್ಯೆಯ ರಾಜ್ಯವಾದ್ದರಿಂದ ಅದು ಪಾಕಿಸ್ತಾನಕ್ಕೆ ಸೇರಿದ್ದು ಎಂಬ ಅರ್ಥಹೀನ ನಿಲುವು ತಳೆದರು. ಅಷ್ಟೇ ಅಲ್ಲ, ಕಾಶ್ಮೀರ ಅವರನ್ನು ಸೇರುವಂತೆ ಬಲವಂತ ಮಾಡಲು ಕಾಶ್ಮೀರದೊಳಗೆ ಸಶಸ್ತ್ರ ಧಾಳಿಕೋರರನ್ನು ಕಳಿಸಿದರು. ಅವರು ರಾಜ್ಯದ ರಾಜಧಾನಿ ಶ್ರೀನಗರದ ಬಳಿಯವರೆಗೂ ಬಂದಿದ್ದರು. ಆದರೆ ನ್ಯಾಷನಲ್ ಕಾನ್ಫರೆನ್ಸ್‌ನ ನೇತೃತ್ವದಲ್ಲಿ ಅಲ್ಲಿಯ ಜನ ಧಾಳಿಕೋರರ ಮೇಲೆ ಒಂದಾಗಿ ಎದ್ದುನಿಂತರು. ಹಾಗೂ ತಿಂಗಳುಗಳ ಕಾಲ ಅವರ ವಿರುದ್ಧ ಹೋರಾಡಿದರು. ಒಂದೆಡೆ ಪಾಕಿಸ್ತಾನಿ ಬೆಂಬಲಿತ ಧಾಳಿಕೋರರು, ಇನ್ನೊಂದೆಡೆ ಜನತಾ ಆಂದೋಲನ, ಇವೆರೆಡರ ನಡುವೆ ಅಪ್ಪಚ್ಚಿಯಾದ ಮಹಾರಾಜ ನೆಹರೂ ಸರ್ಕಾರಕ್ಕೆ ತಕ್ಷಣ ನೆರವು ನೀಡುವಂತೆ ತುರ್ತು ಸಂದೇಶ ಕಳಿಸಿದ. ನೆಹರೂ ಆ ರಾಜ್ಯದೊಳಗೆ ಸೇನಾಪಡೆಗಳನ್ನು ಕಳಿಸಿದರು. ಧಾಳಿಕೋರರನ್ನು ಹಿಮ್ಮೆಟ್ಟಿಸಲಾಯಿತು. ಆದರೆ ಅಷ್ಟರಲ್ಲೇ ಪಾಕಿಸ್ತಾನದ ಹತೋಟಿಗೆ ರಾಜ್ಯದ ಒಂದು ಭಾಗ ಒಳಪಟ್ಟಿತ್ತು. ಅದೀಗಲೂ ಪಾಕಿಸ್ತಾನ ಕೈಯಲ್ಲಿದೆ.

ಇತ್ತ ಮಹಾರಾಜ ಭಾರತವನ್ನು ಸೇರುವ ಒಂದು ಒಪ್ಪಂದಕ್ಕೆ ಸಹಿ ಹಾಕಬೇಕಾಗಿ ಬಂತು. ಧರ್ಮನಿರಪೇಕ್ಷ ಭಾರತವನ್ನು ಸೇರುವ ಕಾಶ್ಮೀರಿಗಳ ಕನಸು ನನಸಾಯಿತು.

ಆ ದಿನಗಳಲ್ಲಿ ಆರ್‌ಎಸ್‌ಎಸ್ ಕಾಶ್ಮೀರದಲ್ಲಿ ಪ್ರಜಾ ಪರಿಷತ್ ಎಂಬ ಹೆಸರಲ್ಲಿ ಸಕ್ರಿಯವಾಗಿತ್ತು. ಆದರೆ ಈ ರಾಷ್ಟ್ರವಾದಿಯೆಂದು ಹೇಳಿಕೊಳ್ಳುವ ಸಂಸ್ಥೆ ಆಗ ಯಾವುದೇ ನಾಚಿಕೆಯಿಲ್ಲದೆ ಸ್ವತಂತ್ರವಾಗಿರ ಬೇಕೆಂದಿದ್ದ ಮಹಾರಾಜನನ್ನು ಬೆಂಬಲಿಸುತ್ತಿತ್ತು ಎಂಬುದು ಇತಿಹಾಸದ ಸತ್ಯ ಸಂಗತಿ. ಅಷ್ಟೇ ಅಲ್ಲ, ಪ್ರಜಾ ಪರಿಷತ್ತಿನ ಮಂದಿ ಪಾಕಿಸ್ತಾನಿ ಬೆಂಬಲಿತ ಧಾಳಿಕೋರರ ವಿರುದ್ಧ ಹೋರಾಡಲಿಲ್ಲ, ಬದಲಾಗಿ ಆ ಧಾಳಿಕೋರರ ವಿರುದ್ಧ ಹೋರಾಡುತ್ತಿದ್ದವರನ್ನೇ ಸಾಯಿಸುತ್ತಿದ್ದರು.

ಹೋರಾಟಗಳ ಹೊಸ ಅಲೆ

ಆದರೆ ಆಗಲೂ ಕೂಡಾ ದೇಶದ ಹೊಸ ಆಳರಸಲು ದೇಶವನ್ನು ಭಾಷಾ ಆಧಾರದ ಮೇಲೆ ಮರು ಸಂಘಟಿಸಲು ನಿರಾಕರಿಸಿದರು. ಆದ್ದರಿಂದ ದೇಶ ವಿವಿಧೆಡೆ ಹೋರಾಟಗಳ ಹೊಸ ಅಲೆಯೊಂದು ಮೂಡಿಬಂತು. ಐಕ್ಯ ಕೇರಳ, ವಿಶಾಲಾಂಧ್ರ, ಸಂಯುಕ್ತ ಮಹಾರಾಷ್ಟ್ರ ಮುಂತಾದ ಘೋಷಣೆಗಳು ಕೇಳಿಬಂದವು. ವಿವಿಧ ಪ್ರೆಸಿಡೆನ್ಸಿಗಳು, ಪ್ರಾಂತ್ಯಗಳಲ್ಲಿ ಹರಿದುಹಂಚಿಹೋಗಿದ್ದ ಒಂದೇ ಭಾಷೆಯಾಡುವ ಜನಗಳು ಒಂದು ದೇಶೀಯತೆ ಬೆಳೆಸಲು ಸ್ವಾತಂತ್ರ್ಯ ನಂತರವೂ ಮುಂದುವರೆದ ಅಡ್ಡಿಯ ವಿರುದ್ಧ ಹೋರಾಟಗಳು ಮೂಡಿಬಂದವು.

ಈ ಹೋರಾಟಗಳು ಶಕ್ತಿಯುತವಾಗಿದ್ದವು. ಅವುಗಳಲ್ಲಿ ಹಲವು ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ನಡೆದವು. ಇಎಂಎಸ್ ಮತ್ತು ಅವರ ಸಂಗಾತಿಗಳು ಕೇರಳದ ರಾಜ್ಯದ ರಚನೆಯಲ್ಲಿ ನೇತೃತ್ವದ ಪಾತ್ರವಹಿಸಿದರು. ಪಿ. ಸುಂದರಯ್ಯ ಮತ್ತು ಇತರ ಕಮ್ಯುನಿಸ್ಟರು ಆಂಧ್ರಪ್ರದೇಶದ ರಚನೆಯಲ್ಲಿ ಅಂತಹುದೇ ಪಾತ್ರವಹಿಸಿದರು. ಸಂಯುಕ್ತ ಮಹಾರಾಷ್ಟ್ರದ ಹೋರಾಟದ ಮುಂಚೂಣಿಯಲ್ಲಿ ಡಾಂಗೆ ಮತ್ತಿತರ ಮುಖಂಡರಿದ್ದರು. ಮಹಾನ್ ತೆಲಂಗಾಣ ಸಶಸ್ತ್ರ ಹೋರಾಟ ಸ್ವಾತಂತ್ರ್ಯದ

ಪುಟ 10 ಕ್ಕೆ



ವಿಶ್ವಸಾಮ
ಹೋರಾ

**ಮುಂಬಯಿಯಲ್ಲಿ ನಡೆದ 'ವಿಶ್ವಸಾಮಾಜಿಕ ವೇದಿಕೆಯ (WSF'04) ನಾಲ್ಕನೇ
ಸಾವಿರಕ್ಕೂ ಹೆಚ್ಚು ಚುಳುವಳಿಗಳು / ಸಂಘಟನೆಗಳಿಂದ ಬಂದ ಲಕ್ಷಕ್ಕೂ ಹೆಚ್ಚು
ನಡೆಯುವ ನೂರಾರು ಸಮ್ಮೇಳನ, ವಿಚಾರ-ಸಂಕಿರಣಗಳು, ದುಂಡು
ಭಾಗವಹಿಸುವುದು ಎಂಬುದೇ ದೊಡ್ಡ ಸಮಸ್ಯೆ. ಟಿ.ವಿಯ ಮು
ಮಾಡಬೇಕಾಯಿತು. ಈ ಅದ್ಭುತ
"ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು...
ಜಾಗತೀಕರಣದ ವಿರುದ್ಧ ಮಹಾನ್ ಹ
ಅತಿ**

ಶರತ್‌ಚಂದ್ರ

ಐಕ್ಯರಂಗದ ಇತ್ತೀಚಿನ ಸಂಚಿಕೆಯೊಂದರಲ್ಲಿ ಡಬ್ಲ್ಯು.ಎಸ್.ಎಫ್. ಬಗ್ಗೆ ಸಿಪಿಐ(ಎಂ) ಮತ್ತು ಸರಿಯಾದ ಎಡದೃಷ್ಟಿಕೋನದ ಬಗ್ಗೆ ಓದಿದ್ದೀರಿ. ಅಲ್ಲಿ ಸೀತಾರಾಂ ಯೆಚೂರಿ ಒಂದು ಮಾತು ಹೇಳುತ್ತಾರೆ. 'ಬರುವ ದಿನಗಳಲ್ಲಿ ಜಾಗತೀಕರಣದ ವಿರೋಧಿ ಚಳುವಳಿಯ ಸ್ವರೂಪ, ಅದು ಹಿಡಿಯುವ ಹಾದಿ ಬಗ್ಗೆ ತೀವ್ರ ಚರ್ಚೆಗಳು ನಡೆಯುತ್ತವೆ. ಡಬ್ಲ್ಯುಎಸ್‌ಎಫ್ ಮೇಲೂ ಅದರ ಪರಿಣಾಮಗಳು ಆಗುತ್ತವೆ. ಡಬ್ಲ್ಯುಎಸ್‌ಎಫ್‌ನಲ್ಲೇ ಪ್ರಮುಖ ಬದಲಾವಣೆ ಆಗಬಹುದು" ಡಬ್ಲ್ಯುಎಸ್‌ಎಫ್ ಸಮಿತಿ ಸಂಘಟಿಸಿದ ಒಂದು ದುಂಡುಮೇಜಿನಲ್ಲಿ ಈ ಬಗ್ಗೆ ಚರ್ಚೆ ನಡೆಯಿತು. ಬೇರೆ ಸಮ್ಮೇಳನ, ವಿಚಾರ-ಸಂಕಿರಣ, ಕಾರ್ಯಾಗಾರಗಳಲ್ಲೂ, ಭೇಟಿಗಳಲ್ಲೂ ಈ ಬಗ್ಗೆ ಸತತ ಚರ್ಚೆ ನಡೆಯಿತು.

ಡಬ್ಲ್ಯುಎಸ್‌ಎಫ್‌ನ ಸ್ವರೂಪ ಈಗಿನ ಬೆಳವಣಿಗೆಯ ಹಂತದಲ್ಲಿ ಸರಿಯಾಗಿದೆ. ಆದರೆ ಮುಂದಿನ ದಿನಗಳಲ್ಲಿ ಎಂಟು-ಹತ್ತು ಪ್ರಮುಖ ವಿಷಯಗಳ ಬಗ್ಗೆ ಒಮ್ಮತ, ಸ್ಪಷ್ಟ ಬದಲಿ ಕೊಡಲು ಸಾಧ್ಯವಾಗುವತ್ತ ಅದು ನಡೆಯಬೇಕು. ಬರಿ ವೈವಿಧ್ಯಮಯ ಚಳುವಳಿ, ವೇದಿಕೆ ಮಾತ್ರವಾಗಿ ಇರಬಾರದು ಎಂದು ಕೆಲವರ ಅಭಿಪ್ರಾಯ. ಒಮ್ಮತ, ಸ್ಪಷ್ಟ ಬದಲಿ ಮಾತ್ರ ಸಾಲದು ಅದಕ್ಕೊಂದು ಕಾರ್ಯಕ್ರಮಬದ್ಧ ಹೋರಾಟ ರೂಪಿಸುವುದು ಸಾಧ್ಯವಾಗಬೇಕು. 'ಇರಾಕ್ ಯುದ್ಧ' 'ಡಬ್ಲ್ಯು.ಟಿ.ಓ ಕಾಂಕುನ್ ಸಭೆ' ಬಗ್ಗೆ ಇಂತಹ ಕಾರ್ಯಾಚರಣೆ ಸಾಧ್ಯವಾಗಿದೆ. ಅದನ್ನು ಇನ್ನು ಹಲವು ವಿಷಯಗಳಿಗೆ ವಿಸ್ತರಿಸಬೇಕು ಎನ್ನುತ್ತಾರೆ- ಇನ್ನೂ ಕೆಲವರು.

ರಾಜಕೀಯದ ಬಗ್ಗೆ ಡಬ್ಲ್ಯುಎಸ್‌ಎಫ್‌ಗೆ ಸ್ಪಷ್ಟ ನಿಲುವು ಇಲ್ಲ. ರಾಜಕೀಯ ಧೋರಣೆಗಳನ್ನು ಅಂಗೀಕರಿಸಲು ಡಬ್ಲುಎಸ್‌ಎಫ್ ಹಿಂಜರಿಯಬಾರದು. ಡಬ್ಲುಎಸ್‌ಎಫ್ ಜನತೆಯ, ಜನತಾ ಸಂಘಟನೆಗಳ ಮತ್ತು ಬದಲು ಸಿದ್ಧವಿರುವ ಸರ್ಕಾರಗಳು 'ವಿಶಾಲ ಐಕ್ಯರಂಗ'ವಾಗಬೇಕು. ಡಬ್ಲ್ಯುಎಸ್‌ಎಫ್ 30 ರ ದಶಕದ ವಿಶಾಲ ಫ್ಯಾಸಿಸ್ಟ್ ವಿರೋಧಿ ರಂಗ'ದ ತರಹದ ಅಂತರಾಷ್ಟ್ರೀಯ ರಾಜಕೀಯರಂಗದ ಸ್ವರೂಪ ಪಡೆಯಬೇಕು.
ಡಬ್ಲ್ಯುಎಸ್‌ಎಫ್ 'ಜನತಾ ವಿಶ್ವಸಂಸ್ಥೆ'ಯಾಗಬೇಕು. 'ಜನತಾ ಜಾಗತಿಕ ಸರ್ಕಾರ' ಆಗುವತ್ತ ಮುನ್ನಡೆಯಬೇಕು. ಡಬ್ಲ್ಯುಎಸ್‌ಎಫ್ ಅಂತರಾಷ್ಟ್ರೀಯ ಕ್ರಾಂತಿಕಾರಿ ಮುಂಚೂಣಿ ಕೇಂದ್ರವಾಗಬೇಕು. ಎರಡು ಮಹಾಯುದ್ಧಗಳ ನಡುವೆ ಕಮ್ಯುನಿಸ್ಟ್ ಅಂತರಾಷ್ಟ್ರೀಯ ವಹಿಸಿದ ಪಾತ್ರವನ್ನು ಡಬ್ಲ್ಯುಎಸ್‌ಎಫ್ ಕೊನೆಗು ವಹಿಸಬೇಕು. ಇವು ಡಬ್ಲ್ಯು.ಎಸ್.ಎಫ್‌ನ ಮುಂಬರುವ ಸ್ವರೂಪದ ಬಗ್ಗೆ ಇನ್ನೂ ಹಲವು ಐಡಿಯಾಗಳು.

ಡಬ್ಲ್ಯುಎಸ್‌ಎಫ್ 3ನೇ ಸಮಾವೇಶ ಮತ್ತು 4ನೇ ಸಮಾವೇಶದ ನಡುವೆ ಸಾಕಷ್ಟು ಬದಲಾಗಿದೆ. ಹಿಂದೆ ಅದು ನಿಜವಾಗಲೂ ಮಾತಿನ ಮಂಟಪವಾಗಿತ್ತು. ಬರಿಯ ಪ್ರತಿಭಟನಾ ವೇದಿಕೆಯಾಗಿತ್ತು. ಕಳೆದ ಫೆಬ್ರುವರಿ 15, ರ ಮಹಾನ್ ಯುದ್ಧ ವಿರೋಧಿ ಚಳುವಳಿ ಮತ್ತು 'ಕಾಂಕುನ್ ಅಸ್ತವ್ಯಸ್ತಗೊಳಿಸಿ' ಮುಂತಾದ ಮಹಾನ್ ಅಂತರಾಷ್ಟ್ರೀಯ ಕಾರ್ಯಾಚರಣೆ ಕೈಗೊಂಡು ಸಫಲವಾಗಿದೆ. 4ನೇ ಸಮಾವೇಶ ಸಂಘಟಿಸುವ ರೀತಿಯಲ್ಲಿ ಇಂಡಿಯಾ ಸಮಿತಿ ಮಾಡಿದ ಬದಲಾವಣೆಗಳು ಗಮನಾರ್ಹವಾಗಿದೆ. 4ನೇ ಸಮಾವೇಶದಲ್ಲಿ ನಡೆದ ಚರ್ಚೆ ಸಹ ಒಮ್ಮತದ ಬದಲಿ ರೂಪಿಸುವ (ಪ್ರತಿ ವಿಚಾರದ ಮೇಲೂ) ದಿಕ್ಕಿನಲ್ಲಿ ಸಾಗಿದೆ. ಸ್ಪಷ್ಟ ಒಮ್ಮತದ ಬದಲಿ ರೂಪಿಸಿದಲ್ಲೆಲ್ಲಾ, ಕಾರ್ಯಾಚರಣೆಯ, ಕಾರ್ಯಕ್ರಮ ಹಾಕುವತ್ತ ಸಾಗಿದೆ. ಎಡ ರಾಜಕೀಯ ಪಕ್ಷಗಳ ಬಗ್ಗೆ ಮಡಿವಂತಿಕೆ ದೂರವಾಗಿದೆ. ಎಲ್ಲಾ ಖಂಡಗಳಲ್ಲೂ, ಹೆಚ್ಚಿನ ಪ್ರಮುಖ ದೇಶಗಳಲ್ಲಿ ಡಬ್ಲ್ಯು.ಎಸ್.ಎಫ್ ಪ್ರಕ್ರಿಯೆ ಗಟ್ಟಿಗೊಂಡಿದ್ದು ನಿಜವಾದ ಜಾಗತಿಕ ಸಂಘಟನೆಯಾಗಿದೆ. ಹಿಂದೆ ಅದು ಲ್ಯಾಟಿನ್ ಅಮೇರಿಕದ 'ವಿಶಿಷ್ಟ ಪ್ರಕ್ರಿಯೆ'ಯಾಗಿತ್ತು. ಏಷ್ಯಾ, ಯುರೋಪು ಸಾಮಾಜಿಕ ವೇದಿಕೆ ಡಬ್ಲ್ಯುಎಸ್‌ಎಫ್‌ಗೆ ಹೊಸ ಚಾಲನೆ, ಸ್ವರೂಪ ಆಗಲೇ ನೀಡಿದೆ. ಸಾಮ್ರಾಜ್ಯಶಾಹಿ - ಬಂಡವಾಳಶಾಹಿಗೆ ಬದಲಿ ರೂಪಿಸುವ ಮಹಾನ್ ಅಂತರಾಷ್ಟ್ರೀಯ ಚಳುವಳಿಯಲ್ಲಿ ಡಬ್ಲ್ಯುಎಸ್‌ಎಫ್ ತನ್ನ ಪಾತ್ರ ವಹಿಸುತ್ತ ದೃಢ ಹೆಜ್ಜೆ ಇಡುವ ಭರವಸೆ ಮೂಡಿದೆ.

ಡಬ್ಲ್ಯುಎಸ್‌ಎಫ್‌ನ ಪ್ರಮುಖ ಚರ್ಚಾ ವಿಷಯಗಳು


ಈ ಬಾರಿಯ 4ನೇ ಡಬ್ಲ್ಯು.ಎಸ್.ಎಫ್ ಸಮಾವೇಶ 13 ವಿಷಯಗಳನ್ನು ಆಯ್ದುಕೊಂಡು ಅದರ ಸುತ್ತ ಸಮ್ಮೇಳನ, ಚರ್ಚೆ, ದುಂಡುಮೇಜು ಏರ್ಪಡಿಸಿತ್ತು. ಇದು ಡಬ್ಲ್ಯು.ಎಸ್.ಎಫ್ ಸಮಿತಿ ಸ್ವತಃ ಏನನ್ನೂ ಸಂಘಟಿಸದೆ ಇರುವ ಪರಂಪರೆ ಮುರಿದಂತಾಗಿದೆ. ಈ ಪ್ರಮುಖ ಚರ್ಚಾ ವಿಷಯಗಳ ಸುತ್ತ ಡಬ್ಲ್ಯುಎಸ್‌ಎಫ್ ನಲ್ಲಿ ಸೇರಿರುವ ಎರಡು ಸಾವಿರಕ್ಕೂ ಹೆಚ್ಚು ಸಂಘಟನೆಗಳು ಒಮ್ಮತಕ್ಕೆ, ಬದಲಿ ರೂಪಿಸಲು ಸಾಧ್ಯವೇ ಎಂಬುದು ಈ ಪ್ರಯತ್ನದ ಉದ್ದೇಶವಾಗಿತ್ತು. ಡಬ್ಲ್ಯು.ಎಸ್.ಎಫ್ ಎತ್ತಿಕೊಂಡು ಈ 13 ಪ್ರಮುಖ ಚರ್ಚಾ ವಿಷಯಗಳ ಪಟ್ಟಿ ಹೀಗಿದೆ.

ಸಮ್ಮೇಳನಗಳು

1. ಆಹಾರ ಸಾರ್ವಭೌಮತ್ವ ಮತ್ತು ಪ್ರಾಕೃತಿಕ ಸಂಸಾಧನಗಳು
2. ಮಿಲಿಟರಿ ವಾದ, ಯುದ್ಧ ಮತ್ತು ಶಾಂತಿ
3. ಮಾಧ್ಯಮಗಳು, ಸಂಸತಿ ಮತ್ತು ಜ್ಞಾನ
4. ಯುದ್ಧದ ವಿರುದ್ಧ ಮಹಿಳೆಯರು, ಮಹಿಳೆಯರ ವಿರುದ್ಧ ಯುದ್ಧಗಳು
5. ಜಾಗತೀಕರಣ, ಆರ್ಥಿಕ ಮತ್ತು ಸಾಮಾಜಿಕ ಭದ್ರತೆ
6. ದಮನ ಮತ್ತು ಬಹಿಷ್ಕಾರ : ಜನಾಂಗವಾದ ಮತ್ತು ಜಾತಿವಾದ
7. ಕೆಲಸ ಮತ್ತು ಕಾರ್ಮಿಕರ ಜಗತ್ತು
8. ಧಾರ್ಮಿಕ, ಜನಾಂಗೀಯ ಮತ್ತು ಭಾಷಾ ದಮನ ಮತ್ತು ಬಹಿಷ್ಕಾರ


ಚರ್ಚೆ, ದುಂಡುಮೇಜು

1. ಜಾಗತೀಕರಣ, ಜಾಗತಿಕ ಆಳ್ವಿಕೆ ಮತ್ತು ರಾಷ್ಟ್ರೀಯ ಪ್ರಭುತ್ವ
2. ಡಬ್ಲ್ಯುಟಿಓದ ಭವಿಷ್ಯ
3. ರಾಜಕೀಯ ಪಕ್ಷಗಳು ಮತ್ತು ಸಾಮಾಜಿಕ ಚಳುವಳಿಗಳು
4. ಜಾಗತೀಕರಣ ಮತ್ತು ಅದಕ್ಕೆ ಬದಲಿಗಳು
5. ಜಾಗತೀಕರಣದ ಯುದ್ಧದ ವಿರುದ್ಧ ಹೋರಾಟ ಮತ್ತು ಡಬ್ಲ್ಯುಎಸ್ ಎಫ್‌ನ ಮಹತ್ವ



ಅಮೇರಿಕದ ಇರಾಕ್ ಆಕ್ರಮಣದ ವಾರ್ಷಿಕದಂದು ಬೃಹತ್ ಪ್ರತಿಭಟನೆಗೆ ಕರೆ

'ಮಾರ್ಚ್ 20-ಇರಾಕಿ ಅತಿಕ್ರಮಣ ತೆರವು ಮಾಡಿ'




ವಿಶ್ವ ಸಾಮಾಜಿಕ ವೇದಿಕೆ ಬರಿಯ 'ಮಾತಿನ ಮಂಟಪ' ಕಟ್ಟುತ್ತದೆ. ಅದರಿಂದ ಏನೂ ಆಗುವುದಿಲ್ಲ ಎಂದು ಮೂದಲಿಸುವವರು ಇದ್ದಾರೆ. ಜಾಗತೀಕರಣದ ಭಟ್ಟಂಗಿಗಳು ಮಾತ್ರವಲ್ಲ, ವೇದಿಕೆಯ ಮಹತ್ವವನ್ನು ಅರ್ಥ ಮಾಡಿಕೊಳ್ಳದ ಹಲವು ನಿಜವಾದ ಜಾಗತೀಕರಣ - ವಿರೋಧಿಗಳು ಈ ರೀತಿ ಮೂದಲಿಸುತ್ತಾರೆ. ಡಬ್ಲ್ಯುಎಸ್ ಎಫ್ ಮುಂಬಯಿಯಲ್ಲಿ ಸೇರಿದ ನೂರಕ್ಕೂ ಹೆಚ್ಚು ಜಾಗತಿಕ ಯುದ್ಧ - ವಿರೋಧಿ ಚಳುವಳಿಗಳ ಸಭೆ ಮಾರ್ಚ್ 20 ರಂದು ಒಂದು ಪ್ರತಿಭಟನಾ ಕಾರ್ಯಾಚರಣೆಗೆ ಕರೆ ಕೊಟ್ಟಿದೆ. 'ಅಮೇರಿಕ ಸೈನ್ಯ ಇರಾಕ್ ತೆರವು ಮಾಡಲಿ' 'ಇನ್ನೂ ಯುದ್ಧ ಬೇಡ' ಎಂಬ ಘೋಷಣೆಯೊಂದಿಗೆ ಜಾಗತಿಕ ಪ್ರತಿಭಟನೆಗೆ ಕರೆ ಕೊಟ್ಟಿದೆ. ಕಳೆದ ವರ್ಷ ಮಾರ್ಚ್ 20ರಂದು ಅಮೇರಿಕದ ಸೈನ್ಯ ಇರಾಕ್ ಮೇಲೆ ಆಕ್ರಮಣ ಆರಂಭಿಸಿತ್ತು. ಅದರ ಮೊದಲ ವಾರ್ಷಿಕವನ್ನು ಈ ರೀತಿ ಆಚರಿಸಬೇಕೆಂದು ಕರೆ ನೀಡಿದೆ.

ಕಳೆದ ವರ್ಷ ಅಮೇರಿಕಾದ ಆಕ್ರಮಣದ ವಿರುದ್ಧ ಮೊದಲ ಚಾರಿತ್ರಿಕ ಫೆಬ್ರುವರಿ 15 ಪ್ರತಿಭಟನಾ ಕಾರ್ಯಾಚರಣೆಯನ್ನು ಇದು ಮೀರಿಸಬೇಕೆಂದು ಕರೆ ನೀಡಲಾಗಿದೆ. ಕಳೆದ ಫೆಬ್ರುವರಿ 15 ರ ಕಾರ್ಯಾಚರಣೆಯು 3 ಜನ ಕೋಟಿ ಒಂದೇ ದಿನ ಬೀದಿಗಿಳಿದು ಚರಿತ್ರೆ ನಿರ್ಮಿಸಿದ್ದರು. ಅದು ಡಬ್ಲ್ಯುಎಸ್‌ಎಫ್-03 ನಲ್ಲಿ ಇಂತಹುದೇ ಕರೆಗೆ ಓಗೊಟ್ಟು ನಡೆದ ಕಾರ್ಯಾಚರಣೆ ಎಂದು 'ಮಾತಿನ ಮಂಟಪ'ದ ಆಪಾದನೆ ಮಾಡಿದವರು ನೆನಪಿನಲ್ಲಿಟ್ಟು ಕೊಳ್ಳಬೇಕು. ಇದೇ ರೀತಿ 'ಕಾಂಕುನ್‌ನ ಡಬ್ಲ್ಯುಟಿಓ ಸಭೆ'ಯನ್ನು ಅಸ್ತವ್ಯಸ್ತಗೊಳಿಸಬೇಕು ಎಂಬ ಕರೆ ಸಹ ಡಬ್ಲ್ಯು.ಎಸ್.ಎಫ್ -03 ನಿಂದ ಹೊರಟ ಕರೆ. ಆ ಚಳುವಳಿಯ ಪರಿಣಾಮವಾಗಿ ಕಾಂಕುನ್‌ನಲ್ಲಿ ಡಬ್ಲ್ಯು.ಟಿ.ಓ ಸಭೆಯಲ್ಲಿ ಶ್ರೀಮಂತರ ಅಜೆಂಡಾ ಮೂಲೆಗುಂಪಾಯಿತು.



ಕರ್ನಾಟಕದಿಂದ ಭಾಗವಹಿಸಿದ 'ಸಮುದಾಯ' ತಂಡ

ಜಿಕ ವೇದಿಕೆ 4ನೇ ಮಹಾಮೇಳ
ದ ಸಾಗರ ಸಂಗಮ



ಶದಲ್ಲಿ ಭಾಗವಹಿಸುವುದು ಒಂದು ಅದ್ಭುತ ಅನುಭವವಾಗಿತ್ತು. 132 ದೇಶಗಳ ಎರಡು
ದಿಗೆ ಸೇರಿ ಚರ್ಚೆ, ಹಾಡು-ನೃತ್ಯಗಳಲ್ಲಿ ಭಾಗವಹಿಸುವುದು ಇನ್ನೆಲ್ಲಿ ಸಾಧ್ಯ? ಒಟ್ಟಿಗೆ
ಚರ್ಚೆ, ಸಾಂಸತಿಕ ಕಾರ್ಯಕ್ರಮಗಳು ಕಾರ್ಯಾಗಾರಗಳಲ್ಲಿ - ಯಾವುದರಲ್ಲಿ
ೇಟ್ ಹಿಡಿದು ಚಾನೇಲ್‌ನಿಂದ ಚಾನೆಲ್‌ಗೆ ಈಜಾಡುತ್ತಾ ಹೋದಂತೆ
ಶದ ವರದಿ ಒಂದು ಕಿರುನೋಟ ಇಲ್ಲಿದೆ.
ತ್ತಂತೆ ಇತ್ತು ಮುಂಬಯಿ ಸಮಾವೇಶ. ಸಾಮ್ರಾಜ್ಯಶಾಹಿ
ವೇದಿಕೆಯಾಗಿರುವ ಅದರ ಮಹತ್ವದ ಬಗ್ಗೆ
ಸಾಧ್ಯವಿಲ್ಲ.

WSF-4 ರಲ್ಲಿ ಟ್ರೇಡ್ ಯೂನಿಯನ್‌ಗಳು

ಕಾರ್ಮಿಕರು ಒಂದಾಗಿ ಇನ್ನೊಂದು ಜಗತ್ತು ಕಟ್ಟುವರು'

ಇದು ಡಬ್ಲ್ಯುಎಸ್‌ಎಫ್ -04 ನಲ್ಲಿ ಮೊಳಗಿದ ಇನ್ನೊಂದು ಪ್ರಮುಖ ಹೊಸ ಘೋಷಣೆ. ದಕ್ಷಿಣ ಕೋರಿಯಾದ ಪ್ರಮುಖ ಟ್ರೇಡ್ ಯೂನಿಯನ್ ಕೇಂದ್ರ ಕೆ.ಸಿ.ಟಿ.ಯು. (ಕೋರಿಯನ್ ಟ್ರೇಡ್ ಯೂನಿಯನ್ ಕಾನ್ಫೆಡರೇಷನ್) ನೂರಾರು ಸದಸ್ಯರ ಕೆಂಪು ಜಾಕೆಟ್‌ನಲ್ಲಿ ಮೂಡಿ ಬಂದದ್ದು ಎಲ್ಲೆಲ್ಲೂ ಕಂಡುಬಂತು. ಡಬ್ಲ್ಯುಎಸ್‌ಎಫ್ -04 ರಲ್ಲಿ ಭಾಗವಗಿಹಿಸಿದ ಸಾವಿರಾರು ಕಾರ್ಮಿಕರ ಧ್ಯೇಯ ವಾಕ್ಯವಾಯಿತು. ಸ್ಫೂರ್ತಿ ಮೂಡಿಸಿತು. ಭಾರತ ಮಾತ್ರವಲ್ಲ, ಜಗತ್ತಿನಾದ್ಯಂತ ಹಲವು ದೇಶಗಳ ಪ್ರಮುಖ ಟ್ರೇಡ್ ಯೂನಿಯನ್ ಕೇಂದ್ರ ಗಳು, ಅಂತರ್ರಾಷ್ಟ್ರೀಯ ಟ್ರೇಡ್ ಯೂನಿಯನ್ ಕೇಂದ್ರಗಳು ದೊಡ್ಡ ರೀತಿಯಲ್ಲಿ ಭಾಗವಹಿಸಿದ್ದು ಮಾತ್ರವಲ್ಲ, ಅದನ್ನು ಪರಸ್ಪರ ಸಂಯೋಜನೆಯಿಂದ ನಿರ್ವಹಿಸಿದರು. ಡಬ್ಲ್ಯು.ಎಸ್.ಎಫ್ -04 ನ್ನು ಅಂತರಾಷ್ಟ್ರೀಯ ಟ್ರೇಡ್ ಯೂನಿಯನ್ ಸೌಹಾರ್ದತೆ ಜಂಟಿ ಕಾರ್ಯಾಚರಣೆಯ ಹೊಸ ವೇದಿಕೆಯಾಗಿಸಿದರು.

ಜಾಗತಿಕ ಟ್ರೇಡ್ ಯೂನಿಯನ್‌ಗಳ ಪ್ರಮುಖ ಫೆಡರೇಶನ್ - ಡಬ್ಲ್ಯುಎಫ್‌ಟಿಯು, ಡಬ್ಲ್ಯುಎಸ್‌ಎಫ್-04 ಗೆ ಕಳಿಸಿದ ವಿಶೇಷ ಸಂದೇಶದಲ್ಲಿ ಬೇರೆಲ್ಲಾ ಚಳುವಳಿಗಳು ಸಂಘಟನೆಗಳೊಂದಿಗೆ ಜಾಗತೀಕರಣದ ವಿರುದ್ಧ ಪ್ರಬಲ ಆಂದೋಲನ ಕಟ್ಟಲು ಕರೆಕೊಟ್ಟಿತ್ತು.

ಡಬ್ಲ್ಯುಎಸ್‌ಎಫ್-04 ರಲ್ಲಿ ಕಾರ್ಮಿಕರು' ಎಂಬ ಸಂಘಟನೆಯನ್ನು ಹತ್ತು ಭಾರತದ ಟ್ರೇಡ್ ಯೂನಿಯನ್‌ನ ಕೇಂದ್ರಗಳು (ಸಿಐಟಿಯು ಇದರಲ್ಲಿ ಪ್ರಮುಖ ಪಾತ್ರವಹಿಸಿತ್ತು) ಸೇರಿ ರಚಿಸಿದ್ದವು. ಈ ವೇದಿಕೆ ಸಂಘಟಿಸಿದ ನಾಲ್ಕು ಪ್ರಮುಖ ಸಮ್ಮೇಳನಗಳಲ್ಲಿ ಭಾರತದ ಮಾತ್ರವಲ್ಲ - ಜಪಾನ್, ಕೋರಿಯಾ, ಕೆನಡಾ, ಬ್ರೆಜಿಲ್, ಮೆಕ್ಸಿಕೋ, ಫಿಲಿಫೈನ್ಸ್, ಯುರೋಪಿನ ಪ್ರಮುಖ ಟ್ರೇಡ್ ಯೂನಿಯನ್ ಕೆಂದ್ರಗಳ ನಾಯಕರು - ಕಾರ್ಯಕರ್ತರು ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸಿ ಮನಸೆಳೆದರು. AIIEA, AIBEA ಹಣಕಾಸು ಕ್ಷೇತ್ರದಲ್ಲಿ ಖಾಸಗೀಕರಣದ ಬಗ್ಗೆ ಚರ್ಚೆ ನಡೆಸಿದರು. 'WSF 04 ರಲ್ಲಿ ಕಾರ್ಮಿಕರು' ಐದು ವಿಚಾರ ಸಂಕಿರಣಗಳನ್ನು ಸಂಘಟಿಸಿದರು. "ಸಾಮ್ರಾಜ್ಯಶಾಹಿ ಜಾಗತೀಕರಣದ ವಿರುದ್ಧ ಅಂತರಾಷ್ಟ್ರೀಯ ಕಾರ್ಮಿಕವರ್ಗದ ಐಕ್ಯತೆ", "ಖಾಸಗೀಕರಣ, ಹೂಡಿಕೆ ಹಿಂತೆಗೆತ, ರಾಷ್ಟ್ರೀಯ ಆರ್ಥಿಕ ಮತ್ತು ಕಾರ್ಮಿಕ ವರ್ಗದ ಮೇಲೆ ಅದರ ಪರಿಣಾಮಗಳು", "ಅಸಂಘಟಿತ ಕಾರ್ಮಿಕರು, ಅಸಂಘಟಿತ ಕ್ಷೇತ್ರಗಳ ಕಾರ್ಮಿಕರು: ಕೆಲಸ ಮತ್ತು ಜೀವನೋಪಾಯದ ಹಕ್ಕು", "ಕೋಮುವಾದ, ಧಾರ್ಮಿಕ ಅಂಧವಾದ ಮತ್ತು ಪಂಥವಾದಿ ಹಿಂಸಾಚಾರ, ಕಾರ್ಮಿಕರ ಹಕ್ಕುಗಳು ಮತ್ತು ಟ್ರೇಡ್ ಯೂನಿಯನ್ ಚಳುವಳಿ"

ಇದಲ್ಲದೆ ಕೋರಿಯಾದ ಕೆ.ಸಿ.ಟಿ.ಯು. ಬಹುರಾಷ್ಟ್ರೀಯ ಕಂಪನಿಗಳಲ್ಲಿ ಕಾರ್ಮಿಕರ ಚಳುವಳಿಯ ಸಮಸ್ಯೆಗಳು, ಕೋರಿಯಾದಲ್ಲಿ ವಲಸೆ ಬಂದ ಕಾರ್ಮಿಕರ ಸಮಸ್ಯೆಗಳು ಮುಂತಾದ ವಿಷಯಗಳ ಬಗ್ಗೆ ವಿಚಾರ ಮಂಥನ ಸಂಘಟಿಸಿತು. ಕೆನಡಾದ ವಾಹನ ಕಾರ್ಖಾನೆಗಳ ಕಾರ್ಮಿಕರ ಕೇಂದ್ರ, ಜಪಾನಿನ ರೈಲ್ವೆ ಕಾರ್ಮಿಕರ ಫೆಡರೇಶನ್, ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ಜಾಗತಿಕ ಫೆಡರೇಷನ್, ಬೆಲ್ಜಿಯಂನ ಫಿಲಿಫೈನ್ಸ್, ಬ್ರಿಟನ್, ಮೆಕ್ಸಿಕೋ ಟ್ರೇಡ್ ಯೂನಿಯನ್ ಕೇಂದ್ರ, ಇತರ ದೊಡ್ಡ ಕ್ಷೇತ್ರದ ಟಿಯು ಫೆಡರೇಶನ್‌ಗಳು ಸ್ವತಃ ಹಲವಾರು ವಿಷಯಗಳ ಬಗ್ಗೆ ವಿಚಾರ ಸಂಕಿರಣ ಸಂಘಟಿಸಿದ್ದವು. ಅಲ್ಲದೆ ಇತರ ಸಂಟನೆಗಳು ಸಂಘಟಿಸಿದ್ದ ವಿಚಾರ ಸಂಕಿರಣದಲ್ಲಿ ಬಾಗವಹಿಸಿ ಕಾರ್ಮಿಕರ ದೃಷ್ಟಿಕೋನವನ್ನು ಮುಂದಿಟ್ಟರು.

ವಿದ್ಯುತ್ ಖಾಸಗೀಕರಣದ ಬಗ್ಗೆ ಮಹಾರಾಷ್ಟ್ರ ರಾಜ್ಯ ವಿದ್ಯುತ್ ಮಂಡಳಿ ಕಾರ್ಮಿಕರ ಯೂನಿಯನ್ ಸಂಘಟಿಸಿದ್ದ ಚರ್ಚೆಯಲ್ಲಿ ಬೊಲಿವಿಯಾ, ಕೊಲಂಬಿಯಾ, ಮೆಕ್ಸಿಕೋ ಮುಂತಾದ ದೇಶಗಳ ಟ್ರೇಡ್ ಯೂನಿಯನ್‌ಗಳು ಭಾಗವಹಿಸಿದ್ದವು ಯುರೋಪಿನ ವಿದ್ಯುತ್ ಟ್ರೇಡ್ ಯುವ ಫೆಡರೇಷನ್ ಪ್ರತಿನಿಧಿ ಭಾಗವಹಿಸಿದ್ದರು. ನೀರು ಖಾಸಗೀಕರಣದ ಬಗ್ಗೆ ಸಂಘಟಿಸಿದ್ದ ಚರ್ಚೆಯು ಹಲವಾರು ಜಗತ್ತಿನ ಹಲವೆಡೆಗಳ ನೀರು ಸರಬರಾಜು ಮಂಡಳಿಗಳ ಕಾರ್ಮಿಕರ ಯೂನಿಯನ್‌ಗಳು ಭಾಗವಹಿಸಿದವು.

ವೇದಿಕೆಯ ಅಧಿವೇಶನ ನಡೆದ ಗೊರೆಗಾಂವ್‌ನ ನೆಸ್ಕೊ ಮೈದಾನದ ಬೀದಿಗಳಲ್ಲಿ ಶಿಸ್ತಿನ ಹಲವು ಪ್ರದರ್ಶನಗಳನ್ನು ನಡೆಸಿದ ಕೊರಿಯಾ ಮತ್ತು ಜಪಾನಿ ಕಾರ್ಮಿಕರು ಗಮನ ಸೆಳೆದರು. 'ರಾಜಕೀಯ ಪಕ್ಷಗಳು ಮತ್ತು ಸಾಮಾಜಿಕ ಚಳುವಳಿಗಳು' ಸಮ್ಮೇಳನದಲ್ಲಿ ಯುರೋಪಿನ ಟ್ರೇಡ್ ಯೂನಿಯನ್ ನಾಯಕರೊಬ್ಬರು ಟ್ರೇಡ್ ಯೂನಿಯನ್‌ಗಳು ಬಂಡವಾಳಶಾಹಿಯನ್ನು ವಿರೋಧಿಸಿ, ಆಳುವ ವರ್ಗಗಳ ರಾಜಕೀಯಕ್ಕೆ ಸವಾಲು ಹಾಕಿದ ಮೊದಲ ಸಾಮಾಜಿಕ ಚಳುವಳಿ ಎಂದು ಮರೆತು ಬಿಡಬಾರದು ಎಂದು ಹೇಳಿ, ಆ ಚರ್ಚೆಗೆ ಹೊಸ ತಿರುವು ಕೊಟ್ಟಿದ್ದರು. ಟ್ರೇಡ್ ಯೂನಿಯನ್‌ಗಳು ಕಾರ್ಮಿಕರ ಸಾಮಾಜಿಕ-ರಾಜಕೀಯ ಚಳುವಳಿಯ ಪ್ರಾಥಮಿಕ ಸಂಘಟನೆ-ಅದರ ಚಳುವಳಿ ಸ್ವರೂಪವನ್ನು ಕಳಕೊಳ್ಳಬಾರದು ಈಗಿನ ಸಾಮ್ರಾಜ್ಯಶಾಹಿ-ಜಾಗತೀಕರಣದ ವಿರುದ್ಧ ಅಂತರಾಷ್ಟ್ರೀಯ ಚಳುವಳಿಯಲ್ಲಿ ಪ್ರಮುಖ ಮುಂಚೂಣಿ ಪಾತ್ರ ವಹಿಸಬೇಕು ಎಂದು ಇತರ ಹಲವು ವಿಚಾರ ಸಂಕಿರಣದಲ್ಲಿ ಟ್ರೇಡ್ ಯೂನಿಯನ್ ಪ್ರತಿನಿಧಿಗಳು ಅಭಿಪ್ರಾಯಪಟ್ಟರು.


ಡಬ್ಲ್ಯು.ಎಸ್.ಎಫ್-04 ರಲ್ಲಿ ಕಮ್ಯುನಿಸ್ಟರು 'ಇನ್ನೊಂದು ಸಮಾಜವಾದಿ ಜಗತ್ತು ಸಾಧ್ಯ'

ಡಬ್ಲ್ಯುಎಸ್‌ಎಫ್ -04 ರ ಒಂದು ವಿಶೇಷವೆಂದರೆ ರಾಜಕೀಯ ಪಕ್ಷಗಳು ಮತ್ತು ಅದರಲ್ಲೂ ಎಡ-ಕಮ್ಯುನಿಸ್ಟ್ ಪಕ್ಷಗಳು ದೊಡ್ಡ ರೀತಿಯಲ್ಲಿ ಭಾಗವಹಿಸುವಿಕೆ. ಹಿಂದೆ ಡಬ್ಲ್ಯುಎಸ್‌ಎಫ್ ರಾಜಕೀಯ ಪಕ್ಷಗಳು ಮತ್ತು ಅವುಗಳ ನಾಯಕರು ಪಕ್ಷಗಳ ಹೆಸರಲ್ಲೇ ಭಾಗವಹಿಸುವುದರ ಬಗ್ಗೆ ವಿರೋಧ ವ್ಯಕ್ತಪಡಿಸಿತ್ತು. ಡಬ್ಲ್ಯುಎಸ್‌ಎಫ್ ಸಾಮಾಜಿಕ ಚಳುವಳಿಗಳ ವೇದಿಕೆ ಮಾತ್ರ ಎಂಬ ಮಡಿವಂತಿಕೆ ಡಬ್ಲ್ಯುಎಸ್‌ಎಫ್ ಸಂಘಟಕರಲ್ಲೂ ರಾಜಕೀಯ ಪಕ್ಷಗಳಲ್ಲೂ ಹೋಗಿರುವುದು ಮುಂಬಯಿಯಲ್ಲಿ ಕಂಡುಬಂತು.

ಭಾರತದ ಮಾತ್ರವಲ್ಲ ಜಗತ್ತಿನ ಎಲ್ಲೆಡೆಯ ಎಡ-ಕಮ್ಯುನಿಸ್ಟ್ ಪಕ್ಷಗಳು ಉತ್ಸಾಹದಿಂದ ಭಾಗವಹಿಸಿದವು. 15 ದೇಶಗಳ ಕಮ್ಯುನಿಸ್ಟ್ ಪಕ್ಷಗಳು ಹಲವು ವಿಚಾರಸಂಕಿರಣ, ಚರ್ಚೆಗಳ ಮೂಲಕ ತಮ್ಮೊಳಗೆ ವಿಚಾರ ವಿನಿಮಯ ಮಾಡಿಕೊಂಡದ್ದಲ್ಲದೆ, ಇತರ ಸಾಮಾಜಿಕ ಚಳುವಳಿಗಳ ಜತೆ ಗಂಭೀರ ಚರ್ಚೆಯಲ್ಲಿ ತೊಡಗಿದ್ದವು.

'ಇನ್ನೊಂದು ಸಮಾಜವಾದಿ ಜಗತ್ತು ಸಾಧ್ಯ' ಮತ್ತು 'ಸಮಾಜವಾದಿ ಸಾಮ್ರಾಜ್ಯ ಶಾಹಿ-ಜಾಗತೀಕರಣಕ್ಕೆ ಬದಲಿ' ಎಂಬ ವಿಚಾರ ಎಲ್ಲೆಡೆ ಪಸರಿಸುವುದು ಮೊಳಗುವುದು ಸಾಧ್ಯವಾಯಿತು.

'ಸೋಶಿಯಲ್ ಸೈಂಟಿಸ್ಟ್ ಮತ್ತು ಸೋಶಿಯಲ್ ಸಾಯನ್ಸ್ ಪ್ರೊಬಿಂಗ್ಸ್' ನಡೆಸಿದ 'ಸಮಾಜವಾದದ ಮುಂದಿರುವ ಸವಾಲುಗಳು' ವಿಚಾರ ಸಂಕಿರಣದಲ್ಲಿ ಎಲ್ಲಾ ಕಮ್ಯುನಿಸ್ಟ್ ಪಕ್ಷಗಳ ಪ್ರತಿನಿಧಿಗಳು ಮಾತನಾಡಿದರು. ಸೋವಿಯತ್ ಒಕ್ಕೂಟ ಮತ್ತು ಪೂರ್ವ ಯುರೋಪಿನಲ್ಲಿ ಸಮಾಜವಾದಿ ವ್ಯವಸ್ಥೆಯ ಪತನದ ಕಾರಣಗಳ ಬಗ್ಗೆ ತಮ್ಮ ಅಭಿಪ್ರಾಯ ಮಂಡಿಸಿದರು. ಸಾಮ್ರಾಜ್ಯಶಾಹಿ-ಜಾಗತೀಕರಣದ ವಿರುದ್ಧ ಎದ್ದಿರುವ ಪ್ರಚಂಡ ಚಳುವಳಿಗಳ ಸಂದರ್ಭದಲ್ಲಿ ಪಕ್ಷಗಳ ಕರ್ತವ್ಯ, ಈ ಚಳುವಳಿಗಳಲ್ಲಿ 'ಸಮಾಜವಾದಿ ಬದಲಿ'ಯ ಬಗ್ಗೆ ಪ್ರಚಾರ - ಪ್ರಕ್ಷೋಭೆ ನಡೆಸುವ, ಅದನ್ನು ಬಳಸಿ ವ್ಯಾಪಕ 'ಕಾಮನಬಿಲ್ಲು' ಕೂಟ ಕಟ್ಟುವ, ಪ್ರಾದೇಶಿಕ ಸಾಮಾಜಿಕ ವೇದಿಕೆಗಳು ಸಂಯೋಜಕವಾಗಿ ಕೆಲಸ ಮಾಡುವ - ಬಗ್ಗೆ ವಿಚಾರಗಳನ್ನು ಮಂಡಿಸಿದರು.



'ಸಾಮ್ರಾಜ್ಯಶಾಹಿ ಇಂದು' ಮತ್ತು 'ಸಮಾಜವಾದಿ ಆರ್ಥಿಕ'ದ ಬಗ್ಗೆ ಇನ್ನೆರಡು ವಿಚಾರ ಸಂಕಿರಣಗಳಲ್ಲೂ ವಿಚಾರಮಂಥನ ನಡೆಯಿತು. ಇದಲ್ಲದೆ ಟ್ರೇಡ್ ಯೂನಿಯನ್‌ಗಳು (ಹೆಚ್ಚಿನವು ಎಡಪಂಥೀಯ) ಸಂಘಟಿಸಿದ ಹಲವು ಸಮ್ಮೇಳನ, ವಿಚಾರ ಸಂಕಿರಣದಲ್ಲೂ 'ಸಮಾಜವಾದ ಬದಲಿ' ಮತ್ತು ಈಗಿನ ಜಾಗತೀಕರಣದ ಎಡ-ವಿಶ್ಲೇಷಣೆ ಮಂಡಿಸಲು ಸಾಧ್ಯವಾಯಿತು.

ಡಬ್ಲ್ಯುಎಸ್‌ಎಫ್ 'ಅಧಿಕೃತವಾಗಿ' ಸಂಘಟಿಸಿದ ಹಲವು ದೊಡ್ಡ ಸಮ್ಮೇಳನದಲ್ಲೂ (4 ರಿಂದ 8 ಸಾವಿರ ಜನ ಭಾಗವಹಿಸಿದ) ಕಮ್ಯುನಿಸ್ಟ್ ಪಕ್ಷದ ಪ್ರತಿನಿಧಿ ಅಥವಾ ಪ್ರಮುಖ ಮಾರ್ಕ್ಸ್‌ವಾದಿ ಚಿಂತಕರು ಎಡ-ದೃಷ್ಟಿಕೋನವನ್ನು ಪ್ರತಿಪಾದಿಸುವುದು ಸಾಧ್ಯವಾಯಿತು. 'ರಾಜಕೀಯ ಪಕ್ಷಗಳ ಮತ್ತು ಸಾಮಾಜಿಕ ಚಳುವಳಿಗಳು' ಚರ್ಚೆಯಲ್ಲಿ ಪ್ರಕಾಶ್ ಕಾರತ್ ಎಡ ಧೋರಣೆ ಬಗ್ಗೆ ಸಮರ್ಥವಾಗಿ ಮಂಡಿಸಿದರು. ಜಾಗತೀಕರಣ, ಜಾಗತಿಕ ಸರ್ಕಾರ ಮತ್ತು ರಾಷ್ಟ್ರೀಯ ಪ್ರಭುತ್ವ' ಸಮ್ಮೇಳನ ದಲ್ಲಿ ಪ್ರಸಿದ್ಧ ಮಾರ್ಕ್ಸ್‌ವಾದಿ ಐಜಾಝ್ ಅಹಮ್ಮದ್ ಅಧ್ಯಕ್ಷತೆ ವಹಿಸಿದ್ದರು.

'ಜಾಗತೀಕರಣ, ಆರ್ಥಿಕ ಮತ್ತು ಸಾಮಾಜಿಕ ಭದ್ರತೆ' ಸಮ್ಮೇಳನದಲ್ಲಿ ಅಂತರಾಷ್ಟ್ರೀಯ ಖ್ಯಾತಿಯ ಮಾರ್ಕ್ಸ್‌ವಾದಿ ಚಿಂತಕರಾದ 'ಸಮಿರ್ ಅಮಿೂನ್ ಮತ್ತು ಪ್ರಭಾತ್ ಪಟ್ನಾಯಕ್ ಭಾಗವಹಿಸಿದ್ದರು. 'ಆಹಾರ ಸಾರ್ವಭೌಮತ್ವ ಮತ್ತು ಪ್ರಾಕೃತಿಕ ಸಾಧನಗಳು' ಸಮ್ಮೇಳನದಲ್ಲಿ ಬೃಂದಾಕಾರತ್ ಮಾತನಾಡಿದರು. 'ಕೆಲಸ ಮತ್ತು ಕಾರ್ಮಿಕರ ಜಗತ್ತು' ಸಮ್ಮೇಳನ'ದಲ್ಲಿ ಪ್ರಭಾತ್ ಪಟ್ನಾಯಕ್ ಮತ್ತು 'ಜಾಗತೀಕರಣ ಮತ್ತು ಬದಲಿ' ಸಮ್ಮೇಳನದಲ್ಲಿ ಸಿಪಿಐ ನಾಯಕ ಡಿ.ರಾಜಾ ಎಡ-ವಿಚಾರಧಾರೆ ಮಂಡಿಸಿದರು.

ಡಬ್ಲ್ಯುಎಸ್‌ಎಫ್ - 2004 ರಲ್ಲಿ ದೊಡ್ಡ ರೀತಿಯಲ್ಲಿ ಎಡ-ಕಮ್ಯುನಿಸ್ಟ್ ಪಕ್ಷಗಳ ಪ್ರತಿನಿಧಿಗಳು ಚೀನಾ, ವಿಯೆಟ್ನಾಮ್, ಕ್ಯೂಬಾ, ಗ್ರೀಸ್, ಬ್ರೆಜಿಲ್, ಫ್ರಾನ್ಸ್, ಇಟಲಿ, ಅಮೇರಿಕ, ಪೋರ್ಚುಗಲ್, ಜರ್ಮನಿ, ಫಿನ್‌ಲ್ಯಾಂಡ್, ಟರ್ಕಿ ಮತ್ತು ಬಾಂಗ್ಲಾದೇಶಗಳಿಂದ ಬಂದವರು. ○

ಡಬ್ಲ್ಯುಎಸ್‌ಎಫ್-2004



ಒಂದು ಲಕ್ಷ ಪ್ರತಿನಿಧಿಗಳ ಅದ್ಭುತ ಸಮಾವೇಶ

ಡಬ್ಲ್ಯುಎಸ್‌ಎಫ್‌ನ ವಾರ್ಷಿಕ ಸಭೆಯಲ್ಲಿ ಭಾಗವಹಿಸುವವರ ಸಂಖ್ಯೆಗಳಲ್ಲಿ ಏರಿಕೆ ಕಂಡುಬರುತ್ತಿದ್ದು, ಮುಂಬಯಿಯ ಸಮಾವೇಶದಲ್ಲಿ ಲಕ್ಷಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದರು. ಅದರ ಇತರ ಸಾರ್ವಜನಿಕ ಚಟುವಟಿಕೆ, ಪ್ರಚಾರ-ಪ್ರಕ್ಷೋಭೆಯಲ್ಲಿ ಇನ್ನೂ ಹೆಚ್ಚಿನ ಜನ ಭಾಗವಹಿಸಿದ್ದರು. ಮುಂಬಯಿ ಸಮಾವೇಶಕ್ಕೆ 132 ದೇಶಗಳ 2660 ಸಂಘಟನೆಗಳಿಂದ ಪ್ರತಿನಿಧಿಗಳು ಬಂದಿದ್ದರು.

ಆರುದಿನಗಳ ಕಾಲ ನಡೆದ ಈ ಬೃಹತ್ ಸಮಾವೇಶದಲ್ಲಿ ಮುಖ್ಯ ಕಾರ್ಯಕ್ರಮಗಳು ಮೂರು ವಿಧದವು. ಮೊದಲನೆಯದು ಡಬ್ಲ್ಯು.ಎಸ್.ಎಫ್ ಇಂಡಿಯಾ ಸಂಘಟನಾ ಸಮಿತಿ ಸ್ವತಃ ಸಂಘಟಿಸಿದ 13 ಬೃಹತ್ ಕಾರ್ಯಕ್ರಮಗಳು. ಇವುಗಳಲ್ಲಿ 50 ಕ್ಕೂ ಹೆಚ್ಚು ಜನ ಭಾಗವಹಿಸಿದ ಸಾರ್ವಜನಿಕ ಸಭೆಗಳು, ನಾಲ್ಕು ಸಾವಿರದಷ್ಟು ಜನ ಭಾಗವಹಿಸಿದ ಸಮ್ಮೇಳನ, ದುಂಡುಮೇಜಿನ ಚರ್ಚೆ, ಚರ್ಚಾವೇದಿಕೆಗಳು, ಡಬ್ಲ್ಯುಎಸ್‌ಎಫ್ ಜತೆ ರಿಜಿಸ್ಟರ್ ಆದ ಸಂಘಟನೆಗಳು ತಲಾ ನಾಲ್ಕು ಸಾವಿರದಷ್ಟು ಜನ ಭಾಗವಹಿಸಿದ 35 ಸಮ್ಮೇಳನಗಳ, ದುಂಡುಮೇಜಿನ ಚರ್ಚೆ, ಚರ್ಚಾವೇದಿಕೆಗಳನ್ನು ನಡೆಸಿತು. ಡಬ್ಲ್ಯುಎಸ್‌ಎಫ್ ರಿಜಿಸ್ಟರ್ ಆದ ಸಂಘಟನೆಗಳು ನಡೆಸಿದ ವಿಚಾರ ಸಂಕಿರಣ, ಕಾರ್ಯಾಗಾರ, ಚರ್ಚೆಗಳು 1200 ಕ್ಕೂ ಹೆಚ್ಚು, ಇವುಗಳಲ್ಲಿ ಭಾಗವಹಿಸಿದವರ ಸಂಖ್ಯೆ 15 ರಿಂದ 500 ರವರೆಗೂ ಇತ್ತು.

ಈ ಆರು ದಿನಗಳ ಹಗಲು ರಾತ್ರಿ ನಡೆದ ಸಾಂಸತಿಕ ಕಾರ್ಯಕ್ರಮಗಳಲ್ಲಿ ಜಗತ್ತಿನಾದ್ಯಂತ 1500 ಕಲಾವಿದರು, ಕವಿಗಳು, ನಾಟಕಕಾರರು, ಬರಹಗಾರರು, ಫಿಲಂ ಡೈರೆಕ್ಟರುಗಳು ಭಾಗವಹಿಸಿದ್ದರು. 150 ಬೀದಿ ನಾಟಕಗಳು, 85 ಫಿಲಂ ಪ್ರದರ್ಶನಗಳು, ನೂರಾರು ಕಾವ್ಯವಾಚನ, ಹಾಡು, ನೃತ್ಯಗಳು ನಡೆದು - ಸಂಭ್ರಮ, ಉತ್ಸವದ ವಾತಾವರಣ ರಚಿಸಿತ್ತು. ಗೊತ್ತಿಲ್ಲದ ಭಾಷೆಗಳಲ್ಲಿ ಹಾಡು, ಕಾವ್ಯವಾಚನ, ನಾಟಕ, ಗೊತ್ತಿಲ್ಲದ ಶೈಲಿಯ ನೃತ್ಯ, ಸಂಗೀತಗಳನ್ನು ಪ್ರತಿನಿಧಿಗಳು ಆನಂದಿಸಿದರು. 45 ದೇಶಗಳ 644 ಸುದ್ದಿ ಸಂಘಟನೆಗಳಿಂದ ಬಂದಿದ್ದ 3200 ಪತ್ರಕರ್ತರು ಮುಂಬಯಿ ಸಮಾವೇಶದ ಬಿಸಿ ಸುದ್ದಿಯನ್ನು ಜಗತ್ತಿನಾದ್ಯಂತ ಹರಡಿದರು.

ಪೆಪ್ಸಿಕೋಲಾ - ಮೈಕ್ರೋಸಾಫ್ಟ್‌ಗಳಿಗೆ ಬಹಿಷ್ಕಾರ

ಡಬ್ಲ್ಯುಎಸ್‌ಎಫ್'04 ನ ಮುಂಬಯಿ ಸಮಾವೇಶದಲ್ಲಿ ಎಲ್ಲೆಲ್ಲೂ ಪೆಪ್ಸಿ-ಕೋಲಾಗಳು ಸಿಗುವಂತಿರಲಿಲ್ಲ. ಪೆಪ್ಸಿ - ಕೋಲಾಗಳನ್ನು ಅಧಿಕೃತವಾಗಿ ಬಹಿಷ್ಕರಿಸಲಾಗಿತ್ತು. ಅದರ ಸ್ಥಾನದಲ್ಲಿ ಎಳನೀರು, ಹಣ್ಣಿನ ರಸಗಳು ಆಕ್ರಮಿಸಿಕೊಂಡಿದ್ದವು.

ಅದೇ ರೀತಿ 'ಮಾಧ್ಯಮ ಕೇಂದ್ರ'ದಲ್ಲಿದ್ದ ನೂರಕ್ಕೂ ಹೆಚ್ಚು ಕಂಪ್ಯೂಟರ್‌ಗಳಲ್ಲಿ ಮೈಕ್ರೋಸಾಫ್ಟ್ ವಿಂಡೋಸ್ ಮತ್ತಿತರ ಸಾಫ್ಟ್‌ವೇರ್ ಬದಲು ಮುಕ್ತ ಸಾಫ್ಟ್‌ವೇರ್ ಆದ 'ಲಿನಕ್ಸ್'ನ್ನು ಬಳಸಲಾಯಿತು.


ಕೇಳಿ ಬಂದ ಹೊಸ ಘೋಷಣೆಗಳು

ಡಬ್ಲ್ಯುಎಸ್‌ಎಫ್‌ನ ಹಲವು ಘೋಷಣೆಗಳು ಈಗ ಎಲ್ಲರಿಗೂ ಪರಿಚಿತವಿದೆ. ಮುಂಬಯಿ 4ನೇ ಸಮಾವೇಶದಲ್ಲಿ ಕೇಳಿಬಂದ ಕೆಲವು ಹೊಸ ಘೋಷಣೆಗಳನ್ನು ಇಲ್ಲಿ ಕೊಡಲಾಗಿದೆ. ಈ ಘೋಷಣೆಗಳ ಡಬ್ಲ್ಯು.ಎಸ್.ಎಫ್‌ನ ವ್ಯಾಪಕ 'ಕಾಮನಬಿಲ್ಲು ಕೂಟ'ದ ಸ್ವರೂಪದ ಕಿರುಪರಿಚಯ ಮಾಡಿಸುತ್ತದೆ.

- 'ಹೋರಾಟದ ಜಾಗತೀಕರಣ ಆಗಲಿ! ಭವಿಷ್ಯದಲ್ಲಿ ನಂಬುಗೆಯ ಜಾಗತೀಕರಣ ಆಗಲಿ'
- 'ಇನ್ನೊಂದು ಸಮಾಜವಾದಿ ಜಗತ್ತು ಸಾಧ್ಯ'
- 'ಕಾರ್ಮಿಕರು ಒಂದಾಗಿ ಇನ್ನೊಂದು ಜಗತ್ತು ಕಟ್ಟುವರು'
- 'ಜಾಗತೀಕರಣ + ಸಾಮಾಜಿಕ ಅಭದ್ರತೆ = ಹಿಂಸಾಚಾರ'

ಮಾಡುತ್ತಾರೆ'

- 'ನಮ್ಮ ಜಗತ್ತು ಮಾರಾಟಕ್ಕಿಲ್ಲ'
- 'ಪೆಪ್ಸಿ - ಕೋಲಾ- ಮೈಕ್ರೋಸಾಫ್ಟ್ ಬೇಡ'
- 'ತುಳಿಯಲ್ಪಟ್ಟವರ ಜಾಗತೀಕರಣ ಕಟ್ಟೋಣ'
- 'ಬುಶ್‌ನ್ನು 2004 ಚುನಾವಣೆಯಲ್ಲಿ ಸೋಲಿಸೋಣ'
- 'ಜನ ಮೊದಲು, ಲಾಭ ಆಮೇಲೆ'
- 'ಬಂಡವಾಳಶಾಹಿ ನಂತರವೂ ಜೀವನ ಸಾಧ್ಯ'
- 'ಬೇರೆ ದೇಶಗಳಲ್ಲಿರುವ ಎಲ್ಲಾ ಅಮೇರಿಕನ್ ಸೇನಾ ನೆಲೆಗಳನ್ನು ಖಾಲಿ ಮಾಡಿಸಿ'
- 'ನ್ಯಾಯಯುತ ವ್ಯಾಪಾರ ಸಾಧ್ಯ'
- 'ಸಾಲ ಬೇಡ! ಸಾಲ ಇದ್ದರೆ ಪಾವತಿ ಬೇಡ'
- 'ಮಹಿಳೆಯ ದೇಹ ಯುದ್ಧಭೂಮಿ ಅಲ್ಲ'
- 'ಇಡೀ ಜಗತ್ತನ್ನು ಪ್ಯಾಲೆಸ್ಟೀನ್ ಮಾಡಬೇಡಿ'
- 'ಮಗುವಿಗೆ ನಾಗರಿಕ ಆಗುವ ಮೊದಲು




- 'ಇರಾಕ್‌ನಿಂದ ಅಮೇರಿಕನ್ ಸೈನ್ಯ ಹೊರದಬ್ಬಿ'
- 'ಇರಾಕ್ ಆತಿಕ್ರಮಣ ತೆರವು ಮಾಡಿ'
- 'ದಲಿತರು ಇನ್ನೊಂದು ಜಗತ್ತನ್ನು ಸಾಧ್ಯ

ಹಕ್ಕುಗಳಿವೆ'

- 'ಎಲ್ಲರಿಗೂ ಶಿಕ್ಷಣ ಎಂದಾಗ ಅಂಗವಿಕಲರನ್ನು ಮರೆಯಬೇಡಿ'



ಸಾಂಸ್ಕೃತಿಕ ತಂಡವೊಂದರಿಂದ ಮನರಂಜನಾ ಕಾರ್ಯಕ್ರಮ




ಚರ್ಚೆಯೊಂದರಲ್ಲಿ ಕ್ಯೂಬಾ ಪ್ರತಿನಿಧಿ

ಪಾಕಿಸ್ತಾನದಿಂದ ಆಗಮಿಸಿದ ಪ್ರತಿನಿಧಿಗಳು



ನಿಮ್ಮ ಆರೋಗ್ಯ ನಿಮ್ಮ ಕೈಯಲ್ಲಿ





ವೃದ್ಧರ ಆರೋಗ್ಯ

ನಮ್ಮ ಸಮಾಜದಲ್ಲಿ ವೃದ್ಧರ ಸಂಖ್ಯೆ ಜಾಸ್ತಿಯಾಗುತ್ತಿದೆ. ವೃದ್ಧರ ಆರೋಗ್ಯದ ಬಗ್ಗೆ ಗಮನಹರಿಸಬೇಕಾಗುತ್ತದೆ. ವೃದ್ಧಾಪ್ಯದಲ್ಲಿ ಕಣ್ಣು, ಕಿವಿ, ಸ್ನಾಯುಗಳು ಮೊದಲಿನಂತೆ ಕೆಲಸ ಮಾಡದಿರುವುದರಿಂದ ವೃದ್ಧರ ಸಮಸ್ಯೆಗಳು ಹೆಚ್ಚುತ್ತವೆ. ಅವರ ದೈಹಿಕ ಮಾನಸಿಕ ಆರೋಗ್ಯದ ಬಗ್ಗೆ ಗಮನ ಹರಿಸಬೇಕು.

ವೃದ್ಧರ ಪೌಷ್ಟಿಕ ಆಹಾರ/ ನೈರ್ಮಲ್ಯದ ಬಗ್ಗೆ ಗಮನ ಹರಿಸಬೇಕು.

ವೃದ್ಧರಿಗೆ ವಿಶ್ರಾಂತಿ ಹಾಗೂ ವ್ಯಾಯಾಮದ ಅಗತ್ಯತೆ ಇರುತ್ತದೆ.

ಕಾಯಿಲೆಗಳಾದ ರಕ್ತದೊತ್ತಡ, ಸಕ್ಕರೆ ಕಾಯಿಲೆಯನ್ನು ಹತೋಟಿಯಲ್ಲಿಟ್ಟು ಹೃದಯಾಘಾತ ಪಾರ್ಶ್ವವಾಯುಗಳನ್ನು ತಡೆಯಬೇಕು.

ಚಲನವಲನಕ್ಕೆ ಅವರಿಗೆ ಸಹಾಯ ಅಗತ್ಯ. ನಡೆಯುವಾಗ ಕೋಲು, ದೃಷ್ಟಿಗೆ ಕನ್ನಡಕ, ಕಿವಿ ಕೇಳಿಸದಿದ್ದರೆ ಉಪಕರಣದ ಅಗತ್ಯತೆ ಬಗ್ಗೆ ಗಮನಹರಿಸಬೇಕು.

ವೃದ್ಧಾಪ್ಯದಲ್ಲಿ ಅಪಘಾತಗಳಾಗುವ ಸಾಧ್ಯತೆಯುಂಟು ತಡೆಯಲು ಪ್ರಯತ್ನಿಸಿ. ಅವರು ನಿಧಾನವಾಗಿ ಚಲಿಸಲು ಪ್ರೋತ್ಸಾಹಿಸಬೇಕು. ಮನೆಯಲ್ಲಿ ಬೆಳಕು, ಗಾಳಿ ಸರಿಯಾಗಿ ಒದಗುವಂತೆ ಅವರಿಗೆ ಸಹಾಯ ಮಾಡಬೇಕು.

ಕಾರ್ಮಿಕರ ಆರೋಗ್ಯ

ಆಧುನಿಕ ವಿಜ್ಞಾನದ ಯುಗದಲ್ಲಿ ಕಾರ್ಮಿಕ ವರ್ಗ ಸಮಾಜದಲ್ಲಿ ಪ್ರಾಮುಖ್ಯತೆ ಪಡೆದಿದೆ. ಈ ಜನರು 8 ರಿಂದ 10 ಗಂಟೆ ನಿರಂತರವಾಗಿ ಯಂತ್ರಗಳ ಮುಂದೆ ಕೆಲಸ ಮಾಡುತ್ತಾರೆ. ಅವರಿಗೆ ಶಕ್ತಿ, ಏಕಚಿತ್ತತೆ, ಅಗತ್ಯವಾಗುತ್ತದೆ. ಅವರಿಗೆ ಪೌಷ್ಟಿಕ ಆಹಾರ, ವಿಶ್ರಾಂತಿಯ ಅಗತ್ಯತೆ ಇದೆ. ಅವರು ಕೆಲಸ ಮಾಡುವ ಸ್ಥಳ ನೈರ್ಮಲ್ಯಕರವಾಗಿರಬೇಕು. ಪ್ರತಿಯೊಂದು ಉದ್ಯೋಗದಲ್ಲೂ ಅನೇಕ ತೊಂದರೆಗಳು (Occupational Disease) ಉಂಟಾಗಲು ಸಾಧ್ಯ. ಆ ತೊಂದರೆಗಳ ಅಧ್ಯಯನ ಮಾಡಿ ಪರಿಹಾರ ಒದಗಿಸಬೇಕು. ಮಹಿಳಾ ಕಾರ್ಮಿಕರಿಗೆ ಹೆರಿಗೆ, ಬಾಣಂತನಕ್ಕೆ ರಜಗಳು ಬೇಕಾಗುತ್ತದೆ. ವೈದ್ಯಕೀಯ ಚಿಕಿತ್ಸೆ ಅತ್ಯಗತ್ಯವಾಗಿರುತ್ತದೆ. ತಮ್ಮ ಅಗತ್ಯತೆ ಬಗ್ಗೆ ಕಾರ್ಮಿಕನಿಗೆ ಕೇಳುವ ಹಕ್ಕು ದೊರಕಿದಾಗಲೇ ಅವರ ಆರೋಗ್ಯ ಸುಧಾರಿಸಿಕೊಳ್ಳಲು ಸಾಧ್ಯ.

ಹಿಂದೂ ಸಮಾಜೋತ್ಸವಗಳ ಮೂಲಕ ಸಮಾಜಕ್ಕೆ ಕಿಚ್ಚು ಹಚ್ಚುತ್ತಿವೆ ಭಜರಂಗದಳ-ಸಂಘ ಪರಿವಾರ ಪಡೆ. ಪ್ರವೀಣ ತೊಗಾಡಿಯಾನ ವಿಷಪೂರಿತ ಭಾಷಣಕ್ಕೆ ಲಕ್ಷದಷ್ಟು ಜನ ಸ್ಪಂದಿಸುತ್ತಾರೆಂದರೆ 'ವಾಸ್ತವಿಕ ಸ್ಥಿತಿ ಏನು?' ಸಂಘ ಪರಿವಾರದ ಹೂಂಕಾರ - ಅದಕ್ಕೆ ಸಮ್ಮತಿಸುತ್ತಿರುವ ಸರ್ಕಾರದ ಕುರಿತು ವಿಶ್ಲೇಷಣೆ ಇಲ್ಲಿ.

ಉಡುಪಿಯಲ್ಲಿ ಹಿಂದೂ ಸಮಾಜೋತ್ಸವ

ಈ ಉನ್ಮಾದ ಏಕೆ?

ಪ್ರಭಾಕರ ನೇರಳಕಟ್ಟೆ

ಸರ್ವೇಶ್ವರ ದಯಾಳ್ ಸಕ್ಸೇನಾ ಕೇಳುತ್ತಾರೆ. 'ನಿಮ್ಮ ಮನೆಯ ಒಂದು ಕೋಣೆಯಲ್ಲಿ ಶವವಿದ್ದೆ, ನೀವು ಮತ್ತೊಂದು ಕೋಣೆಯಲ್ಲಿ ಹಾಡುತ್ತಿರಬಲ್ಲಿರಾ? ನಿಮ್ಮ ಮನೆಯ ಒಂದು ಕೋಣೆಗೆ ಬೆಂಕಿ ಹೊತ್ತಿಕೊಂಡಿದೆ, ನೀವು ಮತ್ತೊಂದು ಕೋಣೆಯಲ್ಲಿ ನಿದ್ರಿಸಬಲ್ಲಿರಾ? ನಿಮ್ಮ ಮನೆಯ ಒಂದು ಕೋಣೆಯಲ್ಲಿ ಹೆಣಗಳು ಕೊಳೆತು ನಾರುತ್ತಿವೆ, ನೀವು ಮತ್ತೊಂದರಲ್ಲಿ ಪ್ರಾರ್ಥನೆ ಮಾಡಬಲ್ಲೀರಾ?

"ಹೌದು"

ಎನ್ನುವುದಾದರೆ ನಿಮ್ಮೊಂದಿಗೆ ಹೇಳಲು ನನಗೇನೂ ಉಳಿದಿಲ್ಲ.'

ವಿ.ಎಚ್.ಪಿ., ಭಜರಂಗಿ ನಾಯಕರುಗಳ ವರ್ತನೆ ನೋಡಿದಾಗ ಸಕ್ಸೇನಾರ ಈ ಮಾತು ಪದೇ ಪದೇ ನೆನಪಾಗುತ್ತಿದೆ. ನಮ್ಮದೆ ಮನೆಯ ಒಂದಷ್ಟು ಕೋಣೆಗಳಲ್ಲಿ ಬರದಿಂದ ಜನತೆ ತತ್ತರಿಸುತ್ತಿದ್ದಾರೆ, ಹಿಂದೂ ಮತಾಂಧರಿಗೆ ಅಯೋಧ್ಯೆ ಮುಖ್ಯ. ನಮ್ಮದೇ ಮನೆಯ ಒಂದಷ್ಟು ಕೋಣೆಗಳಲ್ಲಿ ರೈತರು ದಿನನಿತ್ಯ ಸಂಕಟ ಪಡುತ್ತಿದ್ದಾರೆ. ಆದರೂ ಇವರಿಗೆ ರಾಮಲಲ್ಲಾ ಮುಖ್ಯ, ಆತನ ಕೇವಲ ವಿಗ್ರಹದ ದರ್ಶನ ಮುಖ್ಯ. ಭಾರತವೆಂಬೋ ಇಡೀ ಮನೆಯ ತುಂಬಾ ನಿರುದ್ಯೋಗದ ತಾಂಡವ ನಡೆದಿದೆ, ಆದರೂ ಇವರು ಕಾಶಿ, ಮಥುರಾ ಸೇರಿದಂತೆ ದೇಶದ ತುಂಬಾ ಮೂವತ್ತು ಸಾವಿರದಷ್ಟು ಮಸೀದಿಗಳ ಧ್ವಂಸಕ್ಕೆ ಹುನ್ನಾರ ಹಾಕುತ್ತಿದ್ದಾರೆ. ಇಂತವರಿಂದಾಗಿ ವಿಶ್ವದಲ್ಲೇ ಅತ್ಯಂತ ತೊಡಕಿನ ಸಮಾಜ ಭಾರತದ್ದು ಎನಿಸುವಂತಾಗಿದೆ.


ಜನದ್ರೋಹಿ ಕಾಂಗ್ರೆಸ್

ಗುಜರಾತನ್ನೆಲ್ಲಾ ಧ್ವಂಸ ಮಾಡಿದ್ದಾಯ್ತು. ಇನ್ನೀಗ ಕರ್ನಾಟಕವನ್ನು ಗುಜರಾತ್ ಮಾಡುವ ಪ್ರಯತ್ನ. ಕರ್ನಾಟಕದಲ್ಲಿ ಕೈಯಲ್ಲೇ ಅಧಿಕಾರವಿದ್ದೂ ಧರ್ಮಾಧಾರಿತ ಗೂಂಡಾ ಸಂಘಟನೆಯ ದುರ್ವರ್ತನೆಯನ್ನು ನಿಗ್ರಹಿಸಲಾಗಲಿಲ್ಲ. ಇವರಿಂದ ಇನ್ನೇನು ನಿರೀಕ್ಷಿಸಲು ಸಾಧ್ಯ? ಬೆಂಗಳೂರಿನ ಹಿಂದೂ ಸಮಾಜೋತ್ಸವವಾಯಿತು, ಬಾಬಾಬುಡನ್ ಗಿರಿಯಲ್ಲಿ ದತ್ತಉತ್ಸವವೂ ಆಯಿತು. ಉಡುಪಿಯಲ್ಲೂ ಭಜರಂಗಿಗಳ ಪಿಕಾರ ಹಿಂದೂ ಸಮಾಜೋತ್ಸವವೂ ಆಯಿತು. ಎಲ್ಲಾ ಮುಗಿದರೂ ಸರ್ಕಾರ ಮಾತ್ರ ಮಲಗಿದೆ. ಮಲಗಿದಲ್ಲೇ ಮುಳುಗಿದೆ. ಇದರ ದುಷ್ಫಲವನ್ನು ಕೇವಲ ಕಾಂಗ್ರೆಸ್ಸೇ ಅಲ್ಲ, ಕೋಮುವಾದಿ ಅಜೆಂಡಾಕ್ಕೆ ವಿರುದ್ಧವಾಗಿ ಕಾಂಗ್ರೆಸ್ಸಿಗೆ ಮತಹಾಕಿದ ಪ್ರತಿಯೊಬ್ಬರೂ ಅನುಭವಿಸಬೇಕಾಗಿದೆ.

ಉಡುಪಿಯಲ್ಲಿ ಭಜರಂಗಿ ಅರಚಾಟ

ಸಾರ್ವಕರನ ಬಾಲಬಡುಕರಿಗೆ ಇಷ್ಟಕ್ಕೇ ನೆಮ್ಮದಿ ಸಿಗದಿರುವುದು ಸ್ವಾತಂತ್ರ್ಯ ನಂತರದ ಎಷ್ಟೋ ಘಟನೆಗಳು ಸಾಬೀತುಪಡಿಸಿಕೊಟ್ಟಿವೆ. ಗಾಂಧೀ ಹತ್ಯೆಯಿಂದ ಹಿಡಿದು ಮೊನ್ನೆ ಉಡುಪಿಯಲ್ಲಿ ನಡೆದ ಬೃಹತ್ ಹಿಂದೂ ಸಮಾಜೋತ್ಸವದಲ್ಲಿಯವರೆಗೆ ಮತಾಂಧರ ಕಾಲ್ತುಳಿತಕ್ಕೆ ಸಿಕ್ಕ ಹಿಂದೂ, ಮುಸಲ್ಮಾನ್, ಸಿಖ್‌ರೆಲ್ಲರೂ ಸಜ್ಜುಗುಜ್ಜಾಗಿ ಹೋಗಿದ್ದಾರೆ. ಈ ತೊಗಾಡಿಯಾ ರಾಕ್ಷಸ ಹೋದಲ್ಲೆಲ್ಲಾ ಕಿಚ್ಚು ಹಚ್ಚುತ್ತಿದ್ದಾನೆ. ಉಡುಪಿಯಲ್ಲಿ ಈತನಕ ಬೃಹತ್ ಪ್ರಮಾಣದ ಧಾರ್ಮಿಕ ಪ್ರದರ್ಶನ ನಡೆದದ್ದಿಲ್ಲ. ಇದೇ ಮೊದಲು ಇದು ತೊಗಾಡಿಯಾನ ಪ್ರಭಾವ, ಇನ್ನೊಂದು ಸಂಗತಿಯೆಂದರೆ ಉಡುಪಿಯಲ್ಲಿ ಈ ತನಕ ಬೃಹತ್ ಪ್ರಮಾಣದಲ್ಲಿ ಕೋಮುದಳ್ಳುರಿಯೂ ಹೊತ್ತಿಕೊಂಡದ್ದಿಲ್ಲ, ತೊಗಾಡಿಯಾ ಇಲ್ಲಿ ಬಂದು ಮಾತಾಡಿದ್ದಾನೆ. ಮುಂಬರುವ ದಿನಗಳಲ್ಲಿ ಕೋಮು ಗಲಭೆಗಳ ಪ್ರಕರಣಗಳೇನಾದರೂ ಸಂಭವಿಸಿದಲ್ಲಿ ಉಡುಪಿ ನಗರವಿಡೀ ಹೊತ್ತಿ ಉರಿದೀತು. ಇದು ನಮ್ಮ ಸರ್ಕಾರದ ಜಾಣ ಕಿವುಡುತನದಿಂದ ಸೃಷ್ಟಿಯಾದ ದುರಂತ. ಧಾರ್ಮಿಕ ಸಮೂಹಸನ್ನಿಗೆ ಒಳಗಾದ ಜನ ಕೋಮು ವಿದ್ವೇಷಕಾರಿ ಸನ್ನಿವೇಶಗಳಲ್ಲಿ ಹೇಗೆ ವರ್ತಿಸುತ್ತಾರೆಂಬುದನ್ನು ಹೇಳಬರುವುದಿಲ್ಲ, ಒಟ್ಟಾರೆ ಮುಂದೆ ಉಡುಪಿ ನಗರ ಮತ್ತು ಜಿಲ್ಲೆಯಾದ್ಯಂತ ಅಂತದ್ದೇನಾದರೂ ಸಂಭವಿಸಿದರೆ ಅದಕ್ಕೆ ಸಂಪೂರ್ಣ ಹೊಣೆ ಸಂಘಪರಿವಾರ ಮತ್ತು ಎಸ್.ಎಂ.ಕೃಷ್ಣ.

ಉಡುಪಿಯಲ್ಲಿ ಭಾಷಣ ಮಾಡಿದ



ತೊಗಾಡಿಯಾ ಇಲ್ಲಿನ ಅಮಾಯಕ ಹಿಂದೂಗಳ ತಲೆ ತಿರುಗಿಸಿ ಸಮೂಹಸನ್ನಿಗೆ ಸಿದ್ಧ ಮಾಡಿರುವುದು ಸತ್ಯ. ವಸುದೇವ ಭೂಪಾಲಂ ಹೇಳಿರುವಂತೆ **'ಮತಾಧಿಕಾರಿಗಳಿಗೆ ಜಗತ್ತನ್ನು ಭಯದಿಂದ ತುಂಬುವುದರಲ್ಲೇ ಸಂತೋಷ. ತೊಗಾಡಿಯಾನ ಉದ್ದೇಶವೂ ಅದೇ. ಅದಕ್ಕೋಸ್ಕರ ಆತ ಇರುವ ಸತ್ಯವನ್ನು ತಿರುಚುವುದಲ್ಲದೆ, ಅಗತ್ಯಕ್ಕೆ ಬೇಕಾಗಿ ಇಲ್ಲದ್ದನ್ನೂ ತನ್ನ ಮಾತಿನಲ್ಲಿ ಸೇರಿಸಿ ಕೊಳ್ಳುತ್ತಾನೆ.** ಇಲ್ಲದಿದ್ದರೆ ನೀವೇ ನೋಡಿ, 'ಅಮೇರಿಕಾದ ಡಬ್ಲ್ಯು.ಟಿ.ಸಿ. ಕೆಡವಿ ಹಾಕಿದ ಸ್ಮರಣಾರ್ಥ ಲಾಡನ್ ಹೆಸರಿನಲ್ಲಿ ಮಂದಿರ ನಿರ್ಮಿಸಲು ಹೇಗೆ ಅಮೇರಿಕ ಬಿಡುವುದಿಲ್ಲವೋ ಅದೇ ರೀತಿ ಅಯೋಧ್ಯೆಯಲ್ಲಿ ಬಾಬರ್ ನಿರ್ಮಿಸಿದ ಮಸೀದಿಗೂ ಅವಕಾಶ ಸಾಧ್ಯವಿಲ್ಲ" ಎಂದು ಬೊಗಳಿದ್ದಾನೆ. ಹೀಗೆಲ್ಲಾ ಹೇಳುವ ಮುಂಚೆ ತೊಗಾಡಿಯಾ ಯೋಚಿಸದೆ ಇದ್ದ ಸಂಗತಿಯೆಂದರೆ 'ಯಾರಾದರೂ ಅಲ್ಲಿ ಲಾಡನ್ ಮಂದಿರ ನಿರ್ಮಿಸಲು ಹೊರಟಿದ್ದಿದೆಯಾ? ಇಲ್ಲ ಯಾರೂ ಇಲ್ಲ. ಪ್ರಪಂಚದ ಇಷ್ಟು ಕೋಟಿ ಜನಸಂಖ್ಯೆಯಲ್ಲಿ, ಅಲ್‌ಖ್ಯಾದಾದ ಸದಸ್ಯರನ್ನೂ ಒಳಗೊಂಡಂತೆ ಒಬ್ಬೇ ಒಬ್ಬ ವ್ಯಕ್ತಿ ಈತನಕ ಅಂಥದ್ದೊಂದು ಮಂದಿರ ಯಾ ಮಸೀದಿಯಾ ಕಟ್ಟುವ ಮಾತಾಡಿದ್ದು ಎಲ್ಲೂ ವರದಿಯಾಗಿಲ್ಲ. ಎಲ್ಲೂ ಪ್ರಸ್ತಾಪವಾಗದ ಸುದ್ದಿಯೊಂದು ತೊಗಾಡಿಯಾಗೆ ಹೇಗೆ ತಿಳಿಯುತ್ತದೆ? ಜನರ ಒಗ್ಗಟ್ಟನ್ನು ಒಡೆಯಲೆಂದೇ ಸದಾ ಮಂದಿರ ಕಟ್ಟುವ ಕನಸು ಕಾಣುವ ಈತನಿಗೆ ತಾನೇ ಎಲ್ಲೋ ಲಾಡೆನ್ ಮಂದಿರ ಕಟ್ಟಿದ ಕನಸು ಬಿದ್ದಿರಬೇಕು.

ಸಮೂಹ ಸನ್ನಿ

ಸಂಘಪರಿವಾರದ ಸಭೆಗಳಿಗೆ ಲಕ್ಷಗಟ್ಟಲೆ ಜನ ಸೇರುವುದು ನೋಡಿದರೆ ನಮ್ಮ ದೇಶದ ಭವಿಷ್ಯ ನೆನೆದು ಆತಂಕವಾಗುತ್ತದೆ. ಮನಸ್ಸುಗಳನ್ನು ಕೆರಳಿಸುವ ಭಜರಂಗಿ ನಾಯಕರ ಮಾತುಗಳು ದೇಶ ಉಳಿಸಲು ಖಂಡಿತಾ ಸಹಕಾರಿಯಾಗಿಲ್ಲ ಎಂಬುದು ಸ್ಪಷ್ಟ ಸತ್ಯ. ತೊಗಾಡಿಯಾ, ಮುತಾಲಿಕ್‌ಗಳ ಭಾಷಣಗಳಿಗೆ ಅಷ್ಟೊಂದು ಜನ ಸೇರುವುದೊಂದು ಸಮೂಹ ಸನ್ನಿ. ಈ ಹಿಂದೆ ಕುಂದಾಪುರ ತಾಲೂಕಿನ ಪಡುಕೋಣೆ, ಮೂಡ್ಲಕಟ್ಟೆ ಎಂಬ ಹಳ್ಳಿಗಳಲ್ಲಿ ಸಮೂಹಸನ್ನಿಗೆ ಸ್ಪಷ್ಟ ಉದಾಹರಣೆಗಳಾಗಬಲ್ಲ ಒಂದೆರಡು ಪ್ರಕರಣಗಳು ನಡೆದಿದ್ದವು. ತಾಲೂಕಿನ ಆಸೋಡು ಗ್ರಾಮದಲ್ಲಿ ಸಂಭವಿಸಿದ ಸೂಜಿ ಪ್ರಕರಣವೂ ಕೂಡ ಇಂತಹ ಸಮೂಹಸನ್ನಿಯ ಪ್ರಕರಣವೆ. ಪಡುಕೋಣೆ ಎಂಬೊಂದು ಸಣ್ಣ ಹಳ್ಳಿಯಲ್ಲಿ ಏಸುವಿನ ತಾಯಿ ಗೋಡೆಯಲ್ಲಿ ಮೂಡಿ ಬಂದಾಗ ತಾಲೂಕಿನೆಡೆ - ಎಡೆಯಿಂದ ಜನ ಧಾವಿಸಿದ್ದರು. ಗೋಡೆಯಲ್ಲಿ ಆ ತರಹದ ಚಿತ್ರವೊಂದು ಕಾಣಿಸಿದ್ದಕ್ಕೆ ಬೇರೆಯದೇ ಆದ ವೈಜ್ಞಾನಿಕ ಕಾರಣಗಳಿದ್ದವು. ಹಳ್ಳಿಯ ಕೆಲವು ಧಾರ್ಮಿಕ ಮುಖಂಡರು ಘಟನೆಯನ್ನು ಸ್ವಹಿತಕ್ಕೆ ಬಳಸಿಕೊಳ್ಳುವ ಪ್ರಯತ್ನ ಮಾಡಿದಾಗ ಇಲ್ಲಿನ ಪತ್ರಿಕೆಯೊಂದು ವಿಜ್ಞಾನದ ನೆಲೆಗಟ್ಟಿನ ಮೇಲೆ ಘಟನೆಯನ್ನು ವಿಶ್ಲೇಷಿಸಿ ಜನರ ಮೌಢ್ಯವನ್ನು ತೊಲಗಿಸಿತ್ತು. ಮೂಡ್ಲಕಟ್ಟೆ ಪ್ರಕರಣವೂ ಸಹ ಇಂತದ್ದೇ, ಇಂತಹ ಕ್ಷುಲ್ಲಕ ವಿಷಯಗಳಿಗೆ ಜನ ಸೇರುವ ಬಗ್ಗೆ ಇಂತದ್ದನ್ನೆಲ್ಲಾ ವೈಜ್ಞಾನಿಕವಾಗಿ, ವೈಚಾರಿಕವಾಗಿ ನೋಡುವಾತನಿಗೆ ಇದು ಕ್ಷುಲ್ಲಕ ಎನಿಸದಿರುವುದು ಆಶ್ಚರ್ಯವೇನಲ್ಲ. ಧಾರ್ಮಿಕತೆಯ ಶಕ್ತಿಯೇ ಅಂತದ್ದು ಅದಕ್ಕಾಗಿಯೇ ಕಾರ್ಲ್‌ಮಾರ್ಕ್ಸ್ ಬಹಳ ವರ್ಷಗಳ ಹಿಂದೆಯೇ ಹೇಳಿರುವುದು, ಧರ್ಮವೆಂಬುದು ಹೃದಯಹೀನ ಜಗತ್ತಿನ ಹೃದಯ, ಆಶಾ ಹೀನರ ಆಶೆ, ಜನರಿಗೆ ಅದೊಂದು ಅಫೀಮು' ಎಂದು.

ಇವತ್ತು ಪ್ರವೀಣ್ ತೊಗಾಡಿಯಾನ ಸಭೆಗಳಿಗೆ ಲಕ್ಷಗಟ್ಟಲೆ ಜನ ಸೇರುತ್ತಾರೆಂದರೆ ಅದಕ್ಕೆ ಕಾರಣ ತೊಗಾಡಿಯಾ ಅಲ್ಲ. ಜನರ ಸಂಕಷ್ಟದ, ಹತಾಶೆಯ ಸ್ಥಿತಿ - ಅದಕ್ಕೊಂದು ನೆಪ, ಪೇಜಾವರ ಸ್ವಾಮಿಯ ಕಾಲಿಗೆ ಜನ ಬೀಳುತ್ತಾರೆಂದರೆ ಅದಕ್ಕೂ ಕಾರಣ ಅದೆ. ಇದು ಧಾರ್ಮಿಕ ಸಮೂಹ ಸನ್ನಿ. ಜನರ ಧಾರ್ಮಿಕ ಮನೋಭಾವನೆಯನ್ನು ಬಿ.ಜೆ.ಪಿ ರಾಮನ ಮೂಲಕ ಓಟನ್ನಾಗಿ ಪರಿವರ್ತಿಸಲು ಹವಣಿಸುತ್ತಿದೆ. ಅದಕ್ಕೆ, ಸಂಘಪರಿವಾರ ಕಾರ್ಯಪ್ರವೃತ್ತವಾಗಿದೆ. ಇಂತಹ ಹೇಯಕೃತ್ಯದಲ್ಲಿ ವಿಶ್ವ ಗುರು ಎನಿಸಿಕೊಂಡಿರುವ, ವಿಶ್ವತೀರ್ಥ ಪೇಜಾವರ ತಮ್ಮ ಘನತೆ, ಗೌರವ ಮರೆತು ಜೊತೆಯಾಗಿರುವುದು ಜನದ್ರೋಹ ಮಾತ್ರವಲ್ಲ ದೈವದ್ರೋಹವೂ ಹೌದು. ಅಲ್ಲದೇ ಸಂಘಪರಿವಾರ ಇಲ್ಲಿ ಆಗಾಗ ಹಾಕುವ ಬಾಂಬ್ ಇದೆಯಲ್ಲ, 'ಆರೆಸ್ಸೆಸ್ ಚುನಾವಣಾ ಕಣಕ್ಕಿಳಿಯಲಿದೆ. ಹಿಂದೂ ಮಹಾಸಭಾ ಕಣಕ್ಕಿಳಿಯಲಿದೆ, ವಿ.ಎಚ್.ಪಿ. ಖುದ್ದಾಗಿ ತಾನೇ ಚುನಾವಣೆ ಎದುರಿಸಲಿದೆ' ಎಂಬುದು. ಇವೆಲ್ಲಾ ಹುಸಿ ಬಾಂಬ್‌ಗಳು ಅಂದರೆ ಸಂಘಪರಿವಾರ ಹಾಕುವ ಸ್ಕೆಚ್‌ಗಳೆಲ್ಲವೂ ಬಿ.ಜೆ.ಪಿ ಹೈಕಮಾಂಡಿನಿಂದಲೇ ನಿರ್ಧರಿತವಾದಂತದ್ದು. ಇತ್ತೀಚೆಗೆ ನಾಡಿನ ಮೂಲೆ ಮೂಲೆಗಳಲ್ಲಿ ಭಜರಂಗದಳ ಘಟಕಗಳು ನಿರ್ಮಾಣವಾಗುತ್ತಿರುವುದೂ ಇದೇ ಸ್ಕೆಚ್‌ನ ವ್ಯಾಪ್ತಿಗೆ ಬರುತ್ತದೆ.

ಗೆಲಿಲಿಯೋನಿಂದ ಇಲ್ಲಿಯತನಕ


ಭೂಮಿ ಸೂರ್ಯನ ಸುತ್ತಲೂ ಸುತ್ತುವ ಒಂದು ಸಾಮಾನ್ಯ ಗ್ರಹ ಎಂದು 'ಸೂರ್ಯಕೇಂದ್ರ ಸಿದ್ಧಾಂತ' ವನ್ನು ಗೆಲಿಲಿಯೋ ಜಗದ ಮುಂದಿಟ್ಟಾಗ ಆತ ಒಂಟಿಯಾಗಿದ್ದ. ಜನಬೆಂಬಲವಿರಲಿಲ್ಲ ಎಂದ ಮಾತ್ರಕ್ಕೆ ಕೋಟ್ಯಾಂತರ ಜನರ ನಂಬಿಕೆಯ ಎದುರು ಗೆಲಿಲಿಯೋ ಹೇಳಿದ್ದು ಸುಳ್ಳಲ್ಲ ತಾನೆ? ಪ್ರಗತಿಪರರ ಜೊತೆ ಸೇರುವ ಮಂದಿ ಇವತ್ತು ಸಂಖ್ಯೆಯಲ್ಲಿ ಕಡಿಮೆ ಇರಬಹುದು. ತೊಗಾಡಿಯಾನ ಸಭೆಗಳಿಗೆ ಲಕ್ಷ ಜನ ಸೇರಬಹುದು. ಅದೇ ಲಕ್ಷ ಜನಕ್ಕೆ ಬೇಗನೆ ಗೊತ್ತಾಗಲಿದೆ, ತೊಗಾಡಿಯಾನ ಬಣ್ಣ ಏನೆಂಬುದು. ಈ ದೇಶದ ಕಾರ್ಮಿಕ ವರ್ಗ, ರೈತವರ್ಗಗಳು ಇನ್ನೂ ತಮ್ಮನ್ನು ತಾವು ಮತಾಂಧರಂತೆ ಮಾರಿಕೊಂಡಿಲ್ಲ. ಇದನ್ನು ನಮ್ಮ ಘನವೆತ್ತ ಸರ್ಕಾರವೇ ಅಲ್ಲದೇ ಸಕಲ ಹಿಂದೂ ಮತಾಂಧರೂ ತಿಳಿದುಕೊಂಡಿರಲಿ. ಇಲ್ಲಿ ಇನ್ನೂ ಒಂದು ವಿಷಯ ನೆನಪಿಸಬೇಕಾಗುತ್ತದೆ. ವಸಾಹತುಶಾಹಿ ವಿರುದ್ಧದ ಹೋರಾಟ (ಸ್ವಾತಂತ್ರ್ಯ

ಪುಟ 11 ಕ್ಕೆ

ಉದಯವಾಣಿಯಲ್ಲ ಹಿಂದುತ್ವವಾಣಿ

ಕನ್ನಡ ಕರಾವಳಿ ಪೈ ಸಾಮ್ರಾಜ್ಯದ ವಾರ್ತಾ ಮಾಧ್ಯಮ ಉದಯವಾಣಿ ದಿನಪತ್ರಿಕೆ ಕೋಮು ಸೂಕ್ಷ್ಮತೆಯ ಅನೇಕ ಸಂದರ್ಭಗಳಲ್ಲಿ ತಾನು ಹಿಂದೂ ಪರ ಪತ್ರಿಕೆ ಎಂಬುದನ್ನು ಸಾಬೀತುಪಡಿಸಿಕೊಂಡಿದೆ. ಕಳೆದ ತಿಂಗಳಿನಲ್ಲಿ ಉಡುಪಿಯಲ್ಲಿ ನಡೆದ ಬೃಹತ್ ಶೋಭಾಯಾತ್ರೆಯ ವರದಿ ಮಾಡುತ್ತಾ ಉನ್ಮತ್ತನಾದ ವರದಿಗಾರನೊಬ್ಬ 'ಕೇಸರಿ ಟೀ ಶರ್ಟ್, ಟೋಪಿಗಳನ್ನು ಧರಿಸಿದ್ದ ಉತ್ಸಾಹಿಗಳು "ಜೈ ಶ್ರೀರಾಮ್" ಘೋಷಣೆ ಕೂಗಿದಾಗ ಭಕ್ತಿಯ ವಾತಾವರಣವೇ ಸೃಷ್ಟಿಯಾಯ್ತು ಎಂದು ವರದಿ ಮಾಡಿದ್ದಾನೆ. ನಿಜ ಹೇಳಬೇಕೆಂದರೆ ಭಜರಂಗಿ ಕಾರ್ಯಕರ್ತರು ಭಯದ ಸೃಷ್ಟಿಕರ್ತವೇ ಹೊರತು ಭಕ್ತಿ ಸೃಷ್ಟಿಸಿದ ಉದಾಹರಣೆ ಎಲ್ಲೂ ಇಲ್ಲ. ಇವರ ಪ್ರಕಾರ ಅರಚಾಟವನ್ನು ಭಕ್ತಿ ಎನ್ನುವುದು ಸದರಿ ವರದಿಗಾರನೂ ಸಮೂಹಸನ್ನಿಗೆ ಒಳಗಾದುದಕ್ಕೆ ಸಾಕ್ಷಿ. ಅಥವಾ ಭಕ್ತಿ ಎಂಬ ಪದ ಉದಯವಾಣಿಯವರು ಡಿಕ್ಷನರಿಯಲ್ಲಿ ಬೇರೆಯೇ ಅರ್ಥ ಪಡೆದಿರಬೇಕು.

ಇನ್ನೊಂದು ಉದಾಹರಣೆ 14.07.2003 ರ ಮುಖಪುಟ ವರದಿ 'ಕೋಮು ಸೌಹಾರ್ದಕ್ಕೊಂದು ಮಾದರಿ' ಎಂಬ ಸುದ್ದಿ. ಕಾಶ್ಮೀರದ ಇಚಿಗಾಂವ್ ಎಂಬ ಹಳ್ಳಿಯಲ್ಲಿ ಮುಸ್ಲಿಂ ಮತ್ತು ಹಿಂದೂಗಳ ನಡುವೆ ತುಂಬಾ ಸಾಮರಸ್ಯವಿದೆ ಈ ಸಮರಸದ ಪ್ರತೀಕವಾಗಿ ಅಲ್ಲಿನ ಮಸೀದಿ ಎದುರಿಗೆ ಶಾರೀಕಾದೇವಿ ಭಗವತಿ (ದುರ್ಗಾಪರಮೇಶ್ವರಿ) ಮಂದಿರವಿದೆ. ಉದಯವಾಣಿ ಇದರ ಬಗ್ಗೆ ವರದಿ ಪ್ರಕಟಿಸಿದಾಗ ಮಂದಿರ ಮತ್ತು ಮಸೀದಿಗಿರುವ ಅಂತರದ ಅಳತೆ ನೀಡಿದೆ. ಆ ಸಾಲುಗಳು ಹೀಗಿವೆ '...... ನೂತನವಾಗಿ ನಿರ್ಮಾಣಗೊಂಡ ದೇವಳದ ಹಿಂದೆ ಕಲ್ಲೆಸೆತದ ದೂರದಲ್ಲಿ ಮುಸ್ಲೀಮರ ಶಿಯಾ ಪಂಗಡಕ್ಕೆ ಸೇರಿದ ಹಜರತ್ ಅಬುಲ್‌ಫಜಲ್ ಅಬ್ಬಾಸ್‌ರ ದರ್ಗಾವಿದೆ' ಅಂತರಗಳ ಅಳತೆಯ ಮಾಪನ ಸೆಂಟಿಮೀಟರ್, ಇಂಚು ಅಡಿ, ಮೀಟರ್ ಇತ್ಯಾದಿಗಳಲ್ಲದೆ ಗ್ರಾಮೀಣವಾಗಿ ಕೂಗಳತೆಯ ದೂರ ಎಂಬೊಂದು ಶಬ್ದವೂ ಚಾಲ್ತಿಯಲ್ಲಿದೆ. ಆದರೆ 'ಕಲ್ಲೆಸೆತದ ದೂರ' ಎಂಬುದಿದೆಯಲ್ಲ ಇದು ಮಾತ್ರ ಉದಯವಾಣಿಯ ಕೋಮು ಪ್ರಚೋದನಕಾರಿ ಬುದ್ಧಿಯಿಂದ ಸೃಜಿತವಾದದ್ದು. ಎಲ್ಲಾ ಜನವಿಭಾಗಗಳ ನಡುವೆ ಸುಮಾರು 30 ವರ್ಷಗಳಿಂದ ಸಂವಹನ ನಡೆಸುತ್ತಿರುವ ಪತ್ರಿಕೆ ತನ್ನ ನಿಲುವನ್ನು ಬದಲಾಯಿಸಿಕೊಳ್ಳಲಿ.



ಝಣ ಝಣ ಕಾಂಚಾಣ

ಜಿ.ಎಸ್.ಮಣಿ

ಸ್ಟೇಟ್ ಬ್ಯಾಂಕಿನ ಕೊಡಲಿಯೇಟಿನ ತಯಾರಿ

ಭಾರತೀಯ ಸ್ಟೇಟ್ ಬ್ಯಾಂಕ್ ಈಗ 'ಒಣಕಟ್ಟಿಗೆಯನ್ನು' ಕಡಿಯುಹಾಕಲು ತಯಾರಾಗಿದೆ. "ಒಣಕಟ್ಟಿಗೆ" ಎಂದರೆ ಏನೆಂದು ಕೇಳದಿರಾ? ಹಳೆ ತಲೆಮಾರಿನ ಮುಂಬಡ್ತಿ ಸಿಗದ ಉದ್ಯೋಗಿಗಳನ್ನು ಲೆಕ್ಕ ಚುಕ್ತಾ ಮಾಡಿ ಮನೆಗೆ ಕಳುಹಿಸುವ ಯೋಜನೆಯನ್ನು ಅದು ಮಾಡಿ ಸರ್ಕಾರದ ಅನುಮೋದನೆಯನ್ನು ಪಡೆದುಕೊಂಡಿದೆಯಂತೆ.

ಈ ನಿವೃತ್ತಿ ಯೋಜನೆ ನೌಕರರ ಜೀವನವನ್ನು ಹಾಳು ಮಾಡೇ ಮಾಡುತ್ತದೆ. ಭಾರತದ ಬ್ಯಾಂಕುಗಳಿಗೆಲ್ಲ ಮುಂದಾಳತ್ವದ ಸ್ಥಾನದಲ್ಲಿರುವ ಭಾರತೀಯ ಸ್ಟೇಟ್ ಬ್ಯಾಂಕ್ ಇಂತಹ ಯೋಜನೆ ಜಾರಿಗೆ ತಂದರೆ ಉಳಿದ ಬ್ಯಾಂಕುಗಳಿಗೂ ಅದೇ ದಾರಿಯನ್ನು ಹಿಡಿಯುತ್ತವೆ ಎಂಬುದರಲ್ಲಿ ಸಂದೇಹವಿಲ್ಲ.

ಈಗಾಗಲೇ 2001 ನೇ ಇಸವಿಯ ನಿವೃತ್ತಿ ಯೋಜನೆಯಲ್ಲಿ ನಿವೃತ್ತಿ ಪಡೆದವರು ವಿಲವಿಲನೆ ಒದ್ದಾಡುತ್ತಿರುವಾಗ ಇನ್ನೊಂದು ನಿವೃತ್ತಿ ಯೋಜನೆ ಸಾಮಾಜಿಕವಾಗಿಯೂ ಗಂಡಾಂತರಕಾರಿಯಾಗಿ ಪರಿಣಮಿಸಲಿದೆ. ಒಂದು ಸಾರಿ ದೊಡ್ಡ ಮೊತ್ತ ಸಿಗುತ್ತದೆಂದು ಭ್ರಮೆಗೆ ಒಳಗಾಗುವ ನೌಕರರು ನಿವೃತ್ತಿ ಪಡೆದ ನಂತರವೇ ಈ ಭ್ರಮೆಯಿಂದ ಹೊರಬರತೊಡಗುತ್ತಾರೆ. ಆದರೆ ಅಷ್ಟೊತ್ತಿಗೆ ಕಾಲ ಮಿಂಚಿರುತ್ತದೆ.

ಉಪವಾಸದ ಆಮದು ಮುಂದುವರಿಯಲಿದೆ

ಹೀಗೆಂದರೇನೆಂದು ನೀವು ಹುಬ್ಬೇರಿಸುತ್ತೀರಿ ಗೊತ್ತು. ಉಪವಾಸವನ್ನೆಲ್ಲಿಂದಲಾದರೂ ಆಮದು ಮಾಡಲು ಸಾಧ್ಯವೆ? ಹೌದು ನಿಮ್ಮ ಈ ಸಂದೇಹ ಸರಿ. ಉಪವಾಸವನ್ನು ಆಮದು ಮಾಡಲು ಸಾಧ್ಯವಿಲ್ಲ. ಆದರೆ ಆಹಾರವನ್ನು ರಫ್ತು ಮಾಡಿದರೆ ಬಡಜನತೆ ಉಪವಾಸ ಬೀಳಲೇಬೇಕು. ಆ ದೃಷ್ಟಿಯಲ್ಲಿ ಉಪವಾಸ ಆಮದಾದಂತೆಯೇ ಅಲ್ಲವೆ?

ಇದು ಕೇಂದ್ರ ಸರ್ಕಾರದ ಹೇಳಿಕೆ "ಆಹಾರ ಧಾನ್ಯದ ರಫ್ತು ಮುಂದುವರಿಯಲಿದೆ. ಹಿಂದೆ ನಮ್ಮ ಗೋದಾಮುಗಳಲ್ಲಿ ಅರವತ್ತು ದಶಲಕ್ಷ ಟನ್ನುಗಳಷ್ಟು ಆಹಾರಧಾನ್ಯ ಕೊಳೆಯುತ್ತಿದೆ. ಆದ್ದರಿಂದ ಆಹಾರ ಧಾನ್ಯವನ್ನು ರಫ್ತು ಮಾಡಲೇಬೇಕು" ಎನ್.ಡಿ.ಎ. ಸರ್ಕಾರ ಬೊಬ್ಬೆ ಹೊಡೆದು ಮೂರು ಕಾಸಿಗೆ ಲಕ್ಷ ಲಕ್ಷ ಟನ್ನುಗಳಷ್ಟು ಆಹಾರಧಾನ್ಯವನ್ನು ರಫ್ತು ಮಾಡಿತ್ತು. ಆಹಾರಧಾನ್ಯ ರಫ್ತು ಮಾಡುವ ದೇಶ ಎಂಬ ಬಿರುದು ಬೇರೆ ಧರಿಸಿಕೊಂಡಿತು.

ಕೇಂದ್ರದ ಯೋಜನಾ ಆಯೋಗದ ಅಂದಾಜಿನಂತೆ ನಮ್ಮ ಜನಸಂಖ್ಯೆಗೆ ಆಹಾರ ಒದಗಿಸಲು 2003 ರ ವೇಳೆಗೆ ನಾವು 230 ದಶಲಕ್ಷ ಟನ್ ಆಹಾರ ಧಾನ್ಯಗಳನ್ನು ಉತ್ಪಾದಿಸಬೇಕು. ಕಳೆದ ಸಾಲಿನಲ್ಲಿ ನಾವು ಉತ್ಪಾದಿಸಿದ್ದು ಬರೀ 182 ದಶಲಕ್ಷ ಟನ್ನುಗಳಷ್ಟು ಆಹಾರಧಾನ್ಯ ಮಾತ್ರ.

ಇದು ನಮ್ಮ ಉತ್ಪಾದನಾ ಪರಿಸ್ಥಿತಿ ಇನ್ನೂ ನಮ್ಮ ವಿತರಣಾ ವ್ಯವಸ್ಥೆಯೂ ಬಹಳ ಹೊಲಸಾದದ್ದು. ಆದ್ದರಿಂದಲೇ ಎಷ್ಟೊ ಜನ ಉಪವಾಸ ಅರೆ ಉಪವಾಸವಿರುವ ಪರಿಸ್ಥಿತಿ ಹೀಗಿರುವಾಗ, ಯಾವುದೇ ವಿವೇಕವಿರುವ ಸರ್ಕಾರ ಇಂತಹ ಪರಿಸ್ಥಿತಿಯನ್ನು ಹೋಗಲಾಡಿಸುವ ಕೆಲಸವನ್ನು ಮೊದಲು ಮಾಡಬೇಕು. ಆದರೆ ಕೇಂದ್ರದ ಬಿಜೆಪಿ ನೇತೃತ್ವದ ಎನ್.ಡಿ.ಎ ಸರ್ಕಾರ ಇದಕ್ಕೆ ವಿರುದ್ಧವಾದುದನ್ನೇ ಮಾಡುತ್ತಿದೆ. ಆಹಾರಧಾನ್ಯಗಳ ರಫ್ತು ಮುಂದುವರೆಯುತ್ತದೆ ಎಂದು ಸಾರಿದೆ. ಇದರ ಅರ್ಥ ಉಪವಾಸ ಸಾಯುವವರ (ಅಂದರೆ ಬಡವರ) ಕಾಳಜಿಯನ್ನು ಅವರು ಮಾಡುವುದಿಲ್ಲ ಎಂದು.

ಅಭಿಜಿತ್ ಸೇನರ ನೇತೃತ್ವದ ಉನ್ನತ ಸಮಿತಿಯ ಪ್ರಕಾರ ಈ ಸಾಲಿನಲ್ಲಿ ಆಹಾರಧಾನ್ಯಗಳ ಉತ್ಪಾದನೆ ಹೆಚ್ಚಿದ್ದರೂ ಒಟ್ಟು ಉತ್ಪಾದನೆಯಲ್ಲಿ ಅದರ ಪ್ರಮಾಣ 1996 ಕ್ಕಿಂತಲೂ ಕಡಿಮೆ ಇರುತ್ತದಂತೆ. ಈ ಸಮಿತಿಯ ಪ್ರಕಾರ ಪ್ರತಿ ಹೆಕ್ಟೇರಿನ ಇಳುವರಿಯೂ ಹೆಚ್ಚುತ್ತಿಲ್ಲ ಮತ್ತು ಬೆಳೆವ ವೆಚ್ಚವೂ ಕಡಿಮೆಯಾಗುತ್ತಿಲ್ಲ.

ಇದೇ ಇರಬಹುದೆ ಎನ್.ಡಿ.ಎ ಹೇಳುವ ಸದನುಭವ?

ಸಣ್ಣ ಕೈಗಾರಿಕೆಗಳಿಗೆ ಕನ್ನಡಿಯ ಗಂಟು

ಸಣ್ಣ ಕೈಗಾರಿಕೆಗಳಿಗೆ 25 ಲಕ್ಷ ರೂಪಾಯಿಗಳವರೆಗೆ ಯಾವುದೇ ಹೆಚ್ಚಿನ ಆಧಾರವಿಲ್ಲದೆ ಬ್ಯಾಂಕುಗಳು ಸಾಲ ನೀಡಬೇಕೆಂಬುದು ಭಾರತೀಯ ರಿಸರ್ವ್ ಬ್ಯಾಂಕಿನ ಒಂದು ನಿರ್ದೇಶನ. ಇದು ಆದ್ಯತಾ ವಲಯವಾದ ಸಣ್ಣ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡುವ ಒಂದು ಕ್ರಮ. ಆದರೆ ಈ ನಿರ್ದೇಶನವನ್ನು ಪಾಲಿಸುವ ಬ್ಯಾಂಕುಗಳೇ ಇಲ್ಲವೆನ್ನಬೇಕು.

ಭಾರತ ಸರ್ಕಾರ ಮತ್ತು ಸಣ್ಣ ಕೈಗಾರಿಕಾಭಿವೃದ್ಧಿ ಬ್ಯಾಂಕಾದ ಎಸ್.ಐ.ಡಿ.ಬಿ.ಐ. (SIDBI) ಸೇರಿ ಸಣ್ಣ ಕೈಗಾರಿಕೆಗಳ 25 ಲಕ್ಷಗಳವರೆಗಿನ ಸಾಲಕ್ಕೆ ಜಾಮೀನು ನೀಡುವ ಟ್ರಸ್ಟ್ ಒಂದನ್ನು ಪ್ರಾರಂಭಿಸಿವೆ. ದೇಶದ 33 ಲಕ್ಷ ಸಣ್ಣ ಕೈಗಾರಿಕೆಗಳಲ್ಲಿ ಬರೀ 12,700 ಸಣ್ಣ ಉದ್ದಿಮೆಗಳಿಗೆ ಮಾತ್ರ ಸಾಲ ಈ ಷರತ್ತುಗಳಡಿಯಲ್ಲಿ ದೊರೆತಿದೆ ಎಂದರೆ ಸಣ್ಣ ಕೈಗಾರಿಕೆಗಳಿಗೆ ಎಷ್ಟು ಸುಲಭದಲ್ಲಿ ಸಾಲ ಸಿಗುತ್ತದೆ ಎಂಬುದನ್ನು ನೀವು ಊಹಿಸಬಹುದು.

ಇಲ್ಲೂ ದೊಡ್ಡವರಿಗೇ ಮಣೆ. ಕುಶಲಕರ್ಮಿಗಳಿಗೆ ಸುಲಭದಲ್ಲಿ ಸಾಲ ಸಿಗುವುದಿಲ್ಲ. ಇಂದು ಬ್ಯಾಂಕುಗಳು ಲಾಭದ ಮೇಲೆ ಹೆಚ್ಚು ಗಮನ ಇಡುವುದರಿಂದ ಸಣ್ಣವರಿಗೆ ಸಾಲ ಸಿಗುವುದು ಬಹಳ ಕಠಿಣ. ಸಣ್ಣವರ ಸಾಲ ಮರುಪಾವತಿಯಾಗದೇ ಹೋಗುತ್ತದೆ ಎಂಬವಾದದಲ್ಲಿಯೂ ಅಂತಹ ಹುರುಳಿಲ್ಲ.

ಸಣ್ಣ ಕೈಗಾರಿಕೆಗಳು ಅತ್ಯಂತ ಕಡಿಮೆ ಬಂಡವಾಳ ಹೂಡಿಕೆಯಿಂದ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗ ಸೃಷ್ಟಿ ಮಾಡುತ್ತವೆ. ಇಲ್ಲಿ ಉತ್ಪಾದಕತೆಯೂ ಹೆಚ್ಚಿನದು. ಆದ್ದರಿಂದಲೇ ಅಭಿವೃದ್ಧಿಶೀಲ ದೇಶವಾದ ಭಾರತದಲ್ಲಿ ಸಣ್ಣ ಕೈಗಾರಿಕೆಗಳಿಗೆ ಅಂತಹ ಪ್ರಾಮುಖ್ಯ. ಪ್ರೋತ್ಸಾಹ ನೀಡಬೇಕು.

ಉದಾರೀಕರಣ ಇದಕ್ಕೆ ವಿರುದ್ಧವಾದುದು. ಆದ್ದರಿಂದಲೇ 8 ಲಕ್ಷಕ್ಕೂ ಹೆಚ್ಚು ಸಣ್ಣ ಕೈಗಾರಿಕೆಗಳು ರೋಗಗ್ರಸ್ತವಾಗಿರುವುದು.

ಭಾಷಾವಾರು ಪ್ರಾಂತ್ಯ ಏಕೆ.....

ಪುಟ 5 ರಿಂದ

ಮೊದಲೇ ಮೂಡಿಬಂದರೂ ಆ ಹೋರಾಟದ ಒಂದು ಮಹತ್ವದ ಬೇಡಿಕೆಯೆಂದರೆ ಹೈದರಾಬಾದ್ ಸಂಸ್ಥಾನ, ಮದ್ರಾಸ್ ಮತ್ತು ಮುಂಬೈ ಪ್ರೆಸಿಡೆನ್ಸಿಗಳಲ್ಲಿ ಹರಡಿ ಹೋಗಿದ್ದ ತೆಲುಗು ಭಾಷಿಕ ಜನಗಳನ್ನು ಒಂದೇ ಪ್ರತ್ಯೇಕ ಘಟಕದಡಿ ತರಬೇಕು ಎನ್ನುವುದು. ನಿಜ, ಸ್ವಾತಂತ್ರ್ಯದ ನಂತರ ದೇಶದಲ್ಲಿ ಬದಲಾದ ಪರಿಸ್ಥಿತಿಯಲ್ಲಿ ತೆಲಂಗಾಣಾ ಹೋರಾಟವನ್ನು ಅಕ್ಟೋಬರ್ 1951 ರಲ್ಲಿ ಹಿಂತೆಗೆದುಕೊಳ್ಳಲಾಯಿತು. ಆದರೆ ಈ ಹೋರಾಟ ಹೈದರಾಬಾದ್ ನಿಜಾಮ ಭಾರತದೊಡನೆ ಸೇರುವಂತೆ ಬಲವಂತ ಮಾಡಿತಷ್ಟೇ ಅಲ್ಲ, ಭಾರತವನ್ನು ಭಾಷಾವಾರು ಆಧಾರದಲ್ಲಿ ಪುನರ್ಸಂಘಟಿಸುವ ಪ್ರಶ್ನೆಯನ್ನು ದೇಶದ ಅಜೆಂಡಾದಲ್ಲಿ ಎಷ್ಟು ಬಲಯುತವಾಗಿ ತಂದಿತೆಂದರೆ ಆ ಬೇಡಿಕೆಯನ್ನು ತಳ್ಳಿ ಹಾಕುವುದು ನಂತರ ಸಾಧ್ಯವಾಗಲಿಲ್ಲ. ಕಾಂಗ್ರೆಸ್ ಆಳರಸರು ಒಂದು ರಾಜ್ಯ ಪುನರ್ಸಂಘಟನಾ ಆಯೋಗವನ್ನು ರಚಿಸಬೇಕಾಗಿ ಬಂತು. ಈ ಆಯೋಗದ ಶಿಫಾರಸ್ಸುಗಳಿಂದಾಗಿ ಭಾಷಾವಾರು ಪ್ರಾಂತ್ಯಗಳು ರೂಪುಗೊಂಡವು. 1956 ರ ವೇಳೆಗೆ ಸುಮಾರಾಗಿ ಈ ಕೆಲಸ ಪೂರ್ಣಗೊಂಡಿತು. ಬಹಳಷ್ಟು ಹೊಸದಾಗಿ ರೂಪುಗೊಂಡ ರಾಜ್ಯಗಳು 1957 ರಲ್ಲಿ ಸಾರ್ವತ್ರಿಕ ಚುನಾವಣೆಗಳೊಂದಿಗೆ ಮೊದಲಬಾರಿಗೆ ವಿಧಾನಸಭಾ ಚುನಾವಣೆಗಳನ್ನು ಕಂಡವು. ಈ ಚುನಾವಣೆಗಳ ನಂತರ ಕೇರಳದಲ್ಲಿ ಕಾಮ್ರೇಡ್ ಇಎಂಎಸ್ ನೇತೃತ್ವದ ಒಂದು ಕಮ್ಯುನಿಸ್ಟ್ ಸರ್ಕಾರ ಅಧಿಕಾರಕ್ಕೆ ಬಂತು.

ಸಂಘ ಪರಿವಾರದ ಹಳೆಯ ಆಟ

ಹೀಗೆ ಭಾಷಾವಾರು ರಾಜ್ಯಗಳ ರಚನೆ ಜನಗಳ ಹೋರಾಟ, ತ್ಯಾಗ-ಬಲಿದಾನಗಳ ಫಲ, ಉದಾ: ಸಂಯುಕ್ತ ಮಹಾರಾಷ್ಟ್ರ ಚಳುವಳಿ ಒಂದು ಪೋಲೀಸ್ ಗೋಲಿಬಾರಿನಲ್ಲಿ ಒಂದೇ ದಿನ ಮೂರು ಡಜನ್‌ಗಿಂತಲೂ ಹೆಚ್ಚು ಜೀವಗಳನ್ನು ಬಲಿತೆಗೆದುಕೊಂಡಿತು. ಆದರೆ ಸ್ವಾತಂತ್ರ್ಯ ಹೋರಾಟದಲ್ಲಿ ಎಂದೂ ಭಾಗವಹಿಸದ ಆರ್‌ಎಸ್‌ಎಸ್ ಮತ್ತು ಅದರ ರಾಜಕೀಯ ವೇದಿಕೆ (ಆಗ ಜನಸಂಘ, ಈಗಿನ ಬಿಜೆಪಿಯ ಹಿಂದಿನ ಅವತಾರ) ಎಂದೂ ಜನಗಳ ಈ ಭಾಷಾ ಸ್ವಂತಿಕೆಯನ್ನು ಮಾನ್ಯ ಮಾಡಲಿಲ್ಲ, ಏಕೆಂದರೆ ಭಾರತವನ್ನು ಏಕಘಟಕ ರಾಷ್ಟ್ರವಾಗಿ ಮಾತ್ರ ಕಾಣುವ ಅವರ ಪರಿಕಲ್ಪನೆಗೆ ಸರಿಹೊಂದುವುದಿಲ್ಲ. ಇದರರ್ಥ ವೈವಿಧ್ಯತೆಯಲ್ಲಿ ಐಕ್ಯತೆಯನ್ನು ಅವರೆಂದೂ ಗುರುತಿಸಿದವರಲ್ಲ. ಎಲ್ಲರಿಗೂ ತಿಳಿದಿರುವಂತೆ ನಮ್ಮದು ಹಲವು ಭಾಷೆಗಳು, ಧರ್ಮಗಳು, ಜನಾಂಗೀಯ ಗುಂಪುಗಳು, ಸಂಸ್ಕೃತಿಗಳು, ಹಬ್ಬಗಳು, ಉಡುಗೆ-ತೊಡುಗೆ, ಆಹಾರ ಪದ್ಧತಿ ಇತ್ಯಾದಿಗಳು ಇರುವ ಒಂದು ದೇಶ. ಆದ್ದರಿಂದಲೇ ನಮ್ಮ ಸಂವಿಧಾನವನ್ನು ರೂಪಿಸಿದವರು ಒಕ್ಕೂಟ ತತ್ವ ಮತ್ತು ಧರ್ಮನಿರಪೇಕ್ಷತೆಯನ್ನು ನಮ್ಮ ರಾಜಕೀಯ ವ್ಯವಸ್ಥೆಯ ಸ್ತಂಭಗಳಾಗಿ ಮಾಡಿದರು.

ಆದರೆ ಇವೆಲ್ಲಾ ಸಂಘ ಪರಿವಾರಕ್ಕೆ ನಿಷಿದ್ಧ. ಅವರು ಈ ವೈವಿಧ್ಯತೆಯ ಮೇಲೆ ಒಂದು ಕೃತಕ ಏಕತೆಯನ್ನು ಹೊರಿಸಬಯಸುವವರು. ನಮ್ಮ ಯಾವುದೇ ಜನವಿಭಾಗಗಳ ಆಕಾಂಕ್ಷೆಗಳನ್ನು ಕೊಂದರೆ ಅದು ನಮ್ಮ ಐಕ್ಯತೆಗೆ ಎಂತಹ ಅಪಾಯವನ್ನು ತರುತ್ತದೆ ಎಂಬುದನ್ನು ಅವರು ಅರಿಯಲಾರರು. ನಮ್ಮ ಜನಗಳ ಎಲ್ಲಾ ವಿಭಾಗಗಳಿಗೆ ಬೆಳೆಯಲು ಸಮಾನ ಅವಕಾಶ ದೊರೆತು ಆ ಮೂಲಕ ಅವರು ತಾವೆಲ್ಲಾ ಈ ಒಂದು ಮಹಾನ್ ದೇಶದ ಭಾಗಗಳು ಎಂದು ಭಾವಿಸುವಂತಾಗಿ ನಮ್ಮ ವೈವಿಧ್ಯತೆಯಿಂದ ನಿಜವಾದ ಐಕ್ಯತೆ ಬೆಳೆಯುತ್ತದೆ ಎಂಬುದನ್ನು ಅವರು ಅರಿಯಲಾರರು. ಸಂಘ ಪರಿವಾರ ಹಿಂದುತ್ವ ನಮ್ಮ ರಾಷ್ಟ್ರೀಯ ಐಕ್ಯತೆಗೆ ಮತ್ತು ಸಾಮರಸ್ಯಕ್ಕೆ ಮಾರಕವಾಗುತ್ತದಷ್ಟೆ.

ಸಂಘ ಪರಿವಾರ ಮತ್ತೆ ತನ್ನ ಆಟ ನಡೆಸಿದೆ. ಅಧಿಕಾರಕ್ಕೆ ಬಂದ ಮೇಲೆ ಬಿಜೆಪಿ ಭಾಷಾವಾರು ಪ್ರಾಂತ್ಯಗಳನ್ನು ಕಳಚಿಹಾಕುವ ತನ್ನ ಗುರಿಯನ್ನು ಈಡೇರಿಸಿಕೊಳ್ಳಲು ಸಂವಿಧಾನದಲ್ಲಿ ಮಹತ್ವಪೂರ್ಣ ಬದಲಾವಣೆಗಳನ್ನು ಬಯಸಿತು. ಇದಕ್ಕಾಗಿ ಅವರ ನೇತೃತ್ವದ ಕೇಂದ್ರ ಸರ್ಕಾರ ಒಂದು ಸಂವಿಧಾನ ಪರಾಮರ್ಶೆ ಸಮಿತಿಯನ್ನು ನೇಮಿಸಿತು. ಅದರ ವರದಿ ಇನ್ನೂ ಬಂದಿಲ್ಲ. ಆ ಪಕ್ಷದ ಈ ಆಟಕ್ಕೆ ಅಪಾರ ಪ್ರತಿರೋಧ ಬಂದೇ ಬರುತ್ತದೆ ಎಂಬುದು ಬೇರೆ ಮಾತು. ತನ್ನ ಕೆಲಸವನ್ನು ಸುಲಭಗೊಳಿಸಿಕೊಳ್ಳಲು ಅದು ಆಡಳಿತ ಅನುಕೂಲದ ವೇಷ ತೊಡಿಸಿದೆ. ವಾಸ್ತವವಾಗಿ ಇದರರ್ಥ ಇಡೀ ದೇಶವನ್ನು ಹತೋಟಿಯಲ್ಲಿಡುವ ಒಂದು ಸರ್ವಾಧಿಕಾರಶಾಹಿ ಕೇಂದ್ರದ ಅನುಕೂಲಕ್ಕಾಗಿಯಷ್ಟೇ. ಆದರೆ ಇಂತಹ ಆಡಳಿತ ಅನುಕೂಲಕ್ಕೆ ಭಾರತದ ವಿವಿಧ ಭಾಷಾ ಗುಂಪುಗಳ ಆಕಾಂಕ್ಷೆಗಳನ್ನು ಬಲಿಕೊಡಬೇಕಾಗುತ್ತದೆ. ಸಣ್ಣ ರಾಜ್ಯಗಳಿದ್ದರೆ ಜನಗಳನ್ನು ಜಾತಿ ಮತ್ತು ಧರ್ಮದಹೆಸರಲ್ಲಿ ಅಣಿನೆರೆಸಿ ಚುನಾವಣೆಗಳನ್ನು ಗೆಲ್ಲುವುದು ಸುಲಭ ಎಂಬುದೂ ಆ ಪಕ್ಷದ ನಿರೀಕ್ಷೆಯಾಗಿಬಹುದು.

ಇಲ್ಲೊಂದು ಬೇಸರದ ಸಂಗತಿಯೆಂದರೆ ಕೆಲವು ಧರ್ಮನಿರಪೇಕ್ಷ, ಪ್ರಜಾಪ್ರಭುತ್ವವಾದೀ ಪಕ್ಷಗಳೂ ಪ್ರತ್ಯೇಕ ತೆಲಂಗಾಣ, ಪ್ರತ್ಯೇಕ ವಿದರ್ಭಾದಂತಹ ಘೋಷಣೆಗಳಿಗೆ ತಮ್ಮ ಬೆಂಬಲವನ್ನು ನೀಡಲು ಕಾತುರರಾಗಿದ್ದಾರೆ. ಅವರಿಗೆ ಕೇಸರಿಪಡೆಯ ಆಟಗಳ ಅರಿವಿದ್ದಂತಿಲ್ಲ. ಉದಾಹರಣೆಗೆ, ಆಂಧ್ರಪ್ರದೇಶದಲ್ಲಿ ಸಿಪಿಐ ಪ್ರತ್ಯೇಕ ತೆಲಂಗಾಣದ ಘೋಷಣೆಯೆತ್ತಿರುವ ತೆಲಂಗಾಣಾ ರಾಷ್ಟ್ರ ಸಮಿತಿ (TRS)ಯೊಂದಿಗೆ ಮೈತ್ರಿ ಮಾಡಿಕೊಂಡು ಮುಂಬರುವ ವಿಧಾನಸಭಾ ಚುನಾವಣೆಗಳಲ್ಲಿ ಸ್ಪರ್ಧಿಸುವ ಬಗ್ಗೆ ಮಾತನಾಡುತಿರುವುದು ದುರದೃಷ್ಟಕರ. ಅಷ್ಟೇ ಅಲ್ಲ, ಕಾಂಗ್ರೆಸ್ ಕೂಡಾ ಆಂಧ್ರಪ್ರದೇಶದಲ್ಲಿ TRS ನೊಂದಿಗೆ ಮೈತ್ರಿ ಬಯಸುತ್ತಿದೆ. ಈ ಹಿಂದೆ ಮಹಾರಾಷ್ಟ್ರದ ವಿಭಜನೆಗೆ ಇದುವರೆಗೆ ಕಾಂಗ್ರೆಸ್ ವಿರುದ್ಧವಾಗಿದೆ. ಆದರೆ ಇತ್ತೀಚೆಗೆ ಈ ಪ್ರಶ್ನೆಯಲ್ಲಿ ಅದು ಚಂಚಲತೆಯ ಲಕ್ಷಣಗಳನ್ನು ತೋರುತ್ತಿದೆ. ಸಿಪಿಐ ಈಗಲೂ ತಾನು ಭಾಷಾವಾರು ಆಧಾರದ ಮೇಲೆ ರಾಜ್ಯಗಳ ಪುನರ್ಸಂಘಟನೆಗೆ ಹೋರಾಡಿದ ಅವಿಭಜಿತ ಕಮ್ಯುನಿಸ್ಟ್ ಪಕ್ಷದ ಪರಂಪರೆಗೆ ಬದ್ಧವಾಗಿದ್ದೇನೆ ಎಂದು ಹೇಳಿಕೊಳ್ಳುತ್ತಿದೆ. ಆದರೆ ಟಿಡಿಪಿ-ಬಿಜೆಪಿ ಕೂಟವನ್ನು ಸೋಲಿಸಲು ರಾಜ್ಯದ ವಿರೋಧ ಪಕ್ಷಗಳಲ್ಲಿ ಸಾಧ್ಯವಾದಷ್ಟು ವ್ಯಾಪಕವಾದ ಐಕ್ಯತೆ ಬೇಕಾಗುತ್ತದೆ ಎಂದು ಅವರ ವಾದ. ನಾವು ಸಿಪಿಐ(ಎಂ)ನವರಿಗೆ ಆಂಧ್ರಪ್ರದೇಶದಲ್ಲಿ ಟಿಡಿಪಿ-ಬಿಜೆಪಿ ಕೂಟವನ್ನು ಸೋಲಿಸುವ ಅಗತ್ಯದ ಪೂರ್ಣ ಅರಿವಿದೆ. ಆದರೆ ಕೇವಲ ತಾತ್ಕಾಲಿಕ ಗಳಿಕೆಗಾಗಿ ನಮ್ಮ ನೀತಿಬದ್ಧ ನಿಲುವನ್ನು ಬಿಡಬೇಕು, ಭವಿಷ್ಯದ ಹಿತಾಸಕ್ತಿಗಳನ್ನು ತ್ಯಾಗ ಮಾಡಬೇಕು ಎಂದೇನೂ ಇದರರ್ಥವಲ್ಲ.

ಭಾಷಾವಾರು ರಾಜ್ಯಗಳು ದೀರ್ಘ ಹೋರಾಟಗಳ ಫಲ, ಅವು ದೇಶದ ಐಕ್ಯತೆಯ ರಕ್ಷಣೆಗೆ ಅಗತ್ಯ. ಆದ್ದರಿಂದಲೇ ಅವುಗಳ ರಕ್ಷಣೆಯನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ.

ನಮ್ಮನಿಮ್ಮ ಸಂವಾದ

ವಂಶಾವಳಿ ರಾಜಕಾರಣ ಅಪರಾಧೀಕರಣವೇ ?

ಪ್ರಭಾ .ಎನ್

ವಂಶಾವಳಿ ರಾಜಕೀಯದ ಕುರಿತು ಬಹಳ ಹಿಂದಿನಿಂದಲೂ ವ್ಯಾಪಕ ಚರ್ಚೆಗಳು ನಡೆದಿವೆ. ಈಗ ತಾರಕಕ್ಕೇರಿವೆ(ಸಂದರ್ಭವೂ ಹಾಗೆಯೇ ಇದೆ). ಅಪ್ಪ, ಅಪ್ಪನ ನಂತರ ಮಕ್ಕಳು, ಮಕ್ಕಳ ನಂತರ ಮರಿಮಕ್ಕಳು ಅಥವಾ ಕುಟುಂಬದ ಸದಸ್ಯರು ಅಧಿಕಾರ ಗ್ರಹಣ ಮಾಡುವುದು ಹೊಸದೇನೂ ಅಲ್ಲ. ಅಥವಾ ಇದು ಮುಗಿದು ಹೋದ ಅಧ್ಯಾಯವೂ ಅಲ್ಲ. ರಾಜಕೀಯವೆಂದರೆ ಕೇವಲ ಅಧಿಕಾರಗಳಿಸುವುದು ಎನ್ನುವ ಪರಿಸ್ಥಿತಿ ಎಲ್ಲಿಯವರೆಗೆ ಮುಂದು ವರೆಯಬಹುದೋ ಅಲ್ಲಿಯವರೆಗೆ ಈ ಪ್ರಶ್ನೆ ಜನಜನಿತವೆನ್ನಿ.

ಅದೇನೇ ಇದ್ದರೂ ಈ ಬೆಳವಣಿಗೆಯ ಕುರಿತು ಒಂದು ಕಡೆ ಆಕ್ಷೇಪಣೆ, ಆರೋಪಗಳು ಸಾಗುತ್ತಲೇ ಇವೆ. ಹಾಗೆಯೇ ವಂಶಾವಳಿ ರಾಜಕೀಯವು ಸದ್ದಿಲ್ಲದೆ ತನ್ನ ಪಥದಲ್ಲಿ ತಾನೂ ಸಾಗುತ್ತಿದೆ. ಸೂಕ್ತ ವಾರಸುದಾರರಿಲ್ಲದೆ ಇದ್ದಾಗ ವಂಶಾವಳಿ ರಾಜಕೀಯದ ಬಗ್ಗೆ ಖಂಡಿಸುವವರು, ಈ ಬಗ್ಗೆ ಸಮಾಜವನ್ನು ಎಚ್ಚರಿಸುವವರು ವಾರಸುದಾರರ ಆಗಮನದ ನಂತರ ಸದ್ದಿಲ್ಲದೆ ಅವರನ್ನು ತಮ್ಮ ತೆಕ್ಕೆಗೆ ಸೇರಿಸಿಕೊಂಡು ಬಿಡುತ್ತಾರೆ. ಈ ಬಗ್ಗೆ ಪ್ರಶ್ನಿಸಿದ ಪಕ್ಷದಲ್ಲಿ ಅಥವಾ ಅವರದ್ದೇ ಮಾತುಗಳನ್ನು ನೆನಪಿಸಿದ ಪಕ್ಷದಲ್ಲಿ, ಆ ಪಕ್ಷದಲ್ಲಿ ಅವರ ಮಕ್ಕಳಿಲ್ಲವಾ? ಈ ಪಕ್ಷದಲ್ಲಿ ಇವರ ಮಕ್ಕಳಿಲ್ಲವಾ? ಎನ್ನುವ ಸಮಜಾಯಿಷಿ ನೀಡಿ ನುಣುಚಿಕೊಂಡುಬಿಡುತ್ತಾರೆ. ಇದು ಸರಿ ಅಥವಾ ತಪ್ಪು ಎನ್ನುವ ಖಡಾಖಂಡಿತ ಉತ್ತರ ಅವರಿಂದ ಸಿಗುವುದೇ ಇಲ್ಲ.


ಉತ್ತರ ಹುಡುಕುವುದು ಕಷ್ಟವೇನಲ್ಲ ಬಿಡಿ. ಆದರೆ ಈ ಮಧ್ಯೆ ಬಲವಾಗಿ ಮೂಡುವ ಪ್ರಶ್ನೆಯೆಂದರೆ, ಇತರೆ ಕ್ಷೇತ್ರಗಳಲ್ಲಿ ಈ ಬೆಳವಣಿಗೆಯಾದರೆ ಹೆಮ್ಮೆ ಪಡುವ ಈ ಸಮಾಜ ರಾಜಕೀಯ ಕ್ಷೇತ್ರದಲ್ಲಾದಾಗ ಮಾತ್ರ ಮೂಗು ಮುರಿಯುವುದು ಏಕೆಂಬುದು.

ಉದಾಹರಣೆಗೆ ಕುವೆಂಪುರವರ ಹೆಮ್ಮೆಯ ಪುತ್ರ ಪೂರ್ಣಚಂದ್ರ ತೇಜಸ್ವಿ, ರಾಜ್‌ಕುಮಾರ್‌ಗೆ ಕೀರ್ತಿತಂದ ಶಿವರಾಜ್‌ಕುಮಾರ್ ರಾಜ್‌ಕಪೂರ್ ಹೆಸರುಳಿಸುವ ಕಪೂರ್ ಕುಟುಂಬ ಗುಬ್ಬಿವೀರಣ್ಣನವರನ್ನು ನೆನಪಿಸುವ ಬಿ.ಜಯಶ್ರೀ, ಗಾವಸ್ಕರ್ ಮಗ ರೋಹನ್ ಗಾವಸ್ಕರ್, ಮುಂತಾಗಿ ಹೊಗಳುತ್ತೇವೆ. ಅಂದರೆ ಕ್ರೀಡೆ, ಕಲೆ, ಸಾಹಿತ್ಯ, ವಿಜ್ಞಾನ ಮುಂತಾದ ರಂಗಗಳಲ್ಲಿ ಮನೆಯವರೆಲ್ಲಾ ಭಾಗವಹಿಸಿದರೂ ವಿರೋಧ ವ್ಯಕ್ತ ಮಾಡದ ಅಥವಾ ಪ್ರಶಂಸೆ ಮಾಡುವ ನಮ್ಮ ಸಮಾಜ ರಾಜಕೀಯ ರಂಗವನ್ನು ಮಾತ್ರ ಇದರಿಂದ ಹೊರತುಪಡಿಸುವುದೇಕೆ?


ಇಂಥದೊಂದು ಜಟಿಲವಾದ ಪ್ರಶ್ನೆಗೆ ಉತ್ತರ ಸರಳವಿಲ್ಲದಿದ್ದರೂ ಸುಲಭವಾಗಿ ಗುರುತಿಸ ಬಹುದಾದ ಸತ್ಯವೇನೆಂದರೆ "ನಮ್ಮ ಸಮಾಜದಲ್ಲಿ ರಾಜಕೀಯವು ಅತ್ಯಂತ ಲಾಭದಾಯಕ ಉದ್ದಿಮೆಯಾಗಿರುವುದು"

ಇತರೆ ರಂಗಗಳಲ್ಲಿ ಹೆಸರು ದಾಖಲಿಸಲು, ಕೀರ್ತಿಗಳಿಸಲು ಅಥವಾ ಹಣವನ್ನು ಸಂಪಾದಿಸಲು ಕುಟುಂಬದ ಎಷ್ಟೇ ಪ್ರಭಾವವಿದ್ದಾಗ್ಯೂ ವೈಯಕ್ತಿಕ ಶ್ರಮ, ಶ್ರದ್ಧೆ, ಅಭ್ಯಾಸ, ಚಿಂತನೆ, ಸಾಧನೆಗಳು ಬೇಕಾಗುತ್ತವೆ. ಆದರೆ ರಾಜಕೀಯ ರಂಗವೆಂಬುದು ಸ್ವಜನಪಕ್ಷಪಾತ, ಕುತಂತ್ರ, ಹಣಬಲ, ತೋಳ್ಬಲಗಳ ಕಣವಾಗಿ ಮಾರ್ಪಟ್ಟಿದೆ. ಇಲ್ಲಿ ಕಳೆದುಕೊಳ್ಳುವುದಕ್ಕಿಂತ ಗಳಿಸಿಕೊಳ್ಳುವುದೇ ಅಪಾರವೆಂಬುದು ಮನೆಮಾತಾಗಿದೆ. ಅಷ್ಟೇ ಅಲ್ಲ ಸತ್ಯವೆಂದು ಸಾಬೀತಾಗುತ್ತಲೆ ಇದೆ.

ನಮ್ಮದೇ ಕ್ಷೇತ್ರದ ರಾಜಕಾರಣಿಯೊಬ್ಬರ ಉದಾಹರಣೆ ನೀಡುವುದಾದರೆ, ನಾನು ಟೊಮೋಟೊ ಬದನೆಕಾಯಿ ಬೆಳೆದು ಮಾರಾಟ ಮಾಡುವವನು. ನನಗೆ ರೈತರ ಬಗ್ಗೆ ಕಾಳಜಿ ಜಾಸ್ತಿ. ಏಕೆಂದರೆ ನನಗೆ ರೈತರ ಕಷ್ಟ ಚೆನ್ನಾಗಿ ಗೊತ್ತು. ಹೀಗಾಗಿ ನನ್ನನ್ನು ಗೆಲ್ಲಿಸಿ ಅಸೆಂಬ್ಲಿಗೆ ನುಗ್ಗಿಸಿ, ನಿಮ್ಮ ಕಷ್ಟ ನೋಡ್ತೀನಿ ಎಂದು ಜನರನ್ನು ಮೋಡಿ ಮಾಡಿದ ಬದನೆಕಾಯಿ ರೈತನೀಗ ಸದ್ಯ ಮೆಡಿಕಲ್, ಇಂಜಿನಿಯರಿಂಗ್ ವೃತ್ತಿಪರ ಕಾಲೇಜುಗಳ ವಾರಸುದಾರ, ಕ್ಯಾಪಿಟೇಶನ್ ಲಾಬಿಯ ವಕ್ತಾರ. ಬಹುಶಃ ಆ ವ್ಯಕ್ತಿಯ ಸಂಪತ್ತು ಎಷ್ಟು ಕೋಟಿಯೆಂದು ಎಣಿಸುವುದು ಆತನಿಗೇ ಕಷ್ಟವಾಗಬಹುದು.ಕೆಲವೇ ಕೆಲವು ವರ್ಷಗಳಲ್ಲಿ ಇಷ್ಟೊಂದು ಸಂಪತ್ತನ್ನು ಗಳಿಸಲು ಅವರು ಪಟ್ಟ ಪರಿಶ್ರಮವೆಂದರೆ, 3 ಬಾರಿ ವಿಧಾನಸಭೆ ಪ್ರವೇಶಿಸಿದ್ದು ಎರಡು ಬಾರಿ ಲೋಕಸಭೆ ಪ್ರವೇಶಿಸಿದ್ದು ಮೇಲಾಗಿ ಮಂತ್ರಿಗಳಾದದ್ದು. ಬಹುಶಃ ಈಗವರು ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರಕ್ಕೆ ಅಗರ್ಭ ಶ್ರೀಮಂತರಿರಬಹುದು. ಈಗೊಮ್ಮೆ ಯೋಚಿಸಿ, ಅವರ ಮಕ್ಕಳು ಇದೇ ದಾರಿ ಹಿಡಿಯಲೆಂದು ಅವರು ಬಯಸುವುದು ತಪ್ಪೆ? (ಹಿಡಿದೂ ಆಗಿದೆ ಬಿಡಿ) ಇಂಥಾ ರಾಜಕಾರಣಿಗಳು ರಾಜಕೀಯ ಮಾಡುವುದು ಯಾರ ಸಲುವಾಗಿ? ಯಾವುದರ ಸಲುವಾಗಿ?



ಎ.ಕೆ.ಗೋಪಾಲನ್



ಸುಶೀಲಾ ಗೋಪಾಲನ್

ಈಗ ಇನ್ನೊಂದು ಮಗ್ಗುಲಿನಿಂದ ಆಲೋಚಿಸೋಣ. ಅದು ಅತ್ಯಂತ ಪ್ರಾಮಾಣಿಕ ರಾಜಕೀಯ ಜೀವನ. ಅಲ್ಲಿ ಎಲ್ಲವೂ ಜನತೆಗಾಗಿ, ಸಮಾಜಕ್ಕಾಗಿ ಶೋಷಿತರು, ಅಮಾಯಕರು, ಶ್ರಮಿಕರ ಪರವಾಗಿನ ರಾಜಕೀಯ ಅದು. ಅಲ್ಲಿ ಗಳಿಸುವುದು (ಸಂಪತ್ತಿನ ಲೆಕ್ಕದಲ್ಲಿ) ಏನೂ ಇಲ್ಲ. ಬದಲಿಗೆ ಇರುವುದನ್ನೂ ಸಮಾಜಕ್ಕರ್ಪಿಸುವುದು. ಇಂತಹ ನಿಷ್ಕಳಂಕ ರಾಜಕೀಯ ಜೀವನ ನಡೆಸುವವರ ಕುಟುಂಬದ ಸದಸ್ಯರು ರಾಜಕೀಯ ಮಾಡಿದರೆ, ಹಿರಿಯರ ಕೆಲಸವನ್ನು ವಂಶಾವಳಿ ಮುಂದುವರೆಸಿದರೆ "ವಂಶಾವಳಿ ರಾಜಕೀಯ ಚರ್ಚಾ ವಿಷಯವಾಗುವುದೆ?

ಖಂಡಿತ ಇಲ್ಲ. ಇನ್ನಿತರೆ ರಂಗಗಳ ಮಟ್ಟಿನ ಪ್ರಶಂಸೆ ಇಲ್ಲೂ ದಕ್ಕುತ್ತಿತ್ತು. ಇಂತಹ ಹತ್ತಾರು ಜೀವಂತ ಉದಾಹರಣೆಗಳು ನಮ್ಮ ಮುಂದಿವೆ. ಅವರನ್ನೂ, ಅವರ ರಾಜಕೀಯ ಜೀವನವನ್ನು ಜನತೆ ಎಂದೂ ಅವಹೇಳನ ಮಾಡುವುದಿಲ್ಲ.

ಉದಾ: ಇ.ಎಂ.ಎಸ್- ಅವರ ಮಗ ಶ್ರೀಧರ್‌ನಂಬೂದರಿಪಾಡ್, ಎ.ಕೆ.ಗೋಪಾಲನ್ - ಅವರ ಪತ್ನಿ ಸುಶೀಲಾ ಗೋಪಾಲನ್, ಬಿ.ಟಿ.ರಣದಿವೆ - ಅವರ ಪತ್ನಿ ವಿಮಲಾ ರಣದಿವೆ ಹೀಗೆ ಹಲವರು.

ವಂಶಾವಳಿ ರಾಜಕೀಯದ ಬಗ್ಗೆ ಚರ್ಚೆಯಾಗುವುದು ಖಂಡಿತ ಸೂಕ್ತವಾದ ವಿಚಾರ. ಆದರೆ ಅಲ್ಲಿ ಎರಡು ಅಂಶಗಳನ್ನು ಪ್ರತ್ಯೇಕವಾಗಿ ಪರಿಗಣಿಸಬೇಕು. ಅವೆಂದರೆ ಸ್ವಾರ್ಥ ರಾಜಕಾರಣ V/s ಜನಪರ ರಾಜಕಾರಣ. ಇನ್ನೂ ಸ್ಪಷ್ಟವಾಗಿ ಗುರುತಿಸುವುದಾದರೆ ಸ್ಥಾಪಿತ ಹಿತಾಸಕ್ತಿಗಳ ಪರವಾಗಿನ ರಾಜಕಾರಣದ ಸಂದರ್ಭದಲ್ಲಿ ವಂಶಾವಳಿ ರಾಜಕೀಯ ಖಂಡಿತ ಪ್ರಶ್ನಾರ್ಹವೆ. ಆದರೆ ಜನಮುಖಿ ಹಾಗೂ ನಿಸ್ವಾರ್ಥ ರಾಜಕಾರಣದ ಸಂದರ್ಭದಲ್ಲಿ ಅದು ಪ್ರಶ್ನಾತೀತವೆ. ಏಕೆಂದರೆ ಆಗ ಅದು ಅವರವರ ಆಸಕ್ತಿಯ ವಿಷಯ. ಸಮಾಜದ ಬಗೆಗಿನ ಕಾಳಜಿಯ ವಿಷಯ.

ಹೀಗಾಗಿ ವಂಶಾವಳಿ ರಾಜಕೀಯವೆಂಬುದು ಸಾರಾಸಗಟಾಗಿ ತಪ್ಪೆನ್ನುವ ವಿಚಾರವಲ್ಲ. ವಂಶಾವಳಿ ರಾಜಕೀಯದಿಂದ ಸ್ವಂತಕ್ಕೆಷ್ಟು? ಸಮಾಜಕ್ಕೆಷ್ಟು? ಎನ್ನುವುದಷ್ಟೆ ಮುಖ್ಯ ಪ್ರಶ್ನೆ.

ವಿಮೋಚನಾ ಸಮರದಲ್ಲಿ ಕುಟುಂಬ ಗಳಾದಿಯಾಗಿ ಬಲಿದಾನಗೈದ ಉದಾಹರಣೆಗಳನ್ನು ನಾವು ನಿಂದಿಸುತ್ತೇವೆಯೆ? ಪ್ರಶ್ನಿಸುತ್ತೇವೆಯೆ? ಈಗಲೂ ಸಮಾಜದ ಪರಿವರ್ತನೆಗಾಗಿ ಮನೆ- ಮಂದಿಯೆಲ್ಲ ದುಡಿಯುತ್ತಿರುವ ನೂರಾರು ಕುಟುಂಬಗಳನ್ನು ದೂರುತ್ತೇವೆಯೇ?

ಇಲ್ಲವಲ್ಲ. ಏಕೆಂದರೆ ಅವು ಸಮಾಜಮುಖಿ ಉದಾಹರಣೆಗಳು. ಅವುಗಳದ್ದು ಸ್ವಾರ್ಥದ ಸಲುವಾಗಿನ ಅಧಿಕಾರಗ್ರಹಣವಲ್ಲ. ನಮ್ಮ ಸಮಾಜಕ್ಕೆ ಬೇಕಿರುವುದು ಇಂತಹ ವಂಶಾವಳಿಗಳು. ಇವನ್ನು ಯಾರೂ ಅಗೌರವದಿಂದ ನೋಡುವುದು ಸಾಧ್ಯವಿಲ್ಲ. ಪ್ರಶ್ನಿಸಲೂ ಬರುವುದಿಲ್ಲ.

ಬಹುಮುಖ್ಯವಾದ ಮತ್ತೊಂದು ಅಂಶ ವೆಂದರೆ, ಪೂಜಾರಿಯ ಮಗ ಪೂಜಾರಿಯೆ, ಚಮ್ಮಾರನ ಮಗ ಚಮ್ಮಾರನೆ, ತೋಟಿಯ ಮಗ ತೋಟಿ'ಯೆ , ವೈದ್ಯರ ಮಗ ವೈದ್ಯನೆ, ವಿದ್ಯಾವಂತರ ಮಕ್ಕಳಿಗೇ ವಿದ್ಯಾಭ್ಯಾಸ, ಅವರವರ ವಂಶಾವಳಿ ಕಸುಬುಗಳು, ಕರ್ತವ್ಯಗಳು ಅವರವರವೇ ಎನ್ನುವ ಪರಿಸ್ಥಿತಿ ಈ ಸಮಾಜದಲ್ಲಿ ಎಲ್ಲಿಯವರೆಗೆ ಮುಂದುವರೆಯುವುದೋ ಅಲ್ಲಿಯವರೆಗೆ ವಂಶಾವಳಿ ರಾಜಕೀಯವು ಮುಂದುವರೆಯಲೇ ಬೇಕಾಗುತ್ತದೆ. ಒಂದನ್ನು ಪ್ರಶ್ನಿಸಿ ಅಥವಾ ಖಂಡಿಸಿ ಮತ್ತೊಂದನ್ನು ಮರೆಮಾಚಿದರೆ ಸಮತೋಲನ ಹೇಗಾದೀತು. ವಂಶಾವಳಿ ರಾಜಕೀಯವನ್ನು ಧಿಕ್ಕರಿಸುವವರು ವಂಶಾವಳಿ ಪದ್ಧತಿ, ಕಸುಬುಗಳನ್ನು ಅನಿವಾರ್ಯವಾಗಿ ಧಿಕ್ಕರಿಸಲೇಬೇಕಾಗುತ್ತದೆ.

ಅಂತಿಮವಾಗಿ ನಾವು ಒಪ್ಪಲೇಬೇಕಾದ ಸತ್ಯವೇನೆಂದರೆ, "ಶ್ರಮ ವಿಭಜನೆ"ಯ ಪ್ರಶ್ನೆ ಈ ಸಮಾಜದ ಮುಂದೆ ಎಂದು ನಿರ್ಣಾಯಕವಾಗಿ ಪರಿಣಮಿಸುತ್ತದೆಯೋ ಅಂದಷ್ಟೇ ವಂಶಾವಳಿ ರಾಜಕೀಯದ ಪ್ರಶ್ನೆಗೂ ಸಮರ್ಪಕ ಉತ್ತರ.

ಕಾಂಗ್ರೆಸ್ - ಬಿಜೆಪಿ ಜನಹಿತದ ವೈರಿಗಳು

ಪುಟ 9 ರಿಂದ

ಚಳುವಳಿ)ದಲ್ಲಿ ಮಹತ್ವದ ಪಾತ್ರ ವಹಿಸಿದ್ದ ಕಮ್ಯುನಿಸ್ಟರ ನೇತೃತ್ವದ ಕಾರ್ಮಿಕ ಮತ್ತು ಕಾರ್ಷಿಕ ವರ್ಗಗಳು ಮತಾಂಧತೆಗೂ ತಕ್ಕ ಉತ್ತರ ಕೊಡಲಿವೆ.

ಹಿಂದುತ್ವದ ಕಾರ್ಯಕರ್ತರೇ ಎಚ್ಚರ

ರಾಮಜನ್ಮಭೂಮಿಗಾಗಿ, ಭಾರತವನ್ನು ಕೇವಲ ಹಿಂದೂ ರಾಷ್ಟವನ್ನಾಗಿ ಮಾರ್ಪಡಿಸುವುದಕ್ಕಾಗಿ ಯಾವ ತ್ಯಾಗಕ್ಕೂ ಸಿದ್ಧ ಎಂದು ಎದೆ ತಟ್ಟಿ ಹೇಳುವ ಹಿಂದುತ್ವದ ಕಾರ್ಯಕರ್ತರೆ, ನೀವು ವೈದಿಕರಾಗಿರ ದಿದ್ದಲ್ಲಿ ಹಿಂದುತ್ವಕ್ಕೆ ನೀವು ಬಲಿಪಶುಗಳೆಂದೇ ತಿಳಿಯಿರಿ. ಹಿಂದೂ ಧರ್ಮದ ಸ್ವಯಂ ಘೋಷಿತ ನಾಯಕರು ಹೊಂದಿರುವ ನಿಜವಾದ ಉದ್ದೇಶ ಹಿಂದೂ ರಾಷ್ಟ ಸ್ಥಾಪನೆಯಂತೂ ಖಂಡಿತಾ ಅಲ್ಲ. ಆರಂಭದಿಂದ ಇಲ್ಲಿಯವರೆಗೆ ಹಿಂದೂ ರಾಷ್ಟ ಘೋಷಣೆಯಿರುವ ಪರಿವಾರದ ಕಾರ್ಯಸೂಚಿ ಹಿಂದೂ ಧರ್ಮದ ಎಲ್ಲಾ ಜನಾಂಗದ ಸಹಕಾರದಿಂದ ಯಶಸ್ವಿಯಾ ಯಿತೆಂದರೆ ಅದು ಬೇರೆಯೇ ಆದ ವೈದಿಕ ರಾಷ್ಟದ ಸ್ವರೂಪ ಪಡೆದುಕೊಳ್ಳಲಿದೆ. ಆಗ ಉರುಳಿ ಬೀಳುವುದಕ್ಕೆ ಈ ದೇಶದಲ್ಲಿ ಮಸೀದಿ ಗಳಿರುವುದಿಲ್ಲ, ಚರ್ಚು, ಗುರುದ್ವಾರಗಳಿರುವುದಿಲ್ಲ, ಬಸದಿ, ಜಿನಾಲಯ, ಗುಹಾಲಯಗಳಿರುವುದಿಲ್ಲ. ಇಲ್ಲಿ ಹಿಂದೂ ಗಳದ್ದೆಂದು ಹೇಳಲ್ಪಟ್ಟ ರಾಮನಂತಹ ಹೈಕ್ಲಾಸ್ ಅಥವಾ ವೈದಿಕ ದೇವರುಗಳ ಜೊತೆಗೆ ಶೂದ್ರರೂ, ಪೆಸರೂ ಆರಾಧಿಸುವ ವೈದಿಕೇತರ ದೇವರುಗಳ ಗುಡಿಗಳಿರುತ್ತವೆ. ವೈದಿಕ ರಾಷ್ಟದ ಕಾರ್ಯಸೂಚಿ ಅವುಗಳನ್ನೆಲ್ಲಾ ಕುಟ್ಟಿ ಪುಡಿಗೈಯ್ಯುತ್ತದೆ. ಅಂತಹ ಜಾಗಗಳನ್ನು ಉಡುಪಿಯ ಪೇಜಾವರನೋ, ಲಕ್ಷ್ಮೀವರ ತೀರ್ಥನೋ, ವಿಭುದೇಶನೋ ಅಥವಾ ತೊಗಾಡಿಯಾ, ಸುದರ್ಶನ್‌ಗಳೋ ಹುಟ್ಟಿದ, ತಿರುಗಾಡಿದ, ಭಾಷಣ ಮಾಡಿದ, ಉಂಡ, ತೊಳೆದ ಜಾಗಗಳೆಂದು ಸುಳ್ಳೇ ಪ್ರತಿಪಾದಿಸ ಲಾಗುತ್ತದೆ. ಇವತ್ತು ತ್ರಿಶೂಲಗಳಿಗೆ ಸಿಕ್ಕಿಸಿ ಮೆರವಣಿಗೆ ಮಾಡಿಸಲಾಗುತ್ತಿರುವ ಮುಸಲ್ಮಾನರ ಹೊಟ್ಟೆಯ ಭ್ರೂಣಗಳ ಜಾಗದಲ್ಲಿ ಆ ದಿನ ಹಿಂದೂ ಧರ್ಮದವರೇ ಆದ ಶೂದ್ರರ ಹೊಟ್ಟೆಯ ಭ್ರೂಣಗಳಿರುತ್ತವೆ.

ಕೊನೆಯ ಮಾತು

ಮತ ಶಾಂತಿಯನ್ನು ಸೃಷ್ಟಿಸುವುದರ ಬದಲು ಪದೇ ಪದೇ ಯುದ್ಧಗಳನ್ನೂ, ಅಂತಃಕಲಹಗಳನ್ನು ತಂದು ಹಾಕಿದುದಕ್ಕೆ ಮಾನವನ ಇತಿಹಾಸ ಸಾಕ್ಷಿ ಒದಗಿಸುತ್ತದೆ. ಒಂದು ಮತದ ಮುಖಂಡರು ಇನ್ನೊಂದು ಮತವನ್ನು, ಮತೀಯರನ್ನು ದ್ವೇಷಿಸುತ್ತಾ, ಪರಸ್ಪರ ಹಳಿಯುತ್ತಾ ಬಂದಿರುವುದು ಇತಿಹಾಸದ ಉದ್ದಕ್ಕೂ ಕಾಣಸಿಗುತ್ತದೆ. ಇದರಿಂದ ಜಗತ್ತಿನ ಶಾಂತಿಗೆ ಭಂಗ ಬಂದಿರುವುದು ಸತ್ಯ. ಬರ್ಟ್ರೆಂಡ್ ರಸೆಲ್ ಹೇಳುತ್ತಾನೆ, "ನಾನು ಧರ್ಮ ವನ್ನು ಒಂದು ರೋಗವೆಂದು ಪರಿಗಣಿಸುವೆನು. ಅದು ಮಾನವ ಜನಾಂಗದ ಹೇಳಿಕೊಳ್ಳಲಾಗದ ದುಃಖ ದುಮ್ಮಾನಗಳಿಗೆ ಕಾರಣವಾಗಿದೆ."

ದೇಶದಲ್ಲಿ, ಕೇಂದ್ರದ ಕೋಮುವಾದಿ ರಾಜಕೀಯದಿಂದಾಗಿ ನಶಿಸುತ್ತಿರುವ ಸೌಹಾರ್ದ ವನ್ನು ಎತ್ತಿ ಹಿಡಿಯಲೇಬೇಕಾಗಿದೆ. ಇಲ್ಲದಿದ್ದರೆ ಈ ದೇಶಕ್ಕೆ ಭವಿಷ್ಯವಿಲ್ಲ. ಕರ್ನಾಟಕ ವನ್ನು ಗುಜರಾತ್ ಆಗಿಸುವ ಬಿ.ಜೆ.ಪಿ.ಯ ಕಾರ್ಯಸೂಚಿಗೆ ಪ್ರತಿರೋಧ ಒಡ್ಡಲೇಬೇಕಾಗಿದೆ. ಬಿ.ಜೆ.ಪಿ. ಮತ್ತು ಕಾಂಗ್ರೆಸ್‌ಗಳ ಹುನ್ನಾರವನ್ನು ಬಗ್ಗುಬಡಿಯಲು ದೇಶದ ಎಲ್ಲಾ ಜಾತ್ಯಾತೀತ ಶಕ್ತಿಗಳು ಕಟಿಬದ್ಧವಾಗಬೇಕಿದೆ. ಹಾಗಿದ್ದಾಗ ಮಾತ್ರ ಫ್ಯಾಸಿಸ್ಟ್ ಪ್ರವೃತ್ತಿಯನ್ನು ದಮನಿಸಲು ಸಾಧ್ಯ.

ಕರಾವಳಿ ಉತ್ಸವವೋ... ಕಾಂಗ್ರೆಸ್ ಉತ್ಸವವೋ?...

ಹತ್ತು ಲಕ್ಷ ಖರ್ಚು ಮಾಡಿ ನಡೆಸಿದ ಕರಾವಳಿ ಉತ್ಸವ ಸಾಧಿಸಿದ್ದಾದರೂ ಏನು? ಸ್ಥಳೀಯ ಕಲಾವಿದರನ್ನು ನಿರ್ಲಕ್ಷಿಸಿ ದೂರದಿಂದ ಕರೆತಂದವರಿಗೆ ಹಣ ಸುರಿದ ಈ ಉತ್ಸವ ಅದರ ಉದ್ದೇಶದ ಸಾಧನೆಯಲ್ಲಿ ಸೋತಿದೆ. ಇದು ಸಾಂಸತಿಕ ಉತ್ಸವವೋ ಅಥವಾ ಚುನಾವಣಾ ರಾಜಕೀಯ ತಯಾರಿಯೋ?



ಜನವರಿ 9 ರಿಂದ ಪ್ರಾರಂಭವಾಗಿ 20 ನೇ ತಾರೀಖಿನವರೆಗೂ ಉತ್ತರಕನ್ನಡ ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ನಡೆದ ಕರಾವಳಿ ಉತ್ಸವವನ್ನು ಗಂಭೀರವಾಗಿ ಅವಲೋಕಿಸಿದ ಪ್ರತಿಯೊಬ್ಬರ ಪ್ರಶ್ನೆ "ಇದು ಕರಾವಳಿ ಉತ್ಸವವೋ? ಅಥವಾ ಕಾಂಗ್ರೆಸ್ ಉತ್ಸವವೋ?"

ಏನಿಲ್ಲವೆಂದರೂ 1.5 ರಿಂದ 2 ಕೋಟಿ ರೂಪಾಯಿಗಳ ವಹಿವಾಟು ನಡೆದಿರಬಹುದಾದ ಕರಾವಳಿ ಉತ್ಸವ ಯಾಕಾಗಿ ಎಂದು ಕೇಳಿದರೆ ಆಡಳಿತ ಪಕ್ಷದ ಎಂ.ಎಲ್.ಎ, ಡಿ.ಸಿ.ಯವರನ್ನು ಒಳಗೊಂಡು ಸಚಿವ ಆರ್.ವಿ.ದೇಶಪಾಂಡೆಯವರು ಹೇಳುವ ಮಾತೆಂದರೆ "ಪ್ರವಾಸೋದ್ಯಮದ ಅಭಿವೃದ್ಧಿ, ಸ್ಥಳೀಯ ಕಲೆಗಳ ಪ್ರೋತ್ಸಾಹ, ಪೋಷಣೆ"

ಇದರಲ್ಲಿ ಯಾವುದು ಸತ್ಯ? ಇಂತಹ ಉತ್ಸವಗಳೇ ಬೇಡವೆಂದಲ್ಲ (ಹೇಗಿರಬೇಕೆನ್ನುವ ಬಗ್ಗೆ ಬೇರೆ ಚರ್ಚೆ ಮಾಡಬಹುದು) ಆದರೆ ಸಚಿವರು ಹೇಳಿರುವ ಉತ್ಸವ ಉದ್ದೇಶ ಈಡೇರಿದೆಯೇ? ಸಚಿವರು ಹೇಳಿದ ಉದ್ದೇಶವಂತೂ ಖಂಡಿತವಾಗಿಯೂ ಈಡೇರಿಲ್ಲ. ಆದರೆ ಉತ್ಸಾವ ನಡೆಸುವಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಇದ್ದ ಉದ್ದೇಶ ಮಾತ್ರ ಈಡೇರಿದಂತಿದೆ ಎಂದಷ್ಟೇ ಹೇಳಬಹುದು.

ಇಷ್ಟು ವರ್ಷ ಕರಾವಳಿ ಉತ್ಸವ ಕಾರವಾರದಲ್ಲಿ ಮಾತ್ರ ನಡೆಯುತ್ತಿದ್ದರೆ, ಈ ವರ್ಷ ಕರಾವಳಿಯಲ್ಲಿದ್ದ ಅರಬ್ಬೀ ಸಮುದ್ರದ ಅಲೆ ದಾಂಡೇಲಿ, ಹಳಿಯಾಳ, ಸಿರ್ಸಿಗೂ ಮುಟ್ಟಿದ್ದು ಮುಂದಿನ ಚುನಾವಣೆಗೆ ಎನ್ನುವುದು ಸ್ಪಷ್ಟ. ಮುಂದಿನ ವರ್ಷ ಜಿಲ್ಲೆಯ ಎಲ್ಲಾ ತಾಲೂಕುಗಳಿಗೂ ವಿಸ್ತರಿಸುವ ಭರವಸೆ ಕೊಟ್ಟಿದ್ದಾರೆ. ಜಿಲ್ಲೆಯಾದ್ಯಂತ ನಡೆದ ಯುವಜನ ಮೇಳಗಳಲ್ಲಿ ಮೆರೆದಾಡಿದ ಕಾಂಗ್ರೆಸ್ ಜನ ಕರಾವಳಿ ಉತ್ಸವವನ್ನು ಯಶಸ್ವಿಯಾಗಿ ಆವರಿಸಿಕೊಂಡರು.

ಕಾರವಾರದಲ್ಲಿ 'ಕರಾವಳಿ ಉತ್ಸವ' ಮತ್ತು ಸಿರ್ಸಿಯ ಬನವಾಸಿಯಲ್ಲಿ ಕದಂಬೋತ್ಸವ ನಡೆಯುತ್ತಿತ್ತು. ಈ ಬಾರಿ ಪ್ರಥಮ ಬಾರಿಗೆ ಕುಮಟಾ, ಸಿರ್ಸಿ, ದಾಂಡೇಲಿ ಮತ್ತು ಹಳಿಯಾಳಗಳಲ್ಲಿ ಕರಾವಳಿ ಉತ್ಸವ ನಡೆಸಿ ಪ್ರತಿಯೊಂದು ತಾಲೂಕಿನಲ್ಲಿಯೂ ಕನಿಷ್ಟ 25-30 ಲಕ್ಷ ಹಣ ವಿನಿಯೋಗಿಸಲಾಯಿತು. (ಒಟ್ಟಾಗಿದ್ದು ಎಷ್ಟು ಗೊತ್ತಿಲ್ಲ) ಲೆಕ್ಕ ಕೊಡುವ ಜಾಯಮಾನವಿಲ್ಲ. ಲೆಕ್ಕ ಕೊಡುವುದಿದ್ದರೆ ಉತ್ಸವ ಯಾಕೆ ಮಾಡಬೇಕು ಅಲ್ಲವೆ? ಜಿಲ್ಲೆಯ ಬರಸ್ಥಿತಿ, ಕೃಷಿ ಬಿಕ್ಕಟ್ಟು, ಮೀನುಗಾರಿಕೆ ಸಮಸ್ಯೆ, ಕೈಗಾರಿಕೆಗಳು ಮುಚ್ಚುತ್ತಿರುವಾಗ ಇಂತಹ ಅದ್ದೂರಿಯ ಉತ್ಸವ ಬೇಕಾಗಿತ್ತೆ? ಒಂದುವರೆ ಕೋಟಿ ರೂ.ಗಳಲ್ಲಿ ಎಷ್ಟು ಮುಚ್ಚಿದ ಕೈಗಾರಿಕೆ ತೆರೆಯಬಹುದಾಗಿತ್ತು? ಎಷ್ಟು ನಿರಾಶ್ರಿತರಿಗೆ ಆಶ್ರಯ ಕೊಡಬಹುದಾಗಿತ್ತು ಎಂದು ಯೋಚಿಸುವ ಗೋಜಿಗೂ ಹೋಗಿಲ್ಲ.

ಉದ್ಘಾಟನೆ : ಒಬ್ಬನೇ ಒಬ್ಬ ಕನ್ನಡದ ಲೇಖಕನಾಗಲಿ, ಕಲಾವಿದನಾಗಲೀ ವೇದಿಕೆಯಲ್ಲಿ ಇಲ್ಲ. ವೇದಿಕೆಯ ಇಕ್ಕೆಲಗಳಲ್ಲಿ ಏರ್‌ಟೆಲ್ ಮತ್ತು ಪೆಪ್ಸಿಯ ದೊಡ್ಡ ಕಟೌಟ್‌ಗಳ ಮಧ್ಯೆ ವೇದಿಕೆಯಲ್ಲಿ ಪರಸ್ಪರರನ್ನು ಹೊಗಳಿಕೊಂಡಿದ್ದೇ ಹೊಗಳಿಕೊಂಡಿದ್ದು. ಮುಖ್ಯ ಅತಿಥಿಗಳಲ್ಲಿ ಒಬ್ಬನಾಗಿದ್ದ ಉದ್ಯಮಿ ಹಿಂದಿ ಚಿತ್ರನಟ ಸಂಜಯಖಾನ್ ಮಾತನಾಡಿ "ಕಾರವಾರದ ನಿಸರ್ಗ ರಮಣೀಯತೆ ನೋಡಿದಾಕ್ಷಣ ನನಗೆ ಪ್ರೀತಿ ಹುಟ್ಟಿದೆ. ಇದನ್ನು ಸ್ವಲ್ಪೇ ದಿನಗಳಲ್ಲಿ ಸ್ವರ್ಗಸದೃಶವನ್ನಾಗಿಸುವುದು ನನ್ನ ಸಂಕಲ್ಪ. ದೇಶಪಾಂಡೆ ಸಾಹೇಬರು ಎಷ್ಟೊತ್ತಿಗೂ ಈ ಜಿಲ್ಲೆ, ಪ್ರದೇಶದ ಅಭಿವೃದ್ಧಿ ಬಗ್ಗೆ ಮಾತಾಡ್ತಾರೆ. ಅವರೊಂದಿಗೆ ಸಮಯ ಕಳೆಯುವುದೇ ಒಂದು ಭಾಗ್ಯ' ಎಂದು ಮುಜುಗರ ಆಗುವಂತೆ ಹೊಗಳಿದರು. ಸದ್ಯ ಕಾರವಾರದ ಕಡಲ ತೀರದಲ್ಲಿ ಹೊಟೇಲ್ ತೆರೆಯಲು ಪುಕ್ಕಟೆ ಸ್ಥಳ, ಇತರ ಸೌಲಭ್ಯ ಪಡೆದುಕೊಳ್ಳುವ ಹವಣಿಕೆಯಲ್ಲಿದ್ದ ಸಂಜಯಖಾನ್ ಇಂತಹ ಪೀಠಿಕೆ ಹಾಕಿದರು. ಉಳಿದವರ ಭಾಷಣ ಇದಕ್ಕಿಂತ ಭೀಕರ ಆಗಿತ್ತು. ವಿಜಯಮಲ್ಯನ ಹೆಸರಿದ್ದರೂ ಕಾರವಾರದಲ್ಲೇ ಪಕ್ಷದ ಸಭೆ ನಡೆಸುತ್ತಿದ್ದರು. ಕೊನೆಗೆ ಆಗಮಿಸಿದರು. ಬಿಜೆಪಿ ಎಂ.ಎಲ್.ಎಗಳು ವೇದಿಕೆಗೆ ಒಂದು ವ್ಯವಸ್ಥೆಯನ್ನು ವಿರೋಧಿಸುವ ಧೈರ್ಯ ತೋರಬಹುದಾಗಿತ್ತು. ಹಾಗೆ ಮಾಡಲಿಲ್ಲ.

ಸಾಂಸತಿಕ ಕಾರ್ಯಕ್ರಮ : 4 ದಿನಗಳ ಕಾಲ ನಡೆದ ಸಾಂಸತಿಕ ಕಾರ್ಯಕ್ರಮಗಳಲ್ಲಿ ಬಹುತೇಕ ಕಾರ್ಯಕ್ರಮಗಳು ದೇಶಪಾಂಡೆಯವರ ಫೋನ್ ಅಥವಾ ಅವರ ಬಾಲಂಗೋಚಿಗಳ ಫೋನ್, ವಕೀಲಿಯನ್ನೇ ಅರ್ಹತೆಯನ್ನಾಗಿಸಿಕೊಂಡಿತ್ತು.

ಸ್ಥಳೀಯರಿಗೆ ಪ್ರೋತ್ಸಾಹ ಎಂದು ಹೇಳುತ್ತಲೇ ಸ್ಥಳೀಯ ಕಲಾವಿದರಿಗೆ ಮೀಸಲಿಟ್ಟ ಸಮಯವೆಲ್ಲವೂ ಜನರಿಲ್ಲದ ವೇಳೆಯೇ (5 ರಿಂದ 8 ಗಂಟೆ) ಆಗಿತ್ತು. ಶಾಲಾ ಕಾಲೇಜಿನಲ್ಲಿ ಹುಡುಗರು ಕ್ಯಾಸೆಟ್ ಇತ್ಯಾದಿಗಳನ್ನು ಹಾಕಿಕೊಂಡು ಕಿವಿ ತೂತುಬೀಳುವ ಶಬ್ದದೊಂದಿಗೆ ಕುಣಿಯುವ ಮೂಲಕ ನಮ್ಮ ಸಂಸತಿಯನ್ನು ಹಾಳು ಮಾಡುತ್ತಿದ್ದಾರೆಂದು ಭಾಷಣ ಹೊಡೆಯುವವರೇ ಕರಾವಳಿ ಉತ್ಸವಕ್ಕೆ ಲಕ್ಷಾಂತರ ರೂ.ಹಣ ಸುರಿದು ಮುಂಬೈಯಿಂದ ಅಂತಹ ರಸಮಂಜರಿಯನ್ನೇ ಕರೆಸಿದ್ದರು.

ಹಿಂದೆ ಪಾಟ್ನಾಯಕ್‌ರಂತವರು ಜಿಲ್ಲಾಧಿಕಾರಿಗಳಾಗಿದ್ದಾಗ ಸಾಂಸತಿಕ ಕಾರ್ಯಕ್ರಮದ ಸಂಯೋಜನೆಗಾಗಿ ಜಿಲ್ಲೆಯ ಕಲಾವಿದರು, ಪತ್ರಕರ್ತರು, ಸಾಹಿತಿಗಳ ಸಮಿತಿ ರಚಿಸಿ, 3-4 ಸಭೆ ನಡೆಸಿ ನಿಗದಿ ಮಾಡುತ್ತಿದ್ದರು. ಕವಿಗೋಷ್ಠಿ, ಸಾಹಿತ್ಯ ಗೋಷ್ಠಿ ಇತ್ಯಾದಿಗಳು ಮಾಡುತ್ತಿದ್ದರು. ಆದರೆ ಈ ಬಾರಿ ಅವು ಜಿಲ್ಲಾಧಿಕಾರಿಗಳ ಕಛೇರಿಯನ್ನು ಬಿಟ್ಟು ಹೊರಬರಲೇ ಇಲ್ಲ.

ಸ್ಥಳೀಯ ಕಲಾವಿದರಿಗೆ ಪ್ರೋತ್ಸಾಹ, ಕಲೆಯ ಪೋಷಣೆ ಎನ್ನುತ್ತಲೇ ಹೊರಗಿನ ಕಲಾವಿದರಿಗೆ 7-8 ಲಕ್ಷ ರೂ.ಕೊಟ್ಟು ಸ್ಥಳೀಯ ಕಲಾವಿದರಿಗೆ 1-2-3 ಸಾವಿರ ಕೊಟ್ಟು ಕೈತೊಳೆದುಕೊಂಡರು. ಅದು ಅವರ ಬಸ್‌ವೆಚ್ಚ, ಇನ್ನಿತರ ತಯಾರಿಗೆ ಸಾಲಲಿಲ್ಲ. ಕೆಲವರು ಈ ಕಾರ್ಯಕ್ರಮಕ್ಕೆ ಸಾಲವನ್ನೇ ಮಾಡಿಕೊಂಡರು.

ಮೊದಲ ದಿನ ಹಿಂದುಳಿದ ತಾಲೂಕಾದ ಜೊಯ್ಡಾದವರಾದ ಗಣೇಶ ದೇಸಾಯಿಯವರ ಕುವೆಂಪು ಹಾಡುಗಳನ್ನೊಳಗೊಂಡ ಸುಗಮ ಸಂಗೀತ ಕಾರ್ಯಕ್ರಮ ಇತ್ತು. ದೇಶ- ವಿದೇಶಗಳಲ್ಲಿ ಯಶಸ್ವಿ ಅನೇಕ ಕಾರ್ಯಕ್ರಮ ಕೊಟ್ಟ ಪ್ರತಿಭೆ ಗಣೇಶ ದೇಸಾಯಿಯವರಿಗೆ ಕಾರ್ಯಕ್ರಮದ ಪಟ್ಟಿಯ ಪ್ರಕಾರ 20 ನಿಮಿಷ ಕೊಡಲಾಗಿತ್ತು. ಆದರೆ ಕೇವಲ 3 ನಿಮಿಷ ಆಗುತ್ತಿದ್ದಂತೆ ಪಾಪ್ ಗಾಯಕಿ ಉಷಾ ಉತ್ತಪ್ಪರವರ ಹಾಡುಗಳಿಗಾಗಿ ದೇಸಾಯಿಯವರ ಹಾಡನ್ನು ನಿಲ್ಲಿಸುವಂತೆ ಸೂಚನೆ ಕೊಟ್ಟು ಕಲಾವಿದನಿಗೂ ಅವಮಾನ ಮಾಡಿದರು. ಕೇವಲ 3 ನಿಮಿಷದಲ್ಲಿ ಜನರನ್ನು ತಮ್ಮ ಕಂಠದಿಂದ ಮೋಡಿ ಮಾಡಿದ ಇವರು ತಮ್ಮ ತಂಡವನ್ನು ಕರೆದುಕೊಂಡು ಬಂದು ಹಿಂತಿರುಗುವಂತಾಯಿತು. ಜೋಯ್ಡಾದ ಅಭಿವೃದ್ಧಿ, ಪ್ರೋತ್ಸಾಹದ ಬಗ್ಗೆ ಮಾರುದ್ದ ಭಾಷಣ ಹೊಡೆಯುವವರು ವ್ಯವಸ್ಥಾಪಕರು. ಇದು ಸ್ಥಳೀಯ ಕಲಾವಿದರಿಗೆ ಪ್ರೋತ್ಸಾಹವೆ? ಅಥವಾ ಸನ್ಮಾನವೇ ಎಂದು ಚರ್ಚಿಸಬೇಕಾಗಿದೆ.

ನಾಲ್ಕು ದಿನಗಳ ಕಾರ್ಯಕ್ರಮದ ವಿವಿಧ ಸ್ವರೂಪ ನೋಡಿದ ಜನ ಹೇಳುತ್ತಿದ್ದಾರೆ. "ಖಂಡಿತಾ ಇದು ದೇಶಪಾಂಡೆಯವರ ನೇತೃತ್ವದ ಕಾಂಗ್ರೆಸ್ ಪಕ್ಷದ ಚುನಾವಣೆ ತಯಾರಿಯೇ ಆಗಿರಬೇಕು" ಎಂದು

- ವಿಠ್ಠಲ ಭಂಡಾರಿ

ಕರಾವಳಿ ಉತ್ಸವ ಯಾರ ಹೊಟ್ಟೆ ಹೊ(ರೆ)ಡೆಯಲು ನಡೆಯಿತು?

ದಾಂಡೇಲಿ, 13- ಕರಾವಳಿ ಉತ್ಸವ ಅಂಗವಾಗಿ ನಗರಾಡಳಿತದ ಉಸ್ತುವಾರಿಯಲ್ಲಿ ದಾಂಡೇಲಿಯ ಡಿಲಕ್ಸ್ ರಂಗ ಸಜ್ಜಿಕೆಯಲ್ಲಿ ನಡೆದ ಕವಿತಾ ಕೃಷ್ಣಮೂರ್ತಿ ಮತ್ತು ಸಂಗಡಿಗರು ಹಾಗೂ ಸ್ಥಳೀಯ ಕಲಾವಿದರಿಂದ ನಡೆದ ಸಾಂಸತಿಕ ಸಂಜೆ ಕಾರ್ಯಕ್ರಮ ಕೆಲವೊಂದು ಲೋಪದೋಷಗಳನ್ನು ಹೊರತುಪಡಿಸಿದರೆ ಎಲ್ಲವೂ ಸುಗಮವಾಗಿತ್ತು.

ದಾಂಡೇಲಿಯಲ್ಲಿ ಉದ್ದಿಮೆಗಳು ಮುಚ್ಚಿ ಜನರು ಉದ್ಯೋಗ ಕಳೆದುಕೊಂಡರು. ಸಂಕಷ್ಟದ ಬದುಕನ್ನು ನಡೆಸುತ್ತಿರುವ ಸಂದರ್ಭದಲ್ಲಿ ಅರೆಹೊಟ್ಟೆಯ ಕೂಳಿನ ಕಾಳಿಗಾಗಿ ಪರದಾಡುತ್ತಿರುವ ಸಂದರ್ಭದಲ್ಲಿ 3 ತಾಸಿನ ಮನರಂಜನೆಗಾಗಿ ಸುಮಾರು 10 ಲಕ್ಷಕ್ಕೂ ಮೀರಿದ ಹಣ ಖರ್ಚು ಮಾಡಿದ್ದು ಯಾವ ಮಹಾನ್ ಸಾಧನೆಗಾಗಿ ಎನ್ನುವುದು ಅನೇಕ ನಾಗರಿಕರ ಪ್ರಶ್ನೆ. ಈ ಕಾರ್ಯಕ್ರಮಕ್ಕೆ ತಗಲುವ ಲಕ್ಷಾಂತರ ರೂ.ಹಣ ಎಲ್ಲಿ ಭರಿಸಿದ್ದಾರೆ. ಸರ್ಕಾರದ ಹಣವೇ, ಜಿಲ್ಲಾಡಳಿತ ನೀಡಿದೆಯೋ, ಜನರಿಂದ ಎತ್ತಿದ್ದಾರೆಯೋ ಇಲ್ಲಾ ಎಲ್ಲವೂ ಸಚಿವರ ಖಾತೆಯಿಂದ ಬಂದಿದೆಯೋ ಎನ್ನುವುದು ಸ್ಪಷ್ಟವಾಗಿ ತಿಳಿದುಬರುತ್ತಿಲ್ಲ. ಎಲ್ಲ ಹಣವನ್ನು ಸಚಿವರೇ ನೀಡಿದ್ದಾರೆ ಎನ್ನುವುದನ್ನು ಜನಮೂಲ ಅಲ್ಲಗಳೆಯುತ್ತದೆ. ಹಾಗಾದರೆ ಕವಿತಾ ಕೃಷ್ಣಮೂರ್ತಿಯವರಿಗೆ ಸುರಿದ 7 ಲಕ್ಷ ರೂ.ಹಣವನ್ನು ಯಾವ ಮೂಲದಿಂದ ತರಲಾಗಿದೆ ಎಂದು ಜನರಾಡಿಕೊಳ್ಳುತ್ತಿದ್ದಾರೆ.

ಕವಿತಾ ಕೃಷ್ಣಮೂರ್ತಿಯವರ ಸಂಗೀತ ಕಾರ್ಯಕ್ರಮದಲ್ಲಿ ಎಲ್ಲಿಯೂ ಕನ್ನಡ ಕೇಳಿಬರಲೇ ಇಲ್ಲ ಎನ್ನುವುದು ಪ್ರೇಕ್ಷಕರ ಆರೋಪ.

ಮುಂಬಯಿಯಿಂದ 7 ಲಕ್ಷ ರೂ. ನೀಡಿ ಕರೆಸಿದ ಕವಿತಾ ಕೃಷ್ಣಮೂರ್ತಿ ತಂಡದವರಿಗಿಂತ ಸ್ಥಳೀಯ ಕಲಾವಿದರ ಕಾರ್ಯಕ್ರಮವೇ ಪರಿಣಾಮಕಾರಿಯಾಗಿತ್ತು. ಸ್ಥಳೀಯರಲಲ್ಲಿ ಕನ್ನಡ ನೃತ್ಯವಿತ್ತು. ಎಲ್ಲವೂ ಸಮ್ಮಿಳನವಾಗಿತ್ತು. ಜನಸಾಮಾನ್ಯರು ಕವಿತಾರವರ ಹಾಡಿನ ಒಂದು ಕಿ.ಮೀ ದೂರದಲ್ಲಿ ಒಂದು ಕಾಲಮೇಲೆ ನಿಂತು ನೋಡುವ ಪರಿಸ್ಥಿತಿ ಬಂತು. ಒಬ್ಬರ ಮೇಲೊಬ್ಬರು ಹತ್ತಿ ನಿಂತರು. ಖುರ್ಚಿಗಳು ಮುರಿದವು. ಪ್ರದರ್ಶನ ನೋಡಲು ಬಂದ ಜನಸಾಮಾನ್ಯರು ತುಂಬಾ ಹಿಂಸೆಪಟ್ಟು ಕಾರ್ಯಕ್ರಮ ನೋಡ ಹೋದರು. ಬೇಕಾದವರಿಗಷ್ಟೇ ಪಾಸ್ ನೀಡಿ ತಮಗೆ ಅನ್ಯಾಯ ಮಾಡಿದರು ಎಂಬುದು ಜನಸಾಮಾನ್ಯರ ದೂರು.

ಈ ಬರಗಾಲ ಪರಿಸ್ಥಿತಿಯಲ್ಲಿ ಜಿಲ್ಲೆಯಲ್ಲಿ ಕರಾವಳಿ ಉತ್ಸವವೇ ಬೇಡವಾಗಿತ್ತು. ದಾಂಡೇಲಿಯಲ್ಲಿ ಸುಮಾರು 10 ಲಕ್ಷಕ್ಕೂ ಮೀರಿ ಖರ್ಚು ಮಾಡಿ ಈ ಸಾಂಸತಿಕ ಕಾರ್ಯಕ್ರಮ ಮಾಡುವ ಬದಲು ಜಿಲ್ಲೆಯಾದ್ಯಂತ ಬೆಳೆಯುತ್ತಿರುವ ನಿರುದ್ಯೋಗಿಗಳಿಗೆ ಅನುಕೂಲವಾಗುವಂತಹ ಯಾವುದಾದರೂ ಕಾರ್ಯಕ್ರಮ ಶಿಬಿರ (ವರ್ಕ್‌ಶಾಪ್) ನ್ನು ಹಮ್ಮಿಕೊಂಡಿದ್ದರೆ ಉದ್ದೇಶ ಸಫಲವಾಗುತ್ತಿತ್ತು. ಇಲ್ಲವೇ ಬರಗಾಲದಿಂದ ತತ್ತರಿಸಿರುವ ರೈತರಿಗಾಗಿ ಪರಿಹಾರೋಪಾಯ ಕಾರ್ಯಕ್ರಮ ಹಮ್ಮಿಕೊಂಡಿದ್ದರೆ ಉತ್ತಮವಾಗುತ್ತಿತ್ತು.

ದಾಂಡೇಲಿ ಕರಾವಳಿ ಉತ್ಸವದ ಅಂಗವಾಗಿ ಬೃಹತ್ ಮೊತ್ತದ ಖರ್ಚಿನಲ್ಲಿ ನಡೆದ ಸಾಂಸತಿಕ ಸಂಜೆ ಕಾರ್ಯಕ್ರಮ ಯಾರ ಹೊಟ್ಟೆ ಹೊ(ರೆ)ಡೆಯಲು ನಡೆಯಿತು ಎನ್ನುವ ದ್ವಂದ್ವಕ್ಕೆ ಬುದ್ದಿವಂತ ನಾಗರಿಕರೇ ಉತ್ತರಿಸಬೇಕಾಗಿದೆ.

ಬಿ.ಎನ್.ವಾಸರೆ

ಎಲ್ಲಿ ಅಡಗಿದೆ

ಬಲವಿದ್ದು ಬಡವಾದೋರೆ ಹಸಿವಿನಿಂದ ಅಸು ನೀಗಿದೋರೆ
ಸೊಲ್ಲೆತ್ತದೆ ಸೊರಗಿದೋರೆ ನೋವಿಂದ ನರಳಿದೋರೆ
ಎಲ್ಲಿ ಅಡಗಿದೆ ನಿಮ್ಮ ಧೈರ್ಯ ಹುದುಗಿದೆ ನಿಮ್ಮ ಶೌರ್ಯ

ದೋಚುವವರಿಗೆಲ್ಲ ಬಿಟ್ಟು ಕೈಕಟ್ಟಿ ನಿಂತೋರೆ
ಇತಿಹಾಸದ ಪುಟದಿಂದಲೇ ನಾಪತ್ತೆ ಹೊಂದಿದೋರೆ
ರಕ್ತ ಬಸಿದು ಕೆರೆಯ ಕಟ್ಟಿ ನೀರ ಕಾಣದ ನಿರ್ಭಾಗ್ಯರೆ
ಬೆವರ ಹರಿಸಿ ದುಡಿಮೆ ಮಾಡಿ ಭತ್ತ ಸಿಗದ ದುರ್ಭಾಗ್ಯರೆ

ನಿಮ್ಮ ನೆತ್ತರ ನೀರಿನಲ್ಲಿ ಬೆಳೆದು ನಿಂತ ಪಚ್ಚೆ ಪೈರು
ಉತ್ತು ಬಿತ್ತು ಬೆಳೆದ ಪಸಲ ಉಣ್ಣಲಾರದ ನತದೃಷ್ಟರು
ನಿಮ್ಮ ಬಲದಲೆ ಈ ಲೋಕ ನಡೆದರೂ
ದುಷ್ಟಶಕ್ತಿಯ ಮುಷ್ಟಿಯಡಿಯಲಿ ನಲುಗಿದೋರು
ನಾಯಿಗಿಂತ ಕೀಳೆನಿಸಿದೋರು ಹಂದಿಗಿಂತ ಹೊಲಸೆನಿಸಿದರೂ
ದುಡಿಮೆ ಮಾಡಲು ಶ್ರೇಷ್ಠರೆನಿಸಿಹ
ನೀವೇ ಭೂತಾಯಿಗೊಡೆಯರು

ಜೈಕುಮಾರ್.ಹೆಚ್.ಎಸ್
ಭೂತನ ಹೊಸೂರು - ಮಂಡ್ಯ

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH